This work is licensed under a Creative Commons Attribution-NonCommercial-NoDerivatives 4.0 International License.

FREE BOOK CULTURE

# ಹುಲ್ಲಿನ ಸಾರು

煩惱就是智慧




ಮೂಲ ಚೀನೀ ಕೃತಿ

**ಶಾಂಗ್ ಶಾನ್‌ಲಿಯಾಂಗ್**


ಇಂಗ್ಲಿಶಿಗೆ

**ಮಾರ್ಥಾ ಅವೇರಿ**

ಕನ್ನಡಕ್ಕೆ

**ಬೇಳೂರು ಸುದರ್ಶನ**


ಮಿತ್ರಮಾಧ್ಯಮ




**HULLINA SAARU** : Translation of GRASS SOUP, a book based on the diary entries by Zhang Xianliang (translated from Chinese into English by Martha Avery), translated with permission into Kannada by Beluru Sudarshana.

Online edition published by
**Mitramaadhyama**, 917 A (1044), Krishna, Upstairs, 1F Main, 2nd Phase, Girinagara, Bengaluru 560085, Karnataka, India.

**websites** mitramaadhyama.co.in, www.freebookculture.com
**email** beluru@mitramaadhyama.co.in

*First published 2004*
*Second online only edition February 2015*

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಲಾಗಿದೆ.
*This book is published as part of `Mitramaadhyama' Trust's campaign* ***FREE BOOK CULTURE***

**This work is licensed under a Creative Commons Attribution-NonCommercial-NoDerivatives 4.0 International License.**

# ಸಾರು ಹೀರುವ ಮುನ್ನ



## ಶಾಂಗ್ ಶಾನ್‌ಲಿಯಾಂಗ್!

ಸೆರೆಮನೆ ಸೇರಿದ್ದು 21ರ ಹರೆಯದಲ್ಲಿ. ಅಪರಾಧ? ಕವನ ಬರೆದದ್ದು.

1936ರಲ್ಲಿ ಹುಟ್ಟಿದ ಶಾಂಗ್ ಬರೆದ ಪುಸ್ತಕಗಳಲ್ಲಿ ಒಂದು 'ಗ್ರಾಸ್ ಸೂಪ್'. ಅಂದರೆ ಹುಲ್ಲಿನ ಸಾರು. ಅದೇ ಅವರ ಮತ್ತು ಸಹಖೈದಿಗಳ ದಿನದ ಆಹಾರ. ಅಥವಾ ಮೃಷ್ಟಾನ್ನ. ಅದೂ ಸಿಗದೆ ಚೀನಾದ ಮಹಾಬರಗಾಲದಲ್ಲಿ ಮೂರು ಕೋಟಿ ಜನ ಸತ್ತದ್ದು ಈಗ ಕರಾಳ ಇತಿಹಾಸ.

1956ರಲ್ಲಿ 'ಮಹಾ ಗಾಳಿಯ ಹಾಡು' ಬರೆದ ಅಪರಾಧಕ್ಕೆ ಶಾಂಗ್ ಬಲಪಂಥೀಯ ಎಂಬ ಹಣೆಪಟ್ಟಿ ಹೊತ್ತರು. ಸೆರೆಮನೆಗೆ ಬಂದು ಬಿದ್ದರು. ಕೊನೆಗೆ ಶಾಂಗ್ 'ಮರು ಆಶ್ರಯ' ಪಡೆದದ್ದು (ಅದು ಬಿಡುಗಡೆ ಅಲ್ಲ, ಯಾಕೆಂದರೆ ಆತ ಈವರೆಗೆ ಇದ್ದದ್ದು ಕಾರ್ಮಿಕ ಪರಿವರ್ತನಾ ಶಿಬಿರದಲ್ಲಿ ಎಂದು ಚೀನಾ ಸರ್ಕಾರ ಹೇಳುತ್ತದೆ!) 1979ರಲ್ಲಿ.

ಮನೆಗೆ ಬಂದ ಮೇಲೆ ಶಾಂಗ್ ಬರೆಯಲು ಕುಳಿತರು. ಮೊದಲು ಒಂದಷ್ಟು ಕಥೆಗಳು. 'ಕುರುಬನ ಕಥೆ' ಸಿನಿಮಾ ಕೂಡಾ ಆಯಿತು. ಆಮೇಲೆ 'ಮಿಮೋಸಾ' ಎಂಬ ಕಾದಂಬರಿ. ಅದರಲ್ಲಿ ಅವರೇ ನಾಯಕ. ಇಲಿಗಳು ಓಡಾಡುತ್ತಿದ್ದ ಆಹಾರವನ್ನು ರಕ್ಷಿಸಿ ತಲೆದಿಂಬಿನಲ್ಲಿ ಹೊಲೆದು ಕಾಲ ಕಳೆಯಬೇಕಾದ ಸ್ಥಿತಿಯಲ್ಲಿ ಅವರ ಭಾವುಕ ಮನಸ್ಸಿಗೆ ನೆರವಾದವಳು ಆ ಮಿಮೋಸಾ ಎಂದು ಶಾಂಗ್ ಕರೆದ ಹುಡುಗಿ.

'ಹುಲ್ಲಿನ ಸಾರು' ಎಂದರೆ ಶಾಂಗ್‌ರವರ ಸೆರೆಮನೆಯ ಅನುಭವಗಳು. ಅವನ್ನೆಲ್ಲ ಆತ ಒಂದು ಪುಸ್ತಕದಲ್ಲಿ ಸಾಂಕೇತಿಕವಾಗಿ ಗೀಚಿದ್ದರು. ಕೊನೆಗೆ ಯಾಕೋ, ಅದನ್ನು ಅಧಿಕಾರಿಗಳು ಸುಡಲಿಲ್ಲ. ಹೀಗಾಗಿ ಅರ್ಧ ಸುಟ್ಟುಹೋಗಿದ್ದ ಶಾಂಗ್ ಬದುಕಿನ ಪುಟಗಳು ನಮಗೆ ಸಿಕ್ಕಿವೆ.

ಕೆಲವೊಮ್ಮೆ ತುಂಡು ವಾಕ್ಯಗಳು. ಹಲವು ಸಲ ಕೇವಲ ಮೂರು ನಾಲ್ಕು ಪದಗಳು. ಅವುಗಳಲ್ಲಿ ಹೇಳದ ಸಂಗತಿಗಳು ಯಾವುವೆಂದು ಮೆದುಳನ್ನು ಶೋಧಿಸಿ ಶಾಂಗ್ ಬರೆದರು. ಉದಾಹರಣೆಗೆ ರಾತ್ರೋರಾತ್ರಿ ಇನ್ನೊಬ್ಬ ಖೈದಿ ಸತ್ತ ಎಂದಿದ್ದರೆ ಹಲವು

ಖೈದಿಗಳು ಈ ಹಿಂದೆ ಜೀವ ಬಿಟ್ಟಿದ್ದರು ಎಂದರ್ಥ. ಶಾಂಗ್ ಬರೆದ ಈ ಪುಸ್ತಕದ ಸಂಗ್ರಹರೂಪ ಇಲ್ಲಿದೆ.

ಈ ಪುಸ್ತಕವನ್ನು ಮೊದಲು ಓದಲು ಕೊಟ್ಟವರು ನನ್ನ ಆಪ್ತಮಿತ್ರ, ಎಷ್ಟೇ ದೂರದಲ್ಲಿದ್ದರೂ ಹಿತಮಿತ್ರನೆಂಬ ಅನುಭವ ನೀಡುವ ಶ್ರೀ ಗಣಪತಿ ಭಟ್ ಬಿದ್ರೆಪಾಲರವರು. 'ವಿಜಯ ಕರ್ನಾಟಕ'ದಲ್ಲಿ ಇದು ಧಾರಾವಾಹಿಯಾಗಿ ಪ್ರಕಟವಾಯಿತು.

ಈಗ? ಈ ಹೊತ್ತಿನಲ್ಲಿ ಶಾಂಗ್ ತನ್ನ ಮೂರು ತಲೆಮಾರುಗಳ ಕಥೆಯನ್ನು ದಿನಾಲೂ ಬರೆಯುತ್ತಿದ್ದಾರೆ. **(ಶಾಂಗ್ ಶಾನ್‌ಲಿಯಾಂಗ್‌ರವರು ಕ್ಯಾನ್ಸರ್ ರೋಗದಿಂದಾಗಿ 2014ರ ಸೆಪ್ಟೆಂಬರ್ 27ರಂದು ಕೊನೆಯುಸಿರೆಳೆದರು.)**

ಶಾಂಗ್‌ರವರ ಬಹುತೇಕ ಕೃತಿಗಳನ್ನು ಚೀನೀ ಭಾಷೆಯಿಂದ ಇಂಗ್ಲಿಶಿಗೆ ಅನುವಾದಿಸಿದವರು ಮಾರ್ಥಾ ಅವೇರಿ ಎಂಬಾಕೆ. ಈಗ ಬೀಜಿಂಗ್‌ನಲ್ಲಿ ಒಂದು ವಿಶ್ವವ್ಯಾಪಿ ಮಾಧ್ಯಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಮಾರ್ಥಾರನ್ನು ಇಂಟರ್‌ನೆಟ್ ಜಾಲದಲ್ಲಿ ಪಾತಾಳಗರಡಿ ಹಾಕಿ ಹುಡುಕಲು ನನಗೆ ಕೇವಲ ಎರಡು ವರ್ಷಗಳು ಹಿಡಿದವು! ಇತ್ತೀಚೆಗೆ 'ಹುಲ್ಲಿನ ಸಾರು' ಪುಸ್ತಕದ ಎರಡನೇ ಆವೃತ್ತಿ ಪ್ರಕಟಿಸಿದ ಡೇವಿಡ್ ಆರ್. ಗೊಡೈನ್ ಎಂಬ ಪ್ರಕಾಶನ ಸಂಸ್ಥೆಯು 'ಲೇಖಕರ ವಿಳಾಸ ತಿಳಿಸುವ ಸೌಜನ್ಯ ನಮಗಿಲ್ಲ' ಎಂದು ಪ್ರಾಮಾಣಿಕವಾಗಿಯೇ ತಿಳಿಸಿದ ಮೇಲೆ ದಾರಿ ಸಿಗುವುದಾದರೂ ಹೇಗೆ? ಆದರೂ ನನ್ನ ಇಂಟರ್‌ನೆಟ್ ಅನುಭವವನ್ನೇ ಪಣಕ್ಕಿಟ್ಟು, ನೂರಾರು ಗಂಟೆಗಳ ಕಾಲ ಜಾಲಾಡಿದೆ. ಕೊನೆಗೂ ಮಾರ್ಥಾ ಈಗ ಬೀಜಿಂಗಿನಲ್ಲಿ ಇದ್ದಾರೆ ಎಂಬ ಸುದ್ದಿಯನ್ನು ಅಮೆರಿಕಾದಲ್ಲಿ ಇರುವ ಜಾನ್ ಸ್ಟೀವನ್‌ಸನ್ ಎಂಬುವವರು ಈಮೈಲ್ ಮೂಲಕ ತಿಳಿಸಿ ಆಕೆಗೂ ನನ್ನ ಕಾಗದದ ಪ್ರತಿಯನ್ನು ಕಳಿಸಿದರು.

ಕಳೆದ ವಾರ ಮಾರ್ಥಾ ಅವೇರಿ ಈ ಮೇಲ್ ಬಂದಾಗ ರೋಮಾಂಚನ. ಕೊನೆಗೆ ಬೀಜಿಂಗಿಗೇ ಕರೆ ಮಾಡಿದೆ. ಆಕೆ ಸಾಕಷ್ಟು ಹೊತ್ತು ಮಾತನಾಡಿದರು. ಎಂಥ ಸೌಜನ್ಯ! ಅವರಿಗೆ ನನ್ನ ತುಂಬುಹೃದಯದ ಧನ್ಯವಾದಗಳು. 'ಶಾಂಗ್‌ರವರ ಎಲ್ಲ ಕೃತಿಗಳನ್ನೂ ನೀನು ಅನುವಾದಿಸಲು ಈ ದೂರವಾಣಿ ಮೂಲಕವೇ ಅನುಮತಿ ನೀಡುತ್ತಿದ್ದೇನೆ' ಎಂದು ಮಾರ್ಥಾ ಆ ಹೊತ್ತಿನಲ್ಲಿ ಘೋಷಿಸಿದರು.

'ಹುಲ್ಲಿನ ಸಾರು' ಕುಡಿಯಲು ನಿಮಗೆ ಇಷ್ಟು ಸಿದ್ಧತೆ ಸಾಕಲ್ಲವೆ?


**– ಬೇಳೂರು ಸುದರ್ಶನ**
20 ಏಪ್ರಿಲ್ 2004
beluru@beluru.com
www.beluru.com



# ಶಾಂಗ್ ಶಾನ್‌ಲಿಯಾಂಗ್

ಡಿಸೆಂಬರ್ 1936 – 27 ಸೆಪ್ಟೆಂಬರ್ 2014

# Chinese Labour Camp locations




By Marco L [GFDL (http://www.gnu.org/copyleft/fdl.html) or CC-BY-SA-3.0 (http://creativecommons.org/licenses/by-sa/3.0/)], via Wikimedia Commons



# ನನಗೆ ಬರೀ ಹಸಿವಾಗುತ್ತಿದೆ

## 1960 ಜುಲೈ 11

**ಬಂಡವಾಳ ನಿರ್ಮಾಣ**
**ಕೊಳಕು ಹೆಂಟೆಗಳನ್ನು ಎಳೆದೆ**

ನಾನು ದಿನಚರಿಯನ್ನು ಬರೆಯೋದಕ್ಕೆ ಆರಂಭಿಸಿದ್ದು ಇವತ್ತೇ ಯಾಕೆ ಎಂದು ನಂಗೊತ್ತಿಲ್ಲ. ನಾನು 'ಸುಧಾರಿತ'ವಾಗುತ್ತಿದ್ದ 'ತೋಟ'ದಲ್ಲಿ ಅಂಥಾ ಅಸಾಮಾನ್ಯವಾದ್ದೇನೂ ನಡೆಯಲಿಲ್ಲ. ನನ್ನನ್ನು ಇಲ್ಲಿಗೆ ಕರೆತಂದಿದ್ದು 1958ರ ಮೇ 18ರಂದು. ಅಂದ್ರೆ ಈಗಾಗಲೇ ಏಳುನೂರು ದಿನಗಳು ದಾಟಿವೆ.

ನಾನು ಇದಕ್ಕೆಲ್ಲ ಹೊಂದಿಕೊಂಡಿದೇನೆ. ಒಂಥರ ನಾನು ಇಲ್ಲೇ ಹುಟ್ಟಿ ಬೆಳೆದು ನನ್ನ ಜೀವನವನ್ನೆಲ್ಲ ಇಲ್ಲೇ ಕಳೆದ ಹಾಗೆ. ಒಂದು ಹರಿತವಾದ ಚಾಕು ನನ್ನ ಅಸ್ತಿತ್ವವನ್ನು ಮಧ್ಯದಲ್ಲಿಯೇ ಸೀಳಿಹಾಕಿದೆ. ಈಗ ನನಗೆ ಪ್ರಜ್ಞೆ ಇರುವ ನನ್ನ ದೇಹದ ಅರ್ಧ ಭಾಗವನ್ನು ಈ ಬಂಜರು ವ್ಯರ್ಥಭೂಮಿಯ ಮೇಲೆ ಬಿಸಾಡಿದ್ದಾರೆ. ನನ್ನ ಉಳಿದರ್ಧ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಹಾಗಂತ ನಾನು ಎಂದಾದರೂ ಸಂಪೂರ್ಣವಾಗಿದ್ದೆನಾ ಎಂಬ ಬಗ್ಗೆ

ನನಗೇ ಖಾತ್ರಿ ಇಲ್ಲ!ಭೂಮಿಯನ್ನು ಅಗೆಯುತ್ತ ಇರುವಾಗ ನನಗಾಗ್ತಾ ಇದ್ದದ್ದು ಕೇವಲ ಭೌತಿಕ ಸಂವೇದನೆ. ಏಳುನೂರು ದಿನಗಳ ಕಾಲ ನನ್ನನ್ನು ನಾನೇ ಗಾಸಿ ಮಾಡಿಕೊಂಡ ಮೇಲೆ ನಾನು ಮರಗಟ್ಟಿಹೋಗಿದ್ದೇನೆ.

ನನಗೀಗ ನೋವು ಅನುಭವಕ್ಕೆ ಬರುತ್ತಿಲ್ಲ.

ನನಗೆ ಬರೀ ಹಸಿವಾಗುತ್ತಿದೆ.

ಈ ತೆಳು ದಿನಚರಿ ಇಲ್ಲದೆ ಇದ್ದರೆ ನನ್ನ ಜೀವನದ ಈ ಭಾಗವೂ ನಿಜವೇ ಎಂದು ನಾನೇ ಅಚ್ಚರಿಪಡುತ್ತಿದ್ದೆ ಅಂತ ಕಾಣ್ಸುತ್ತೆ... ಜನರಿಗೆ ನೆನಪು ತೀರಾ ಕಡಿಮೆ. ಅವರು ಬರೀ ವರ್ತಮಾನದ ಜೊತೆಗಷ್ಟೇ ವ್ಯವಹರಿಸುತ್ತಾರೆ. ಅದು ನೋವಿರಲಿ, ನಲಿವಿರಲಿ, ಪರವಾ ಇಲ್ಲ. ಆದರೆ ವಿಷಯ ಗೊತ್ತ? ವರ್ತಮಾನ ಮತ್ತು ಅದರೊಳಗೆ ಇರುವ ಮನುಕುಲ – ಇವು ಗತಕಾಲದ ಪರಿಣಾಮಗಳೇ. ಮನುಷ್ಯರ ಬದುಕು ಒಂದು ಕುರುಹೂ ಇಲ್ಲದಂತೆ ಕಳೆದುಹೋಗುತ್ತದೆ. ಅವರು ಇಲ್ಲಿ ಜೀವಿಸಿರಲೇ ಇಲ್ಲವೇನೋ ಎಂಬಂತೆ. ಚೀನಾದಲ್ಲಿ ಇರುವ ಬಹುತೇಕ ಜನ ಈ ಮಾತನ್ನು ಒಪ್ಪಿಕೊಳ್ಳೋ ಧೈರ್ಯ ಮಾಡಲ್ಲ. ಅವರು ಗತಕಾಲವನ್ನು ಎದುರಿಸಲು ಧೈರ್ಯ ತೋರಲ್ಲ. ಹಾಗೇನೇ ಕೆಲವರು ವರ್ತಮಾನದ ಸಂಗತಿಗಳನ್ನು ಎದುರಿಸಲೂ ಬಯಸೋದಿಲ್ಲ. ಅದಕ್ಕೇ ನಾನು ನನ್ನ ದಿನಚರಿಯನ್ನು ಸಾಧ್ಯವಾದಷ್ಟೂ ಸಾರ್ವಜನಿಕಗೊಳಿಸಬೇಕು ಅಂತ ಬಯಸಿದೆ. ಜನ ಇದನ್ನು ಅರ್ಥ ಮಾಡಿಕೊಳ್ಳುವಂತೆ ನಾನು ಸಂದರ್ಭ–ವಿವರಣೆಗಳನ್ನೂ ನೀಡಬೇಕು ಎಂದುಕೊಂಡೆ, ಅಷ್ಟೆ.

ಜುಲೈ 11ರ ಈ ಸಂಜೆ ನಾನು ಕ್ಯಾಂಪಿನ ಅಂಗಡಿಯಿಂದ ತಂದ ಒಂದು ಚಿಕ್ಕ ದಿನಚರಿಯನ್ನು ತೆರೆದೆ. ಅದರಲ್ಲಿ ಏನೋ ಬರೆಯಬೇಕೆಂದು ಹೊರಟ ನಾನು ನನ್ನ ಕೈಯಲ್ಲಿ ಇದ್ದ ಪೆನ್ನನ್ನು ನೋಡಿ ಅಚ್ಚರಿಗೆ ಒಳಗಾಗಿದ್ದೇನೆ. ಬಹುಶಃ ನಾನು ಒಂದು ಪೆನ್ನಿನ ಒಡೆಯ ಎಂಬ ಸರಳ ಕಾರಣಕ್ಕಾಗಿಯೇ ನಾನು ಈ ದಿನಚರಿಯನ್ನು ಬರೀತಿರ್ಬೇಕು.

ಕಾರ್ಮಿಕ ಸುಧಾರಣಾ ಶಿಬಿರದಲ್ಲಿ ಒಂದು ಪೆನ್ನು ವ್ಯಾಪಾರದ ವಸ್ತುವಂತೂ ಅಲ್ಲವೇ ಅಲ್ಲ. ಯಾರಿಗೂ ಪೆನ್ನು ಬೇಕಿಲ್ಲ. ತಂಬಾಕಿನ ಒಂದು ಚಿಕ್ಕ ತುಂಡಿಗಾಗಲೀ, ಅಥವಾ ಒಂದು ಚಿಕ್ಕ ಸಪಾಟು ಬ್ರೆಡ್ಡಿಗಾಗಲೀ ಈ ಪೆನ್ನನ್ನು ವಿನಿಮಯ ಮಾಡಿಕೊಳ್ಳಲು ಯಾರೂ ತಯಾರಿಲ್ಲ ಬಿಡಿ. ಕಾರ್ಮಿಕ ಶಿಬಿರವೊಂದರಲ್ಲಿ ಒಂದು ವಸ್ತುವಿನ ವಿನಿಮಯ ಮೌಲ್ಯವು ಅದು ನೀವು ಬದುಕಲು ಎಷ್ಟು ಉಪಯುಕ್ತ ಅನ್ನೋದರ ಮೇಲೆ ಅವಲಂಬಿತ.

ಅಸ್ತಿತ್ವವನ್ನು ಉಳಿಸಿಕೊಳ್ಳಲು ಯಾವ ಉಪಯೋಗವೂ ಆಗದ ವಸ್ತುಗಳಿಗೆ ಬೆಲೆ ಸೊನ್ನೆ!

ಅತ್ಯಲ್ಪ ಆಹಾರದಿಂದ ಬದುಕುವುದಕ್ಕೆ ನನಗೆ ನೆರವಾಗುವ ಎಲ್ಲವನ್ನೂ ನಾನು ಅದಾಗಲೇ ವಿನಿಮಯ ಮಾಡಿಕೊಂಡಿದ್ದೆ,ಪೆನ್ನೊಂದನ್ನು ಬಿಟ್ಟು .ಅಷ್ಟಾಗಿ ಹಾಗೆ ಪಡೆದ ಆಹಾರವನ್ನೂ ತಿಂದು ಮುಗಿಸಿದ್ದೆ. ಒಳಗೆ 'ಜೀವ'ವನ್ನು ಹಿಡಿದುಕೊಂಡಿರೋ ದೇಹವನ್ನು ಅದರ ಅತಿಶುದ್ಧ ಭೌತಿಕ ಸ್ವರೂಪದಲ್ಲಿ ಸಂರಕ್ಷಿಸುವುದು ಮಾತ್ರವೇ ನನಗೆ ತೀರಾ ಮುಖ್ಯವಾಗಿದ್ದ ಸಂಗತಿ. ಈ ಜಗತ್ತಿನಲ್ಲಿ ಮನುಷ್ಯರು ಛಳಿಯನ್ನು ತಡೆದುಕೊಂಡು ನಗ್ನವಾಗಿ ಇರಬಹುದಾಗಿದ್ದರೆ, ಎಷ್ಟೋ ದಿನಗಳ ಹಿಂದೆಯೇ ನಾನು 'ತಿನ್ನಲು ಏನಾದರೂ ಸಿಗುತ್ತದೆ'

ಎಂದಮಾತ್ರಕ್ಕೆ ನನ್ನ ಪ್ಯಾಂಟುಗಳನ್ನು ಬಿಚ್ಚಿಕೊಟ್ಟುಬಿಡ್ತಿದ್ದೆ.

ನನ್ನ ಪೆನ್ನು ಆಮದು ಬ್ರಾಂಡಿನದು.ನನ್ನಲ್ಲಿದ್ದ ಕೆಲವೇ ವಸ್ತುಗಳ ನಡುವೆ ಅದು ಮಿನುಗುತ್ತಿತ್ತು.ನಾನು ಅದನ್ನು ಹಿಡಿದುಕೊಂಡಾಗ ಅದು ತನ್ನದೇ ಬಿಸಿಯನ್ನು ಹೊರಗೆ ಪಸರಿಸ್ತಾ ಇದೆ ಅನ್ನೋ ಭಾವ ನನ್ನಲ್ಲಿ . ಅದು ನಿಮ್ಮೆಲ್ಲ ಒಳಗನ್ನು ಬೆಚ್ಚಗೆ ಮಾಡುವ ಸಾಮರ್ಥ್ಯ ಇರುವಂಥ ಬಿಸಿ. ನಾನು ಒಂದು ಕಾಲದಲ್ಲಿ ಬೇರೆಯದೇ ಜಗತ್ತಿನಲ್ಲಿ ಬದುಕಿದ್ದೆ ಅನ್ನೋದನ್ನು ಈ ಪೆನ್ನು ನನಗೆ ನೆನಪು ಮಾಡಿಕೊಡುತ್ತಿತ್ತು. ನಿಜ, ಆ ಇನ್ನೊಂದು ಜಗತ್ತು ಎಷ್ಟೋ ಸಲ ನನ್ನ ಮನಸಿನೊಳಗೆ ಹಾದುಹೋಗಿದೆ. ಆದರೆ ಅದು ಈಗ ಭ್ರಮೆಯಂತೆ ಕಾಣುತ್ತೆ. ಅದು ಒಂದು ಬಗೆಯ ಅವರ್ಣನೀಯ ಖಿನ್ನತೆಯನ್ನೂ ತನ್ನೊಂದಿಗೆ ತರುತ್ತೆ. ಅದಕ್ಕಿಂತ ಮುಖ್ಯ, ನಾನು ಆ ಇನ್ನೊಂದು ಜಗತ್ತಿನಲ್ಲಿ ಕಲಿತ ಕುಶಲತೆಯನ್ನು ಈ ಜಗತ್ತಿನಲ್ಲೂ ಬಳಸಬಹುದು ಎಂಬುದನ್ನು ಈ ಪೆನ್ನು ನೆನಪು ಮಾಡಿಕೊಡ್ತಿದೆ. ಬದುಕಿ ಉಳಿಯುವ ಬೇರೆಲ್ಲಾ ಬಗೆಯ ಮಾರ್ಗಗಳು ನನಗೆ ಮುಚ್ಚಿರೋವಾಗ, ನಾನು ಈ ಪೆನ್ನನ್ನು ಬಳಸಿನೋಡೋ ಪ್ರಚೋದನೆಗೆ ಒಳಗಾದೆ.

ಈ ಹೊಳೆಯುವ ವಸ್ತು ಕಾರ್ಮಿಕ ಶಿಬಿರದಲ್ಲಿ ಖಂಡಿತ ಒಂದು ಅಸಂಬದ್ಧವಾಗಿ ಕಾಣಿಸುತ್ತೆ. ಅದು ತನ್ನ ಸುತ್ತಲಿನ ಸನ್ನಿವೇಶಕ್ಕೆ ತೀರಾ ಅಸಹಜವಾಗಿದೆ. ಹೀಗಿದ್ದೂ ಅದು ನನ್ನ ಇನ್ನೊಂದು ಜಗತ್ತಿನ ಜೊತೆಗಿನ ಏಕೈಕ ಸಂಪರ್ಕ ಸಾಧನವಾಗಿತ್ತು. ಅದರ ಹೊಳಪೇ ಒಂದು ಆಶಾಕಿರಣವಾಗಿತ್ತು.

ಬದುಕಿ ಉಳಿಯುವುದಕ್ಕೆಂದು ನಾನು ಪೆನ್ನನ್ನು ಬಳಸಿದೆ. ಈ ದಿನಚರಿಯನ್ನು ನಾನು ಕಾಲದ ಬಿರುಕಿನ ಕ್ಷಣಗಳಲ್ಲಿ, ಸಂದಿಗೊಂದಿಗಳಲ್ಲಿ, ನಾನು ಹೊಲದಲ್ಲಿ ಕೆಲಸ ಮಾಡದಿದ್ದಾಗ – ಅಥವಾ ಬೇರೇನನ್ನೋ ಬರೆಯದಿದ್ದಾಗ – ಬರೆದೆ. ನಾನು ಇದನ್ನು ಬರೆಯುತ್ತಿದ್ದಂತೆ, ನಾನು ಮೊಟ್ಟಮೊದಲು ಯೋಚಿಸಿದ್ದು ಆ ನಿರ್ದಿಷ್ಟ ದಿನದಂದು ಏನಾಯಿತು ಅಂತಲ್ಲ ; ಅಥವಾ ನನ್ನೊಳಗೆ ಗಟ್ಟಿಯಾಗುತ್ತಿದ್ದ ಚಿಂತನೆಗಳು ಏನು ಎಂಬುದೂ ಅಲ್ಲ. ಬದಲಿಗೆ, ನಾನು ಖಂಡಿತವಾಗಿಯೂ ಬರೆಯದೇ ಇರಬೇಕಾಗಿದ್ದ ಘಟನೆಗಳು ಅಥವಾ ಚಿಂತನೆಗಳೇ ನನಗೆ ಮೊಟ್ಟಮೊದಲು ನೆನಪಾಗುತ್ತವೆ. ನಾವು ಆ ಕಾಲದಲ್ಲಿ ಬದುಕುತ್ತಿದ್ದಾಗ ಇದ್ದ ಸಾಮಾಜಿಕ ಸನ್ನಿವೇಶಗಳು ಒಬ್ಬ ವ್ಯಕ್ತಿಯು ತನ್ನ ಖಾಸಗಿ ಚಿಂತನೆಯನ್ನು ಮತ್ತು ಖಾಸಗಿ ವಸ್ತುಗಳನ್ನು ಇಟ್ಟುಕೊಳ್ಳೋದಕ್ಕೆ ಬಿಡ್ತಿರಲಿಲ್ಲ. ಖಾಸಗಿಯಾಗಿದ್ದ ಪ್ರತಿಯೊಂದನ್ನೂ ಪಕ್ಷಕ್ಕೆ 'ಒಪ್ಪಿಸ'ಬೇಕಾಗಿತ್ತು. ಇದರಲ್ಲಿ ದಿನಚರಿಯೂ ಸೇರಿತ್ತು. ರಹಸ್ಯದ ಪ್ರಮಾಣ ಮತ್ತು ತಪ್ಪಿಸಿಕೊಳ್ಳುವ ಪ್ರಮಾಣ – ಇವುಗಳನ್ನು ಅವಲಂಬಿಸಿ ನಾಯಕರು ಒಬ್ಬಾತ ಪಕ್ಷಕ್ಕೆ ಹೊಂದಿರುವ ನಿಷ್ಠೆಯ ಮೌಲ್ಯಮಾಪನ ಮಾಡುತ್ತಿದ್ದರು. ತಾವಾಗಿಯೇ ತಮ್ಮ ಅತ್ಯಂತ ಹೇಳಲಾಗದ ರಹಸ್ಯಗಳನ್ನು ಒಪ್ಪಿಸಿದವರು ಅತ್ಯಂತ ನಿಷ್ಠರು.

ಇಂಥ ಪರಮ ನಿಷ್ಠೆಯನ್ನು, ಅನಂತ ನಿಷ್ಠೆಯನ್ನು ವ್ಯಕ್ತಪಡಿಸಲು ಕೆಲವರು ತಾವು ಎಂದೂ ಬಗೆಯದ ಪಕ್ಷವಿರೋಧಿ ಮತ್ತು ಸಮಾಜವಾದಿ ವಿರೋಧಿ ಚಿಂತನೆಗಳನ್ನು ಹೊಸೆಯುತ್ತಿದ್ದರು. ಇಂಥ ಜನರೇ ಸಾಮಾನ್ಯವಾಗಿ ಅತಿಹೆಚ್ಚು ಕಷ್ಟಕ್ಕೆ ಒಳಗಾಗುತ್ತಿದ್ದರು.

ಅವರನ್ನೆಲ್ಲ ಸುಧಾರಣೆಗಾಗಿ ಕಾರ್ಮಿಕ ಶಿಬಿರಗಳಿಗೆ ಎಸೆಯಲಾಗುತ್ತಿತ್ತು. ಇಂಥ 'ಚಿಂತನಾ ಅಪರಾಧಿಗಳ' ಸಮುದಾಯದಲ್ಲಿ ತಮ್ಮ ಚಿಂತನೆಗಾಗಿ ಶಿಕ್ಷೆಗೆ ಒಳಗಾದವರಲ್ಲಿ ಬಹುತೇಕ ಜನರು ಅಪರಾಧ ಎನ್ನಬಹುದಾದ ಕೆಲವು ಪದಗಳು ಅಥವಾ ವಾಕ್ಯಗಳಿದ್ದ ತಮ್ಮ ದಿನಚರಿಗಳನ್ನು ನಾಯಕರಿಗೆ ಒಪ್ಪಿಸಿದ್ದರು.

ತಾವು ಆತ್ಮವಂಚಕರಾಗಿ ಇರಬೇಕು ಎಂದು ಜನ ಅನುಭವದಿಂದಲೇ ಕಲಿತುಕೊಂಡಿದ್ದರು. ದೇಶದಲ್ಲಿ ರಾಜಕೀಯ ಆಂದೋಳನವು ಹರಡಿದಂತೆ, ಹೆಚ್ಚೆಚ್ಚು ಜನರು ಅದರಲ್ಲಿ ಪಾಲ್ಗೊಂಡಂತೆ,ಈ ಅನುಭವ ಸಾರ್ವತ್ರಿಕವಾಯ್ತು. ಎಷ್ಟರಮಟ್ಟಿಗೆ ಅಂದ್ರೆ ಅದು ಎಲ್ಲಾ ಚೀನೀಯರಲ್ಲಿ ಅಪ್ರಾಮಾಣಿಕತೆಯು ಒಂದು ಸಹಜ ಆಚರಣೆಯಾಯಿತು. ಈ ಅಪ್ರಾಮಾಣಿಕತೆಯು ನಮ್ಮ ದೈನಂದಿನ ಬದುಕಿನಲ್ಲಷ್ಟೇ ಸೇರಿಕೊಳ್ಳಲಿಲ್ಲ, ಅದು ನಮ್ಮ ನಂಬಿಕೆ ಮತ್ತು ಸಂಸ್ಕೃತಿಯ ಗುಣಮಟ್ಟದ ಮೇಲೂ ದುಷ್ಪರಿಣಾಮ ಬೀರಿತು.

ಆಗ ಮಾತ್ರ ಅಲ್ಲ... ಆಮೇಲೂ...

ಲಿಖಿತ ಪದಗಳು ಸಾಮಾನ್ಯವಾಗಿ ಕ್ರಾಂತಿವಿರೋಧಿ ಚಿಂತನೆಯನ್ನೇ ಬಯಲು ಮಾಡೋದ್ರಿಂದ, ಸಹಜವಾಗೇ ತನ್ನನ್ನು ತಾನು ಬಣ್ಣಿಸಿಕೊಳ್ಳಲಿಕ್ಕೆ ವ್ಯಕ್ತಿಯೊಬ್ಬ ಪದಗಳನ್ನೇ ಬಳಸಿಕೊಳ್ಳಬಹುದಾಗಿತ್ತು. ಮತ್ತೆ ತಮಗೇ ಉಪಯೋಗವಾಗೋ ಮಾಹಿತಿಯನ್ನು ನಾಯಕರಿಗೆ ತಲುಪಿಸಲು ಎಲ್ಲಾ ಬಗೆಯ ಬರವಣಿಗೆಯನ್ನು ಹೇಗೆ ಬಳಸಬೇಕೆಂಬುದನ್ನು ಅನುಭವವೇ ಜನರಿಗೆ ಕಲಿಸಿಕೊಟ್ಟಿತ್ತು. ಇದನ್ನು ಸಾಮಾನ್ಯವಾಗಿ ಅಪರೋಕ್ಷವಾಗಿ ಮಾಡುತ್ತಿದ್ದರು. ಅದು ಸಾಮಾನ್ಯ ಹುಸಿಸ್ಥಿತಿಯ ಇನ್ನೊಂದು ರೂಪವಾಗಿತ್ತು. ಆದ್ದರಿಂದ ಒಂದು ದಿನಚರಿಯು ಸ್ವಯಂಬಡ್ತಿಯ ಒಂದು ಕೆಲಸ ಅಂತಲೂ ಹೇಳಬಹುದು. ತನಗಾಗಿ ಬರೆದದ್ದಲ್ಲ, ಇತರರು ಓದಲು!

1960ರ ದಶಕದಲ್ಲಿ ಹುತಾತ್ಮರ ಮತ್ತು ಬದುಕಿ ಉಳಿದವರ ದಿನಚರಿಗಳನ್ನು ಚೀನಾದಲ್ಲಿ ಪ್ರಕಟಿಸಲಾಯ್ತು. ಇವುಗಳಲ್ಲಿ ಭಾರೀ ಸ್ಫೂರ್ತಿ, ಲೇಖಕರ ಪ್ರಗತಿಪರ ಚಿಂತನೆಗಳೇ ತುಂಬಿರುತ್ತಿದ್ದವು. ಆಮೇಲೆ ಅವುಗಳನ್ನು ನಾಯಕರು 'ಅಧ್ಯಯನ ವಿಷಯ' ಎಂದು ಶಿಫಾರಸು ಮಾಡಿ ಓದಲೇಬೇಕು ಎನ್ನುತ್ತಿದ್ದರು. ಲೇಖಕನೊಬ್ಬ ಕೇವಲ ತೋರಿಕೆಗಾಗಿ ಒಬ್ಬ ನೈಜ ವ್ಯಕ್ತಿಯಾಗಿ, ತನ್ನ ಆತ್ಮದ ಜೊತೆಗಿನ ಒಂದು ಸಂಗತಿಯನ್ನು ಕೇವಲ ತನಗಾಗಿ ತನ್ನ ಮನಸ್ಸಿನಲ್ಲೇ ಸರಿಪಡಿಸಿಕೊಳ್ತಾ ಇರೋ ಹಾಗೆ ಕಾಣುತ್ತಿದ್ದ.

ನಾನು ಹುತಾತ್ಮ ಅಥವಾ ನಾಯಕನಾಗಬೇಕು ಎಂದು ಬಯಸಿರಲಿಲ್ಲ ಬಿಡಿ. ಆದರೆ ನಾನು ಈ ದಿನಚರಿಯನ್ನು ಬರೆದು ಯಾವುದೇ ತೊಂದರೆಗೆ ಸಿಕ್ಕಿಕೊಳ್ಳೋದಕ್ಕೂ ಬಯಸಿರಲಿಲ್ಲ. ನಾನು ಅದನ್ನು ಬರೆಯಲು ನಿರ್ಧರಿಸಿದ್ದರಿಂದ ಈ ದಿನಚರಿಯು ಯಾರದ್ದಾದರೂ ಕೈಗೆ ಸಿಕ್ಕಿಬೀಳಬಹುದು ಎಂಬ ಸಾಧ್ಯತೆಗೆ ನಾನು ಸಿದ್ಧನಾಗಬೇಕಾದ್ದು ಅನಿವಾರ್ಯವಾಗಿತ್ತು. ಅದರಲ್ಲಿ ನಾನು ಮಾಡಿದ ಟಿಪ್ಪಣಿಗಳನ್ನು ಹೇಗೆ ವಿವರಿಸಬೇಕಾಗುತ್ತೆ, ಹೇಗೆ ನಾನು ಅವುಗಳಿಗೆಲ್ಲ 'ಸುರಕ್ಷಿತ'ವಾಗಿ ಹೊಣೆಗಾರನಾಗಬಲ್ಲೆ ಎಂದು ನಾನು ಯೋಚಿಸಬೇಕಾಗಿತ್ತು. ಆದ್ದರಿಂದಲೇ ಈ ದಿನಚರಿಯು ಒಂದು ಲೆಡ್ಜರಿಗಿಂತ ಭಿನ್ನವಾಗೋ ಹಾಗಿರಲಿಲ್ಲ.

ಆಮೇಲೆ ನಿಜವಾಗಿಯೂ ಈ ದಿನಚರಿಯನ್ನು 'ಒಂದು – ಹೊಡೆತ – ಮೂರು – ಪ್ರತಿಹೊಡೆತ' ಚಳವಳಿ ಎಂದೇ ಹೆಸರಾದ ಒಂದು ರಾಜಕೀಯ ಚಳವಳಿಯ ಹೊತ್ತಿನಲ್ಲಿ ಮುಟ್ಟುಗೋಲು ಹಾಕಿಕೊಂಡರು. ಅದನ್ನು ಪರಿಶೀಲಿಸಿದ ಮೇಲೆ, ನಾನು ಆಗ ಕೆಲಸ ಮಾಡುತ್ತಿದ್ದ ಸರ್ಕಾರಿ ಹೊಲದ ನಾಯಕರು ಯಾವುದೇ ಗಂಭೀರ ಸಮಸ್ಯೆಯನ್ನು ಹುಡುಕೋದ್ರಲ್ಲಿ ವಿಫಲರಾದರು. ಆದ್ದರಿಂದ ಅವರು ನನ್ನನ್ನು ಶಿಕ್ಷೆಗೆ ಒಳಪಡಿಸಿದಾಗ ದಿನಚರಿಯು ಒಂದು ಅಪರಾಧದ ಸಾಕ್ಷ್ಯವಾಗಲಿಲ್ಲ.

ನಾನು ಮತ್ತು ದಿನಚರಿ – ಎರಡೂ ಅಸ್ತಿತ್ವದಲ್ಲಿ ಇರಲು ಅನುಮತಿ ಸಿಕ್ಕಿತು !

ಇಂದು ಈ ಲೆಡ್ಜರ್ ಥರದ ಗುಣವೇ ನನ್ನ ಕೆಲಸವನ್ನು ಇನ್ನಷ್ಟು ಕಷ್ಟಕ್ಕೆ ತಳ್ಳಿದೆ. ಉತ್ತರ ವೀ ಮನೆತನದ ಲೀ ದಾವೋ ಯಾನ್ (ಕ್ರಿ.ಶ.386–534) ತನ್ನ ಸುಪ್ರಸಿದ್ಧ 'ನೋಟ್ಸ್ ಆನ್ ದಿ ವಾಟರ್ ಕ್ಲಾಸಿಕ್' ಪುಸ್ತಕವನ್ನು ಬರೆದು ಮುಗಿಸಿದಾಗ ಅದರ ವಿವರಗಳನ್ನು ಪರಾಮರ್ಶೆ ಮಾಡುತ್ತ ಹಲವು ವರ್ಷಗಳನ್ನು ಕಳೆದನಂತೆ. ಆದರೆ ನೆನಪಿನಲ್ಲಿರುವ ಘಟನೆಗಳನ್ನು ಉತ್ಖನನ ಮಾಡೋದು ಪ್ರಾಚೀನ ಗ್ರಂಥಗಳಲ್ಲಿ ಹುಡುಕಾಟ ನಡೆಸೋದಕ್ಕಿಂತ ಕಷ್ಟ! ನನ್ನ ಜೀವನದ ಆ ಅವಧಿ ಒಂದು ಕನಸಿನಂತೆ, ಮಂಜು ಮುಸುಕಿದ ಹಾಗೆ ಮಬ್ಬು – ಆಗ ಇದ್ದ ವಾಸ್ತವವನ್ನು ಮತ್ತೆ ಕಾಣುವಂತೆ ಮಾಡಲು, ನಾನು ನನ್ನ ಮನಸ್ಸು ಗತಕಾಲಕ್ಕೆ ಇಣುಕಿ ನೋಡಲು, ಈ ವರ್ತಮಾನದಿಂದ ವಿಚ್ಛೇದನ ತೆಗೆದುಕೊಂಡ್ರೆ ಸಾಕಾಗಲ್ಲ; ಗತಕಾಲದ ಯಾತನೆಯನ್ನು ನಾನು ಮತ್ತೆ ಅನುಭವಿಸಬೇಕು.

ಒಂದು ಐತಿಹಾಸಿಕ ದಾಖಲೆಯನ್ನು ಸಂದರ್ಭಸಹಿತ ವಿವರಿಸಲು ದೇಹ ಮತ್ತು ಮನಸ್ಸನ್ನು ಹಿಂಸೆಗೆ ಗುರಿಪಡಿಸಿಕೊಳ್ಳೋ ತಾಪತ್ರಯಕ್ಕೆ ಬಹುತೇಕ ಪಂಡಿತ ಲೇಖಕರು ಹೋಗಲ್ಲ. ಹೀಗಿದ್ದೂ ನಾನು ನನ್ನ ದಿನಚರಿಯನ್ನು ವಿವರವಾಗಿ ಬರೀಲಿಲ್ಲ ಎಂದು ನನಗೆ ಖುಷಿಯಾಗ್ತಿದೆ. ನಾನು ಅಲ್ಲಿ ಒಂದು ಪದವನ್ನು ಹೆಚ್ಚಿಗೆ ಸೇರಿಸಿದ್ದರೂ ನಾನು ಈಗ ಇಲ್ಲಿ ಈ ದಿನ ಶಾಂತಿಯುತವಾಗಿ ಕೆಲಸ ಮಾಡ್ತಾ ಇರೋದಕ್ಕೆ ಆಗ್ತಿರ್ಲಿಲ್ಲ. ಯಾವಾಗ್ಲೋ ಈ ದಿನಚರಿಯು ಸತ್ತುಹೋದ ವ್ಯಕ್ತಿಯ ಕಡತದ ಭಾಗವಾಗಿರ್ತಿತ್ತು.

ಅದು ಎಂದೋ ನಾಶವಾಗಿಬಿಡ್ತಿತ್ತು!

ಈ ದಿನಚರಿಯನ್ನು 1970ರಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದರು. ಆಮೇಲೆ ಪರೀಕ್ಷಕರು ಅದರ ಮೇಲೆ ಪ್ರಶ್ನೆಗಳನ್ನು ಗೀಚತೊಡಗಿದರು. ಈ ದಿನದವರೆಗೂ ಅವರು ನನ್ನನ್ನು ಪಾಟೀಸವಾಲಿಗೆ ಯಾಕೆ ಗುರಿ ಮಾಡಲಿಲ್ಲ ಅಂತ ಗೊತ್ತಿಲ್ಲ. ಈ ಗುರುತುಗಳನ್ನು ಅವರು ಎಲ್ಲಿ ಮಾಡಿದರು ಎಂದು ನಾನು ಉಲ್ಲೇಖಿಸ್ತೇನೆ. ಆದರೆ ಅಂಥ ಗುರುತುಗಳು ಕೇವಲ ಎರಡು ಕಡೆಗಳಲ್ಲಿ ಮಾತ್ರ ಇದ್ದವು ; ಈ ದಿನಚರಿಯನ್ನು ಎಷ್ಟು ಎಚ್ಚರಿಕೆಯಿಂದ ಬರೆದೆ ಅನ್ನೋದಕ್ಕೆ ಇದೇ ನಿದರ್ಶನ.

1980ರಲ್ಲಿ ನನಗೆ ಪುನರಾಶ್ರಯ ನೀಡಿದ ಮೇಲೆ ಇತರೆ ದಾಖಲೆಗಳ ಜೊತೆಗೆ ನನಗೆ ಈ ದಿನಚರಿಯನ್ನೂ ಕೊಟ್ಟರು. ದಕ್ಷತೆಯ ದಾಖಲೆಗಳು, ಸ್ವಯಂ ಪರೀಕ್ಷೆಗಳು, ನನ್ನ ಬಗ್ಗೆ ಮಾಹಿತಿ ನೀಡುವ ಇತರ ಜನರ ಹೇಳಿಕೆಗಳು, ದೂಷಣೆಗಳು – ಎಲ್ಲವನ್ನೂ ಸರ್ಕಾರಿ

ಆದೇಶಗಳ ಅನುಸಾರ ನನ್ನ ಕಣ್ಣುಗಳ ಎದುರೇ ಸುಟ್ಟು ಹಾಕಿದರು. ಈ ದಿನಚರಿಗೆ ವಿನಾಯ್ತಿ ಕೊಡಿ, ಉಳಿಸಿಕೊಳ್ಳುತ್ತೇನೆ ಎಂದು ನಾನು ಅಂಗಲಾಚಿದೆ.

ಈಗ ಇದೊಂದೇ ನಾನು ನನ್ನ ಮಾಜಿ ಜಗತ್ತಿನ ಜೊತೆ ಇಟ್ಟುಕೊಂಡಿರುವ ಸಂಪರ್ಕ.

ಕಠಿಣ ಕೆಲಸದಲ್ಲಿ ಕಳೆದುಹೋದ ನನ್ನ ಜೀವಿತದ ಆ ಅಪೂರ್ವ ವಸಂತಕಾಲವು ಇದಕ್ಕಿಂತ ಹೆಚ್ಚಿನದೇನನ್ನೂ ಬಿಂಬಿಸೋದಿಲ್ಲವೆ? ಹಳದಿ ಬಣ್ಣಕ್ಕೆ ತಿರುಗಿದ ಪುಟಗಳು, ಮಾಸಿಹೋದ ಇಂಕಿನಲ್ಲಿ ಕಾಣುವ ಅಕ್ಷರಗಳು ನನ್ನನ್ನು ಒಂದೊಂದಾಗಿ ಗತಘಟನೆಗಳಿಗೆ ಕರೆದೊಯ್ಯುತ್ತಿವೆ. ಈ ಘಟನೆಗಳೇ ನಿಜಕ್ಕೂ ನನ್ನ ಬದುಕನ್ನೇ ರೂಪಿಸಿವೆ ಎಂದು ಅನುಮಾನಪಡಲು ಸಾಧ್ಯವೇ ಇಲ್ಲದಂತೆ ಮಾಡಿವೆ. ನಾನು ಗತಕಾಲದ ಮೇಲೆ ತೀರ್ಪು ಕೊಡೋದಕ್ಕೆ ಹೋಗಲ್ಲ. ಈಗಷ್ಟೇ ನನಗೆ ಸಿಕ್ಕಿದ ಮಾಹಿತಿಗಳನ್ನೂ ನಾನು ಈ ಟಿಪ್ಪಣಿಗಳನ್ನು ವಿಸ್ತರಿಸಲೆಂದು ಬಳಸಲಿಕ್ಕೂ ಹೋಗೋದಿಲ್ಲ. ಈ ದಿನಚರಿಯು ಒಂದು ಮೂಲಪ್ರತಿಯಂತೆ ನಿಲ್ಲಬೇಕು, ಜಗತ್ತು ಎಂಥ ಕಂದರಕ್ಕೆ ಬೀಳಬಹುದು ಅಂತ ಜನರಿಗೆ ಹೇಳ್ತಾ ಇರಬೇಕು ಅಂತಲೇ ಬಯಸ್ತೇನೆ. ತಳವೇ ಇಲ್ಲದ ಲೌಕಿಕ ಮತ್ತು ಆಧ್ಯಾತ್ಮಿಕ ಮಟ್ಟದಲ್ಲೂ ಜನ ಹೇಗೆ ಬದುಕುತ್ತಾರೆ ಎಂದು ಈ ದಿನಚರಿ ಹೇಳಬೇಕು ಅಂತ್ಲೇ ನಾನು ಬಯಸ್ತೇನೆ.





# ಮುದ್ದೆ ಹೊತ್ತ ಬೆನ್ನು ಗಂಟಲಲ್ಲಿ ಸಿಹಿರುಚಿ

ಮೊದಲ ದಿನಕ್ಕೇ ಮತ್ತೆ ಹೋಗಬೇಕಂದ್ರೆ, 11 ಜುಲೈ 1960.

ಈ ದಿನದ ಟಿಪ್ಪಣಿಯಾಗಿ ನಾನು ಬರೆದ 'ಬಂಡವಾಳ ನಿರ್ಮಾಣ' ಎಂದರೆ ಬೇರೇನಲ್ಲ, ಮನೆ ಕಟ್ಟೋದು. ಹಸಿವಿನಿಂದ ಬಳಲ್ತಿರೋವಾಗ, ಖೈದಿಗಳು ಹೊತ್ತುಹೊತ್ತಿಗೆ ಸಾಮೂಹಿಕವಾಗಿ ಸಾಯ್ತಿರೋವಾಗ ಮನೆ ಕಟ್ಟೋದು ಯಾಕೆ ಎಂದು ಯಾವ ಸುಳಿವೂ ಸಿಕ್ಕಿರಲಿಲ್ಲ. ಈಶಾನ್ಯದಲ್ಲಿ ಜುಲೈ ತಿಂಗಳು ಎಂದರೆ ಸಾಮಾನ್ಯವಾಗಿ ಜಡಕಾಲ.ಚಳಿಗಾಲದ ಬೆಳೆ ಬಿತ್ತಿರುತ್ತಾರೆ. ಹಿಂದೆಲ್ಲ ರೈತರು ಈ ಕಾಲವನ್ನು ದಣಿವಾರಿಸಿಕೊಳ್ಳಲು ಬಳಸುತ್ತಿದ್ದರು. ಕುರುಚಲುಗಳ ನೆರಳಿನಲ್ಲಿ, ತೊರೆಗಳ ಪಕ್ಕದಲ್ಲಿ ಅವರು ತಮ್ಮನ್ನು ಉಳಿಸಿದ ನೆಲದ ಮೇಲೆ ದೇಹವನ್ನು ಚಾಚುತ್ತಿದ್ದರು. ಕವಿಗಳು ಇದನ್ನೇ ನೋಡುತ್ತ ಪದಗಳಲ್ಲಿ, ತಾವೇ ತೀರಾ ಹತಾಶರಾದಾಗ ಈ ದೃಶ್ಯವನ್ನು ಸೆರೆಹಿಡಿಯುತ್ತಿದ್ದರು. ಅಂಥ ಚಿಕ್ಕ ಕೃಷಿಗ್ರಾಮಗಳು ಚೀನೀಯರ ಪಾಲಿಗೆ ಯಾವಾಗಲೂ ಒಂದು ಕಳೆದುಹೋದ ಸ್ವರ್ಗದ ಹಾಗೆ.

ಆದರೆ ಹೊಲಗಳನ್ನು ಕಮ್ಯೂನ್‌ಗಳಾಗಿ ಬದಲಿಸುವ ನೀತಿಯು ಜಾರಿಯಾದಾಗ ಕೃಷಿಕರಿಗೆ ಒಂದು ದಿನವೂ ಆರಾಮು ಸಿಗಲಿಲ್ಲ. ಆಗಿನಿಂದ, ಕಾರ್ಮಿಕ ಸುಧಾರಣಾ ಶಿಬಿರಗಳಲ್ಲಿ ಇದ್ದ

ಖೈದಿಗಳನ್ನು ಬಿಡಿ, ರೈತರಿಗೂ ವರ್ಷದ ಮುನ್ನೂರಾ ಅರವತ್ತೈದು ದಿನಗಳಲ್ಲಿ ಒಂದು ದಿನವೂ ವಿಶ್ರಾಂತಿಯಿಲ್ಲ. ಕಠಿಣ ದುಡಿಮೆಯೇ ಮನುಷ್ಯನ ಚಿಂತನೆಯನ್ನು ಸುಧಾರಿಸುವ ಎಂದೇ ಮಾರ್ಗ ಅನ್ನೋದೇ ಆಗಿನ ಲೆಕ್ಕಾಚಾರ. ದುಡಿಮೆಯನ್ನು ಒಂದು ದಿನದ ನಂತರ ನಿಲ್ಲಿಸಲು ಬರೋದಿಲ್ಲ ಸ್ವಾಮಿ!

ವೈದ್ಯರು ಶಿಫಾರಸು ಮಾಡಿದ ಔಷಧಿಯ ಹಾಗೆ!

ಹವಾಮಾನ ಮಾತ್ರ ತುಂಬಾ ಚೆನ್ನಾಗಿತ್ತು. ಜನ ಹಸಿವಿನಿಂದ ಬಳಲುತ್ತಿದ್ದರು, ಆದರೆ ಹಾಗಂತ ಸೂರ್ಯನೇನೂ ಕಡಿಮೆ ಬಿಸಿ ಮುಟ್ಟಿಸುತ್ತಿದ್ದ ಎಂದೇನಲ್ಲ. ಸೂರ್ಯ ಎಂದಿನಂತೆ ತುಂಬಿಕೊಂಡಿದ್ದ. ನಾನು ಯಾವಾಗಲೂ ಆ ಮಾಲಿನ್ಯರಹಿತ ನೀಲಿ ಆಕಾಶವನ್ನು, ಆ ಸ್ವಚ್ಛಂದ ಹಗುರ ಮೋಡಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಅಂಥ ಆಕಾಶವನ್ನು ನಾವು ನೋಡೋದೇ ಅಪರೂಪ. ನಾವು ಈ ಮನೆಯನ್ನು ಕಟ್ಟಲು ಹೋಗುತ್ತಿದ್ದ 'ನಿರ್ಮಾಣ ಕ್ಷೇತ್ರ'ದಿಂದ, ಅಂದರೆ ಒಂದು ದಿಬ್ಬದ ಮೇಲಿನಿಂದ ನೀವು ಕಪ್ಪು-ಹಸಿರು ಸ್ಯಾಟಿನ್ ಥರ ಭತ್ತದ ಹೊಲಗಳು ಮಿಂಚುವುದನ್ನು ಕಾಣಬಹುದು. ಆ ಹೊಲದ ಪರಿಮಳವನ್ನು ಹೊತ್ತುಕೊಂಡು ಬಿಸಿಗಾಳಿ ಬೀಸಿ ಬರುತ್ತಿತ್ತು. ನಮಗೆ ಸುಸ್ತು ಕಡಿಮೆಯಾಗುವಂತೆ ಮಾಡುತ್ತಿತ್ತು. ನಾನು ದಿನಚರಿಯನ್ನು ಬರೆಯಲು ಆರಂಭಿಸಿದ್ದಕ್ಕೂ ಇದೇ ಕಾರಣ ಇರಬಹುದು.

> **'ಸೋದರರೆ, ನೆಲದ ಹಾರೆಕೋಲೆತ್ತಿ**
> **ಬಲವಾಗಿ ಹೊಡೆಯಿರಿ!**
> **ಬಲವಾಗಿ ಹೊಡೀದಿದ್ರೆ ನೀವು ಸೂಳೇಮಕ್ಕಳು !'**

ಹವಾಮಾನ ಚೆನ್ನಾಗಿದ್ದರಿಂದ ನಾಯಕರು ಬಿಡುಗಡೆ ಮಾಡುತ್ತಿದ್ದ ಪ್ರಚಾರ ವಾರ್ತೆಗಳನ್ನು ಮಾತ್ರ ನಂಬಲಿಕ್ಕೇ ಸಾಧ್ಯವಾಗುತ್ತಿರಲಿಲ್ಲ. 'ನಿರಂತರ ನೈಸರ್ಗಿಕ ವಿಕೋಪಗಳಿಂದಾಗಿ ಧಾನ್ಯದ ಉತ್ಪಾದನೆ ಕುಗ್ಗಿದೆ. ಆದ್ದರಿಂದ ನಾವು 'ಸೋರೆಕಾಯಿ – ಮತ್ತು – ಹಸಿರು ತರಕಾರಿ – ಬದಲಿಗೆ – ಕಡಿಮೆ – ಪಡಿತರ – ಬಳಕೆ – ಮಾಡುವ' ನೀತಿಯನ್ನು ಸ್ಥಾಪಿಸುತ್ತಿದ್ದೇವೆ' ಎಂದು ಅವು ಹೇಳುತ್ತಿದ್ದವು. ಅದು ಎಷ್ಟೇ ಅಸಂಬದ್ಧವಾಗಿ, ಎಷ್ಟೇ ವಿಚಿತ್ರವಾಗಿ ಕಂಡರೂ ಇದಕ್ಕೆ ವಿವರಣೆ ಕೊಡಿ ಎಂದು ಯಾರೂ ನಾಯಕರನ್ನು ಕೇಳುವ ಧೈರ್ಯ ಮಾಡಲಿಲ್ಲ. ಪ್ರತಿಯೊಬ್ಬರೂ ಈ ಹೇಳಿಕೆಯನ್ನು ನಂಬಬೇಕಾಯಿತು. ದೇಹದಲ್ಲಿ ಅಳಿದುಳಿದಿದ್ದ ಶಕ್ತಿಯನ್ನು ಕಠಿಣ ದೈಹಿಕಶಿಕ್ಷೆ ಯನ್ನು ತಡೆದುಕೊಳ್ಳಲಿಕ್ಕೆ ಮಾತ್ರವೇ ಬಳಸುತ್ತಿದ್ದೆವು.

ವರ್ಷಗಳ ನಂತರ, ಚೀನೀ ಜನರು ಹೇಗೆ ಮೂರು ಸಂಪೂರ್ಣ ವರ್ಷಗಳ ಕಾಲ ಒಟ್ಟಿಗೇ ಬರಗಾಲದ ನರಕದಲ್ಲಿ ಮುಳುಗಿಹೋಗಿದ್ದರು ಎಂದು ನನಗೆ ಕೊನೆಗೂ ಅರ್ಥವಾಯ್ತು*. ಇದಕ್ಕೆ ನಿಜವಾದ ಕಾರಣಗಳೇನು ಎಂದು ನಮಗೆ ತಿಳಿದದ್ದು ತೀರಾ ತಡವಾಗಿ. ನಮಗೆ ಕಸಿವಿಸಿಯೇನೂ ಆಗಲಿಲ್ಲ.ಅವು ಒಂದು ದುರಂತಕ್ಕಿಂತ ಹೆಚ್ಚಾಗಿ ಒಂದು ಪ್ರಹಸನದಂತೆ ಕಂಡವು.

ಕಾರ್ಮಿಕ ಸುಧಾರಣಾ ಖೈದಿಗಳನ್ನು ಅವರ ಮೂಲ ಕಾರ್ಯಘಟಕಗಳಲ್ಲಿ 'ಬಿಸಿ ಚಿಕಿತ್ಸೆಗೆ' ಗುರಿ ಮಾಡಲಾಗಿತ್ತು. ಮಿಶ್ರಲೋಹದಂತೆ ಅವರು ಕಾರ್ಮಿಕ ಸುಧಾರಣೆಗಾಗಿ ಕೆಲಸ ಮಾಡಲು ಸೂಕ್ತವಾದ ಎಲ್ಲಾ ಗುಣಗಳನ್ನೂ ತುಂಬಿಸಿಕೊಂಡಿದ್ದರು. ಹಲವರಂತೂ ಹೀಗೆ ಬಿಸಿ ಚಿಕಿತ್ಸೆಯಿಂದ ದೂರದಲ್ಲಿ ಶಿಬಿರದಲ್ಲಿ ಇರುವುದಕ್ಕೆ ಅದೃಷ್ಟವಂತರು ಎಂದು ಭಾವಿಸಿದ್ದರು. ಕಾರ್ಮಿಕ ಶಿಬಿರಕ್ಕೆ ಬರೋದು ಅಂದ್ರೆ ಒಂದು ಬಗೆಯ ಹಿತವಾದ ಬದಲಾವಣೆ. ಕುರುಡನೊಬ್ಬ ಒಂದೇ ಹಲಗೆಯ ಸೇತುವೆಯಿಂದ ಆಳವಿಲ್ಲದ ಚರಂಡಿಗೆ ಬಿದ್ದಾಗ ತುಂಬಾ ಕೃತಜ್ಞನಾದಂತೆ ಖೈದಿಗಳು ನಿರಾಳ.ಬಿಸಿ ಚಿಕಿತ್ಸೆಯ ಸಮಯದಲ್ಲಿ 'ಟೀಕೆಗೆ ಒಳಗಾಗುವ ಮತ್ತು ವಿರೋಧಿ ಸಂಘರ್ಷ ಮಾಡುವ' ಕೆಲಸಕ್ಕಿಂತ ಬೇರೆ ಎಲ್ಲವೂ ಒಳ್ಳೆಯದೇ. ಅದಕ್ಕಿಂತ ಮೊದಲು, ಸಾವಿರಾರು ಅಡಿಯ ಪ್ರಪಾತವೇ ಅವರ ಮುಂದೆ ಬಾಯಿ ತೆರೆದು ಆಕಳಿಸುತ್ತ ನಿಂತಿತ್ತು.

ಅದರಿಂದಲೇ ಬಚಾವಾಗಿರುವಾಗ ಮತ್ತಿನ್ನೇನು ಬೇಕು ಹೇಳಿ?

ಮನೆಯನ್ನು ಕಟ್ಟೋದು ಅಂದ್ರೆ ನೀರು ಮತ್ತು ಮಣ್ಣನ್ನು ಕಲೆಸಿ ಮಣ್ಣಿನ ಮುದ್ದೆಗಳನ್ನು ಗೋಡೆಯನ್ನಾಗಿ ಪೇರಿಸೋದು ಅಷ್ಟೆ. ಆಮೇಲೆ ಕೆಲವು ಹಲಗೆಗಳನ್ನು ಮತ್ತು ಒಂದು ಹುಲ್ಲಿನ ಛಾವಣಿಯನ್ನು ಅದರ ಮೇಲೆ ಹಾಕುವುದು. ಮನೆ ಎಂದರೆ ಹೆಚ್ಚೇನಲ್ಲ, ಗಾಳಿ ಮತ್ತು ಮಳೆಯಿಂದ ರಕ್ಷಣೆ ನೀಡುವ ಚೌಕಾಕಾರದ ತಾಣ.'ಡೇಖಿಂಗ್ ನಿಂದ ಕಲಿಯುವುದು' ಎಂಬ ಪದಪುಂಜವನ್ನು ಆಮೇಲೆ ಜಾರಿಗೆ ತರಲಾಯಿತು. ಇದಕ್ಕೆ ಆ ಈಶಾನ್ಯ ಪ್ರದೇಶದ ಆಡುಭಾಷೆಯ ಪದವನ್ನೇ ನೀಡಲಾಯಿತು. ಅದೇ ಗಾಂದಲೀ, ಅಥವಾ 'ಮುದ್ದೆರಾಶಿ'.

'ಕೊಳಕು ಹೆಂಟೆಗಳನ್ನು ಎಳೆಯುವುದು' ಎಂದರೆ ತೀರಾ ಸಲೀಸು. ನಾವು ಇಟ್ಟಿಗೆಯ ಬದಲಿಗೆ ಬಳಸುತ್ತಿದ್ದ ಮಣ್ಣಿನ ಮುದ್ದೆಗಳನ್ನು ಸುಡುತ್ತಿರಲಿಲ್ಲ. ಗುದ್ದಲಿಯಿಂದ ಮಣ್ಣನ್ನು ತೆಗೆದು ಒಣಗಿಸುತ್ತಿದ್ದೆವು. ಪ್ರತಿಯೊಂದೂ ವಿಚಿತ್ರ ಆಕಾರದಲ್ಲಿ ಇರುತ್ತಿತ್ತು. ಇಟ್ಟಿಗೆ ಅಂತ ಕರೆಯೋ ಬದಲು ಮುದ್ದೆ ಎಂದಷ್ಟೆ ಕರೆದರೆ ಸಾಕು. ಪ್ರತಿಯೊಂದೂ ಮುದ್ದೆ ಏಳೆಂಟು ಕಿಲೋಗ್ರಾಂ ತೂಗುತ್ತೆ. ನಾನು ಒಂದು ಸಲ ಮೂರು ಮುದ್ದೆಗಳನ್ನು ಮಾತ್ರ ಎಳೆಯುತ್ತಿದ್ದೆ. ಹೆಚ್ಚೆಂದರೆ ನಾಲ್ಕು. ನನ್ನ ಬೆಲ್ಟೂ ಸೇರಿದಂತೆ ನನ್ನ ಇಡೀ ದೇಹದ ತೂಕವೇ ನಲವತ್ತನಾಲ್ಕು ಕಿಲೋಗ್ರಾಂಗಿಂತ ಕಡಿಮೆ. ಆದ್ದರಿಂದ ಮೂರ್‍ನಾಲ್ಕು ಮುದ್ದೆಗಳು ಎಂದರೆ ನನ್ನ ತೂಕಕ್ಕೆ ಸಮವೇ. ಅವನ್ನು ಹೊತ್ತುಕೊಂಡೇ ಸುಮಾರು ಐವತ್ತರಿಂದ ನೂರು ಮೀಟರುಗಳಷ್ಟು ದೂರ ನಡೀತಿದ್ದೆ.

ಜೀವನದಲ್ಲಿ ಅತ್ಯಂತ ಸರಳ ಸಂಗತಿಗಳೇ ಕೆಲವೊಮ್ಮೆ ಅತ್ಯಂತ ಹೆಚ್ಚು ತೊಂದರೆಯನ್ನು ಕೊಡುತ್ತವೆ. ಬಹುಶಃ ವಿರಾಮಪ್ರಿಯ ಮನುಕುಲವು ಕೆಲಸವನ್ನು ಹೆಚ್ಚೆಚ್ಚು ಸಂಕೀರ್ಣ ಸಂಗತಿಯನ್ನಾಗಿಸಿದ್ದಕ್ಕೆ ಇದೇ ಕಾರಣ ಇರಬಹುದು. ಅಸಮ ಅಳತೆಯ, ಬಹುಮುಖದ ಮುದ್ದೆಗಳು ನನ್ನ ಬೆನ್ನಿನ ಮೇಲೆ ಹೊರಳಾಡುತ್ತಿದ್ದವು. ಒಂದೊಂದು ಹೆಜ್ಜೆ ಇಡುವಾಗಲೂ ಅವು ನನ್ನ ಬೆನ್ನುಹುರಿಯನ್ನೇ ಬಗೆಯುತ್ತಿದ್ದವು. ನಾನು ಬೆನ್ನುಹುರಿ ಎಂದರೆ ವಾಸ್ತವವಾಗಿ ಉಲ್ಲೇಖಿಸೋದು ನನ್ನ ಬೆನ್ನುಮೂಳೆಗಳನ್ನು. ಯಾಕೆಂದರೆ ನನ್ನ ಇಡೀ ದೇಹದಲ್ಲಿ

ಹೆಚ್ಚುವರಿಯಾಗಿ ಒಂದು ಸಣ್ಣ ಚಕ್ಕೆಯಷ್ಟೂ ಚರ್ಮ ಇರಲಿಲ್ಲ.

ಆ ಮೂಳೆಗಳ ಮೇಲೆ ಒರಟು ಒಣ ಮುದ್ದೆಗಳು ತರಚೋದನ್ನ ನಾನು ಕೇಳ್ತಾ ಇದ್ದೆ. ಆ ಸದ್ದಂತೂ ತೀರಾ ಹರಿತ. ಒಂಥರ ಕುಚೋದ್ಯದ ದನಿ. ಕೆಲವೊಮ್ಮೆ ನನ್ನ ಗಂಟಲಿನಲ್ಲಿ ಸಿಹಿ ರುಚಿ ಹಬ್ಬುತ್ತೆ. ಆದರೆ ನಾನು ಎಂದೂ ರಕ್ತವನ್ನು ಉಗುಳಲೇ ಇಲ್ಲ ನೋಡಿ. ಬೆನ್ನಿನ ಮೇಲಿನ ರಕ್ತ ಕಣ್ಣಿಗೆ ಕಾಣುತ್ತೆ.ಅಲ್ಲಿ ಚರ್ಮವೇ ಪೂರಾ ಕಿತ್ತುಹೋಗಿತ್ತಲ್ವೆ? ಅದೇನು ಲೆಕ್ಕಕ್ಕಿಲ್ಲ ಬಿಡಿ. ಅದನ್ನು ನನಗೆ ನೋಡಲಿಕ್ಕಾದರೆ ತಾನೆ? ನೀವು ಹಾಗೇ ಸಾವರಿಸಿಕೊಂಡು ಮುನ್ನಡೆದರೆ ಚರ್ಮದ ಬದಲಿಗೆ ಅಲ್ಲಿ ಜಡ್ಡಿನ ಹೊಸ ರಕ್ಷಣಾ ಪದರ ಬಹುಬೇಗ ಬೆಳೆಯುತ್ತೆ. ಅದನ್ನು 'ಹಳೆ ರೇಶ್ಮೆಗೂಡುಗಳು' ಅಂತ ಕರೆಯುತ್ತಿದ್ದೆವು.

ಮುದ್ದೆಗಳನ್ನು ಎಳೆಯುವುದರಲ್ಲಿ ಕೆಲವು ಅನುಕೂಲಗಳೂ ಇವೆ. ನೀವು ರಸ್ತೆಯಲ್ಲಿ ಇಳಿಯುತ್ತ ವಾಪಸು ಬರುವಾಗ ಈ ಖುಷಿ ಕಾಣುತ್ತೆ. ಯಾವುದೇ ಭಾರೀ ಕೆಲಸವನ್ನು ಮಾಡುವ ಜನರಿಗೆ ಸೂಕ್ತವಾದ ಕೊಡುಗೆ ಸಿಕ್ಕೇ ಸಿಗುತ್ತೆ: ಉದಾಹರಣೆಗೆ ಹಿಂದೆ ಇದ್ದ ರಸ್ತೆಯು ಕರಾರುವಾಕ್ಕಾಗಿ ಮುಂದೆ ಸಾಗಬೇಕಾದ ರಸ್ತೆಯಷ್ಟೇ ಉದ್ದ. ಅದೂ ಎಂಥ ರಸ್ತೆ! ಒಣ ರಸ್ತೆ, ನೀರಿಲ್ಲ, ಕೊಳಕೂ ಇಲ್ಲ. ನೆಲದ ಮೇಲೆ ಅಪ್ಪಳಿಸುವ ಬರಿಗಾಲು ನೆಲದ ಒಣ ಮತ್ತು ಬಿಸಿಯನ್ನು ಹದವಾಗಿ ಅನುಭವಿಸುತ್ತೆ. ಧೂಳು ಮೇಲೆ ಹಾರುತ್ತೆ. ವಾಪಸಾಗೋವಾಗ ಎಂಥ ಸ್ವತಂತ್ರಭಾವ...

ಜುಲೈ 11ಕ್ಕಿಂತ ಮುನ್ನ ನಾನು ಗದ್ದೆಗಳಲ್ಲಿ ಮಾಡುತ್ತಿದ್ದ ಕೆಲಸವನ್ನು ನಿಮಗೆ ವಿವರಿಸಲೇಬೇಕು. ಅದಿಲ್ಲದೇ ಹೋದರೆ ಓದುಗರಾದ ನೀವು ನನ್ನ ಈ ಸ್ವತಂತ್ರ ಭಾವವನ್ನು. ಮುದ್ದೆಗಳನ್ನು ಎಳೆಯೋದು ಎಂಥ ಒಳ್ಳೇ ಕೆಲಸ ಅನ್ನೋದು ನಿಮಗೆ ಗೊತ್ತಾಗೋದೇ ಇಲ್ಲ.

ಭತ್ತದ ಸಸಿಗಳು ಕಾಳುಕಟ್ಟುವುದಕ್ಕೆ ಆರಂಭಿಸೋದೇ ಮೇ ತಿಂಗಳಿನಲ್ಲಿ. ಜುಲೈ ಹೊತ್ತಿಗೆ ಅವು ಕಟಾವಿನ ಹಂತದಲ್ಲಿರುತ್ತವೆ. ಇದಕ್ಕಿಂತ ಮುನ್ನ ನಾವು ಅವುಗಳ ನಡುವೆ ಇರುವ ಕಳೆಯನ್ನು ಎಷ್ಟೋ ಸಲ ಕಿತ್ತಿರ್ತೇವೆ. ನಿಂಗ್‌ಕ್ಸಿಯಾದ ಜನ ಒಂದು ಮಾತು ಹೇಳ್ತಾರೆ: 'ಅಕ್ಕಿಯು ಒಂಬತ್ತು ಎಳೆಯುತ್ತದೆ, ನೀನು ಹಸಿದ ನಾಯಿಗಳನ್ನು ಕಾಣ್ತೀಯ.' ಈ ಬಲವಂತದ ಪ್ರಾಸ ಅರ್ಥ ಇಷ್ಟೆ: ನೀವು ಭತ್ತದ ಗದ್ದೆಯಿಂದ ಕಳೆಯನ್ನು ಕಿತ್ತಷ್ಟೂ ಒಳ್ಳೆಯ ಭತ್ತದ ಸಸಿಗಳನ್ನು ಕಾಣಬಹುದು. ಹೆಚ್ಚು ಅಕ್ಕಿಯನ್ನು ಬೆಳೆಯಬಹುದು. ನಿಮಗೆ ಹಸಿವಾಗುವ ಸಂದರ್ಭ ಕಡಿಮೆ. ಹಸಿವಿನಿಂದ ಇರುವವರು ಕಡಿಮೆ ಜನ ಎಂದರೆ ನಾಯಿಗಳಿಗೆ ಆಹಾರವಾಗಿ ಎಸೆಯಲು ಕಡಿಮೆ ಹೆಣಗಳು.

ನೀವು ಕಳೆ ಕೀಳುವಾಗ ಎರಡು ಕೆಲಸಗಳನ್ನು ಮಾಡಿದಂತಾಗುತ್ತೆ : ಹುಲ್ಲನ್ನು ಕೀಳುವುದು ಮತ್ತು ಅದೇ ಹೊತ್ತಿನಲ್ಲಿ ನೆಲವನ್ನು ಮೆಟ್ಟುವುದು. ಕೊಳೆತ ಗಿಡವನ್ನು ನೀವು ಎಷ್ಟು ಗಟ್ಟಿಯಾಗಿ ಮೆಟ್ಟುತ್ತೀರ ಅಂದ್ರೆ ಅದು ಅಪ್ಪಚ್ಚಿಯಾಗಿ ನೆಲದೊಳಗೆ ಹೂತುಹೋಗಿ ಗೊಬ್ಬರವಾಗುತ್ತದೆ. ಕಳೆ ಕೀಳುವುದು ಮತ್ತು ಹಸಿದ ನಾಯಿಗಳಿಗೆ ಇರುವ ಸಂಬಂಧದ ಮಾತು ತೀರಾ ಅತಿ ಎಂದು ನೀವು ಭಾವಿಸಬಹುದು. ಆದರೆ ಈ ಬಗೆಯ ಪ್ರಾಚೀನ ಕೃಷಿಪದವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ನಾವು ಮೇ ತಿಂಗಳಿನಿಂದ ಜುಲೈ

ತಿಂಗಳಿನವರೆಗೆ ನಮ್ಮನ್ನು ನಾವೇ ನೀರಿನಲ್ಲಿ ಮುಳುಗಿಸ್ಕೋಬೇಕು. ಕಾರ್ಮಿಕ ಶಿಬಿರಗಳಲ್ಲಿನ ಭತ್ತದ ಹೊಲಗಳು ಮೇಲೆದ್ದಿರುವುದು ತೀರಾ ಹೊಸ ನೆಲದಲ್ಲಿ. ಇಂಥ ನೆಲದ ಮೇಲೆ ನೀವು ನೀರಾವರಿ ನೀರನ್ನು ಹಾಯಿಸಿದಾಗ ಕಳೆಗಳಿಗೆ ಖುಷಿಯೋ ಖುಷಿ. ಅವು ಹಾಗೆ ಸಂತಸದಿಂದ ಬೀಗುತ್ತ ಮೇಲೇರುತ್ತವೆ. ಶಾ ಹುಲ್ಲು, ಮಂಜುಹುಲ್ಲು , ಗಾವೋ ಹುಲ್ಲು, ಮತ್ತು ಸಾಮಾನ್ಯವಾಗಿ ತೇವಾಂಶದ ನೆಲಗಳಲ್ಲಿ ಮಾತ್ರ ಬೆಳೆಯುವ ಜಿಜಿ ಹುಲ್ಲು ಕೂಡಾ ಈ ಹೊಲಗಳಲ್ಲಿ ಬೆಳೆಯುತ್ತದೆ. ಈ ಎಲ್ಲಾ ಕಳೆಗಳನ್ನು ಕೀಳಬೇಕಿರುವ ಖೈದಿಗಳಿಗೆ ಈ ಭೂಮಿಯ ಮೇಲಿರುವ ಎಲ್ಲಾ ಬಗೆಯ ಸಸ್ಯಗಳೂ, – ಮರುಭೂಮಿಯಲ್ಲಿ ಮಾತ್ರ ಬೆಳೆಯುವ ಅಮರರ ತಾಳೆ ಬಿಟ್ಟು – ತನ್ನ ಕಾಲಡಿಯಲ್ಲೇ ಬಿದ್ದಿವೆ ಎಂದೆನ್ನಿಸುತ್ತೆ.

ಇಲ್ಲಿ ಕಳೆ ಕೀಳಲು ನಿಮಗೆ ಬೇಕಾಗಿದ್ದು ಕೇವಲ ಎರಡು ಕೈಗಳು. ಸಾವಿರಾರು ವರ್ಷಗಳ ಹಿಂದೆ ನಮ್ಮ ಪೂರ್ವಜರು ಮೊಟ್ಟ ಮೊದಲ ಬಾರಿಗೆ ಸಮಾಜದ ಕೃಷಿ ಹಂತದ ಬದುಕನ್ನು ಪ್ರವೇಶಿಸಿದಾಗ ಮಾಡಿದ್ದಕ್ಕಿಂತ ಭಿನ್ನವಾಗೇನೂ ನಾವು ಮಾಡ್ತಾ ಇರಲಿಲ್ಲ. ಬೆಳಗ್ಗೆ ಸೂರ್ಯ ಮೂಡುವ ಮುನ್ನಾ ಕ್ಷಣದಿಂದ ಹಿಡಿದು ಚಂದ್ರ ಮೇಲೇಳೋವರೆಗೆ ನಾವು ಬೆನ್ನು ಬಗ್ಗಿಸಿ ಕೈಯಿಂದ ನೆಲವನ್ನು ಅಗೀತಿದ್ದೆವು. ಅಕಸ್ಮಾತ್ ಆ ದಿನವೇನಾದರೂ ಹುಣ್ಣಿಮೆಯಾಗಿದ್ದರೆ, ಜೊತೆಗೆ ಅಲ್ಲಿ ಆಗಲೂ ಭತ್ತದ ಗಿಡಗಳು ಮತ್ತು ಕಳೆಗಳನ್ನು ಗುರುತಿಸೋದು ನಮಗೆ ಸಾಧ್ಯವಾಗಿದ್ದರೆ, ನಾವು ಮತ್ತೆ ಬೆನ್ನು ಬಾಗಿಸಿ ಕಳೆ ಕೀಳುವ ಕೆಲವನ್ನು ಮುಂದುವರೆಸ್ತೇವೆ. ಹೀಗಿದ್ದೂ ಕೆಲವೊಮ್ಮೆ ನಾವು ಹಿಂದಿರುಗಿ ನೋಡಿದಾಗ ನಮಗೆ ಭತ್ತದ ಸಸಿಗಳೇ ಕಾಣಿಸುತ್ತಿರಲಿಲ್ಲ. ಅಲ್ಲಿ ಉಳಿದದ್ದು ಕೇವಲ ಕಪ್ಪುನೀರಿನ ಭಾರೀ ಹಾಳೆ ಎಂದೆನಿಸ್ತಿತ್ತು.

ಆಗ ನಮ್ಮ ತಂಡದ ನಾಯಕನಿಗೆ ಭಾರೀ ಕಷ್ಟದ ಕೆಲಸ ; ಆತ ಹೊಲದ ಬದುವಿನಲ್ಲಿ ಆಚೀಚೆ ಓಡುತ್ತಿದ್ದ, ಕಿತ್ತ ಕಳೆಗಳಲ್ಲಿ ಭತ್ತದ ಸಸಿಗಳೇನಾದರೂ ಇವೆಯೆ ಅಂತ ಹುಡುಕುತ್ತಿದ್ದ. ಖೈದಿಗಳು ಉದ್ದೇಶಪೂರ್ವಕವಾಗಿಯೇ ಉತ್ಪಾದನೆಯನ್ನು ಹಾಳುಗೆಡಹುತ್ತಿದ್ದಾರೆಯೆ? ಕಳೆಯ ಜೊತೆಗೇ ಭತ್ತದ ಸಸಿಗಳನ್ನೂ ಕಿತ್ತುಹಾಕುತ್ತಿದ್ದಾರೆಯೆ? ಸಾಮಾನ್ಯವಾಗಿ ಅವನ ಈ ಶೋಧನೆ ವಿಫಲವಾಗ್ತಾ ಇತ್ತು – ಎಳಸು ಭತ್ತದ ಸಸಿಗಳನ್ನು ಆರೋಗ್ಯವಂತ ಕಳೆಗಳು ಯಾವಾಗಲೋ ಕೊಲೆ ಮಾಡಿರುತ್ತಿದ್ದವು.

ಏಳುನೂರು ದಿನಗಳಿಗೂ ಹೆಚ್ಚು ಕಾಲ ಗುದ್ದಲಿ ಮತ್ತು ಕಳೆಗುದ್ದಲಿಗಳನ್ನು ಬಳಸಿದ ಮೇಲೆ ನನ್ನ ಪಾದಗಳು ಮತ್ತು ಅಂಗೈಗಳು ರಕ್ತದ ಹಂತವನ್ನು ದಾಟಿ ಜಡ್ಡಿನ ರಕ್ಷಣಾ ಪದರದ ಹಂತಕ್ಕೆ ಬಂದಿದ್ದವು. ಸದಾ ನೀರಿನಲ್ಲಿ ಮುಳುಗಿಸಿಡೋದು ಕಾಲುಗಳಿಗೆ ಹೊಂದೋದೇ ಇಲ್ಲ. ಅದರಲ್ಲೂ ಅಂಥ ನೀರಿನಲ್ಲಂತೂ ಅಲ್ಲವೇ ಅಲ್ಲ. ಕೊಳೆತ ಸಸ್ಯವಸ್ತುಗಳು, ಉಪ್ಪು ಮತ್ತು ಖನಿಜಗಳಿಂದ ಆ ನೀರು ಸಾಂದ್ರವಾಗಿತ್ತು. ಅದು ಒಂದು ರೀತಿಯಲ್ಲಿ ಅತಿಪೂರಣ ದ್ರಾವಣ. ನಿಂಗ್‌ಕ್ಸಿಯಾದ ಜನ ಅದನ್ನು ಸರಿಯಾಗಿಯೇ 'ಮಣ್ಣಿನ ಸಾರು' ಎಂದು ಹೆಸರಿಸಿದ್ದರು. ಪ್ರತಿಯೊಂದೂ ಸಲ ನೀವು ಹೆಜ್ಜೆಯನ್ನು ಊರಿದಾಗ, ಅದು ಸರಿಸಿದ ಕಪ್ಪು ಮಣ್ಣಿನಿಂದ ಒಂದು ಕೊಳೆತ ವಾಸನೆ ಮೇಲೇಳ್ತಾ ಇತ್ತು. ಅಂಥ ವಿಚಿತ್ರ ವಾಸನೆಗಳು ಏನೂ ಅಲ್ಲ ಬಿಡಿ. ಆದರೆ ಮಣ್ಣಿನ ಸಾರಿನಲ್ಲಿ ಇದ್ದ ವಸ್ತುಗಳು ನಿಮ್ಮ ಕಾಲನ್ನು ಸುಟ್ಟು ಹಾಕುತ್ತಿದ್ದವು. ಅರ್ಧ ದಿನದ ನಂತರ ನಿಮ್ಮ ಕಾಲುಗಳು ಕೆಂಪು ಬಾಸುಂಡೆಗಳ

ಪದರದಿಂದ ತುಂಬಿರುತ್ತಿದ್ದವು. ಅದಕ್ಕೆ ನಾನು ಬಳಸಬಹುದಾಗಿದ್ದು ಪದರ ಎಂಬ ಒಂದೇ ಒಂದು ಪದ. –ಯಾಕೆಂದರೆ ಅಲ್ಲಿ ಎಷ್ಟು ಹುಣ್ಣುಗಳಾಗಿವೆ ಅಂತ ಎಣಿಸಕ್ಕಾಗಲ್ಲ. ನೀರಿನ ಹಂತದಿಂದ ಕೆಳಗೆ ಕಾಲು ಗುಳ್ಳೆಗಳ ದಟ್ಟ ಗೊಂದಲ. ಆದ್ದರಿದಲೇ ನಿಂಗ್‌ಕ್ಸಿಯಾದ ಜನರು ಅದನ್ನು ಕರಾರುವಾಕ್ಕಾಗಿ 'ತರಲೆ ತುರಿಕೆ ಗುಳ್ಳೆಗಳು' ಎಂದು ಕರೆಯುತ್ತಿದ್ದರು.

ನಿಮ್ಮ ಕಾಲುಗಳ ಮೇಲೆ ಬೊಬ್ಬೆಗಳು ಕಾಣಿಸಿದ ಮೇಲೆ ಅವು ತುರಿಸಲು ಆರಂಭವಾಗುತ್ತದೆ. ಅದೇನೂ ಸಾಮಾನ್ಯವಾದ ತುರಿಕೆ ಅಲ್ಲ. ಸೀದಾ ಆತ್ಮದೊಳಕ್ಕೆ ಹೋಗುವ ತುರಿಕೆ ; ನಿಮ್ಮನ್ನು ಹುಚ್ಚಿಗೆ ನೂಕುವ ಅಸಾಧ್ಯ ತುರಿಕೆ. ಕೆಲವು ಖೈದಿಗಳು ಒಂದೇ ಕಾಲನ್ನು ಮೇಲೆ ಎತ್ತಿಕೊಂಡು ಅದು ಪೂರಾ ಸುಟ್ಟುಹೋಗಿದೆ ಎನ್ನುವಂತೆ ಕುಣೀತಾ ಕಿರುಚ್ತಿದ್ದರು.ನೀವು ಈ ಗುಳ್ಳೆಗಳನ್ನು ನಿಮ್ಮ ಬೆರಳಿನ ಉಗುರುಗಳಿಂದ ತುರಿಸಿಕೊಳ್ಳಲು ಯತ್ನಿಸಿದಿರೋ, 'ನೀವು ದಪ್ಪ ಬೂಟಿನೊಳಕ್ಕೆ ಕೈ ಹಾಕಿ ತುರಿಸುತ್ತಿದ್ದೀರಿ' ಎಂದರ್ಥ. ಇದೂ ಒಂದು ಪದಗುಚ್ಛ. ಹಾಗೆ ತುರಿಸುವುದು ಯಾವ ಪ್ರಯೋಜನವೂ ಇಲ್ಲದ ಕೆಲಸ ಎಂಬದಷ್ಟೆ ಇದರ ಅರ್ಥ. ತುರಿಸೋದ್ರಿಂದ ತುರಿಕೆಯನ್ನು ಒಂದಿನಿತೂ ಕಡಿಮೆ ಮಾಡಲಾಗದು, ನೆನಪಿಡಿ. ಇಲ್ಲಿ ನೀವು ಮಾಡಬಹುದಾದದ್ದು : ಒಂದು ಮರಳು ಕಾಗದವನ್ನು ತಂದು ಕಾಲುಗಳನ್ನು ಪರಚಿಕೊಳ್ಳೋದು. ಆದರೆ ಮರಳುಕಾಗದ ಈ ಕಾರ್ಮಿಕ ಶಿಬಿರದಲ್ಲಿ ಸಿಗೋದಾದ್ರೂ ಹೇಗೆ? ಇದಕ್ಕೆ ಪರ್ಯಾಯವೆಂದರೆ ಒಂದು ಒಣ, ಗಟ್ಟಿಯಾದ ಹಳೆ ಟವೆಲನ್ನು ತೆಗೆದುಕೊಂಡು ಹುಚ್ಚರ ಹಾಗೆ ಉಜ್ಜಿಕೊಳ್ಳುವುದು.

ಕಾಲು ಎಂದರೆ ಚರ್ಮ ಮತ್ತು ಮಾಂಸದಿಂದ ಮಾಡಿದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅವೇನೂ ಲೋಹದ ಕಂಬಿಗಳಲ್ಲ,– ಒಮ್ಮೆ ನೀವು ಸ್ವಲ್ಪ ಉಜ್ಜಿಕೊಂಡರೆ ಸಾಕು, ನೀವು ಚರ್ಮವನ್ನೇ ಕಿತ್ತಿರ್ತೀರಿ. ಈ ಹಂತದಲ್ಲಿ ತುರಿಕೆಯ ಬದಲಿಗೆ ನೋವು ಆವರಿಸಿಕೊಂಡಿರುತ್ತೆ. ಆದರೆ ಇದನ್ನು ಸಹಿಸಿಕೊಳ್ಳುವುದು ಹೆಚ್ಚು ಸುಲಭ. ಆನಂತರ ನಾನು ತುರಿಕೆಯ ಸಿದ್ಧಾಂತದ ಬಗ್ಗೆ ಒಂದು ವಿವರಣೆಯನ್ನು ಓದಿದೆ: 'ತುರಿಕೆಯನ್ನು ನೋವಿನ ಒಂದು ಅತಿಸಾಧಾರಣ ಸ್ವರೂಪ ಎಂದು ಭಾವಿಸಬಹುದು.' ಬಹುಶಃ ಈ ನಿಘಂಟನ್ನು ಬರೆದ ಲೇಖಕ ಖಂಡಿತ ತನ್ನ ಜೀವನದಲ್ಲಿ ಎಂದೂ ತುರಿಕೆಯನ್ನು ಅನುಭವಿಸಿಲ್ಲ ಎಂದು ಸಲೀಸಾಗಿ ಹೇಳಬಹುದು!

ಈ 'ತರಲೆ ತುರಿಕೆ ಗುಳ್ಳೆಗಳು' ಗೆ ಇದ್ದ ವೈದ್ಯಕೀಯ ಹೆಸರು 'ಭತ್ತದ ಗದ್ದೆ ಊತ.' ಅದು ಸಾಮಾನ್ಯ ಚರ್ಮದ ಸೋಂಕು ಎಂದಿದ್ದರೂ ಅಲ್ಲಿ ಅದನ್ನು ನಿವಾರಿಸಲಿಕ್ಕೆ ಬೇಕಾದ ಸಾಮಾನ್ಯ, ಸರಳ ಔಷಧಿ ಇರಲಿಲ್ಲ. ನಾವು ಕೆಲಸ ಮಾಡುವುದನ್ನೇ ಮುಂದುವರೆಸುವಂತೆ ಮಾಡಲು, ಗದ್ದೆಗಳಲ್ಲಿ ಕಳೆ ಕೀಳುವುದನ್ನು ಮುಂದುವರೆಸಲು ನಮಗೆ ಯಂತ್ರಗಳಿಗೆ ಬಳಸುವ ಕೀಲೆಣ್ಣೆಯನ್ನು ನೀಡುತ್ತಿದ್ದರು. ಅದನ್ನು ಸಾಮಾನ್ಯವಾಗಿ ಟ್ರಾಕ್ಟರಿನ ಯಂತ್ರದಲ್ಲಿ ಬಳಸ್ತಾರೆ. ಅದನ್ನು ನಾವು ನಮ್ಮ ಕಾಲುಗಳ ಮೇಲೆ ಪ್ರತಿಬಂಧಕವಾಗಿ ಸವರಿಕೊಳ್ಳಬೇಕೆಂದು ಸೂಚನೆ ಬಂದಿತ್ತು. ಒಂದು ಬಗೆಯಲ್ಲಿ ನೀರು ಮತ್ತು ಚರ್ಮದ ನಡುವೆ ಕೊನೇ ಪಕ್ಷ ಒಂದು ಪದರವಾಗಿ...


ಕೀಲೆಣ್ಣೆ ತೀರಾ ಅಂಟಂಟು. ಅದು ಚರ್ಮದ ಕೋಶಗಳ ರಂಧ್ರಗಳನ್ನು ಮುಚ್ಚಿಬಿಡುತ್ತೆ.

ರಾತ್ರಿ ನೀವು ಮಲಗಬೇಕೆಂದಾಗ ಅದು ತೀರಾ ಕಸಿವಿಸಿ ಮಾಡುತ್ತೆ. ಆದರೆ ಕೆಟ್ಟ ಸಮಾಚಾರ ಎಂದರೆ ಅದು ಒಂದಿನಿತೂ ಪ್ರಭಾವಶಾಲಿಯಾಗಿರಲಿಲ್ಲ. ನೀರಿನಲ್ಲಿ ಅದು ಖಂಡಿತ ತೃಪ್ತಿಕರವಾಗಿರಲಿಲ್ಲ. ನೀರಿನಿಂದ ಹೊರಗೆ ಕಾಲಿಟ್ಟಾಗ ಅದು ಖಂಡಿತಾ ಅತೃಪ್ತಿಯನ್ನೇ ತರುತ್ತಿತ್ತು. ಆದ್ದರಿಂದ ಕೀಲೆಣ್ಣೆಯನ್ನು ಸವರಿಕೊಳ್ಳಬೇಕೋ ಬೇಡವೋ ಎಂಬುದೇ ಒಂದು ದೊಡ್ಡ ಪ್ರಶ್ನೆಯಾಗಿತ್ತು. ಎರಡೂ ಕಾಲುಗಳನ್ನು ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಬಂಧನದಲ್ಲಿಡಬೇಕೆ ಅಥವಾ ಸುಮ್ಮನೆ ಕೆರೆದುಕೊಳ್ಳುತ್ತ ಇರಬೇಕೆ? ಪ್ರತಿಯೊಂದು ಕ್ರಮಕ್ಕೂ ಅದರದ್ದೇ ಆದ ಗಟ್ಟಿಯಾದ ವಾದ ಇತ್ತು. ಇಂಥ ಗೊಂದಲಗಳೇ ಖೈದಿಗಳು ಹುಚ್ಚು ಹಿಡಿಯೋ ಹಾಗೆ ಮಾಡ್ತಿತ್ತು.

ಇಲ್ಲಿ ಅತ್ಯಂತ ಒಳ್ಳೆಯ ಪರಿಹಾರ ಎಂದರೆ ನೀರಿನಿಂದ ಹೊರಬರುವುದು. ಅರ್ಥಾತ್ ಮಣ್ಣಿನ ಸಾರಿನಿಂದ ಹೊರಗೆ ಬರುವುದು. ನಾವು ಕಳೆಯ ದೊಡ್ಡ ಕಟ್ಟನ್ನು ಮಾಡಿ ಅದನ್ನು ಹತ್ತಿರದ ಬದುವಿಗೆ ಎಸೆಯುತ್ತಿದ್ದೆವು. ಹಾಗೆ ಪ್ರತೀ ಸಲ ಮಾಡಿದಾಗ ನಾವು ಆ ಖುಷಿ ಕೊಡುವ ಒಣ ನೆಲವನ್ನು ಸುಮ್ಮನೆ ನೋಡುತ್ತಿದ್ದೆವು. ನಾವು ಸಮುದ್ರದಲ್ಲಿ ತುಂಬಾದಿನಗಳ ಕಾಲ ಕಳೆದ ನಾವಿಕರ ಹಾಗೆ, ಕೊನೆಗೊಮ್ಮೆ ನೆಲದ ದಿಗಂತವನ್ನು ಕಂಡ ಹಾಗೆ... ಅದು ಎಷ್ಟು ಹತ್ತಿರ ಇದೆ.... ಆದರೂ ಎಷ್ಟೋ ದೂರ. ನಮಗೆ ದಡ ಸೇರಲು ಯಾವಾಗ ಬಿಡುತ್ತಾರೆ, ನಾವು ಯಾವಾಗ ನೆಲದ ಒಣತನವನ್ನು ಅನುಭವಿಸುತ್ತೇವೆ ಎಂಬುದು ನಮಗೆ ಎಂದೂ ಗೊತ್ತಾಗಲ್ಲ.

ಇಂದು, ಜುಲೈ 11ರಂದು ಕೊನೆಗೂ ನಾವು ದಡ ಸೇರಿದ್ದೆವು. ನಾನು ನೆಲದ ಮೇಲೇ ಕೆಲಸ ಮಾಡುತ್ತ ಹಲವು ದಿನಗಳಾಗಿದ್ದರೂ ದಿನಚರಿ ಇಂದು ಆರಂಭವಾಗುತ್ತದೆ.. ನಾವಿಕ ಕೊನೆಗೂ ದಡ ಸೇರಿದ ಹಾಗೆ. ಈ ಹೊಸ ಮನಸ್ಸಿನ ಚೌಕಟ್ಟಿನಲ್ಲಿಯೇ ಬರೆಯುವುದರ ಬಗ್ಗೆ ಚಿಂತಿಸಲು ಸಾಧ್ಯ.

ನಾನು ಒಣ ನೆಲಕ್ಕೆ ಮರಳಿದೆ ಎಂಬ ವಾಸ್ತವವೇ ನಾನು ಈ ದಿನ ದಿನಚರಿಯನ್ನು ಬರೆಯಲು ಆರಂಭಿಸಿದ್ದಕ್ಕೆ ಇದ್ದ ಅತ್ಯಂತ ಮುಖ್ಯ ಕಾರಣ.



# ಹಸಿರು ಬಾಕ

## ಜುಲೈ 12

**ಕೊಳಕು ಮುದ್ದೆಗಳನ್ನು ಎಳೆದೆ, ಹಸಿರಿನಲ್ಲಿ ಆಯ್ದೆ**
**'ಹೊಳೆಯುತ್ತಿರು ಕಡುಗೆಂಪು ಬಣ್ಣವೆ' ಎಂಬ ಗುಣಗಾನ ಬರೆದೆ**

ಇವತ್ತೂ ಮುದ್ದೆಗಳನ್ನು ಎಳೆದೆ. ಮನೆ ಕಟ್ಟುವುದರಲ್ಲಿ ಮುದ್ದೆಯನ್ನು ಎಳೆಯುವುದು ಅತ್ಯಂತ ತಳಸ್ತರದ ಕೆಲಸ. ನಿಮಗೆ ಇಲ್ಲಿ ಬೇಕಾದ್ದು ಕಾಲುಗಳು, ಕೈಗಳು ಮತ್ತು ನಡೆಯುವುದಕ್ಕೆ ಬೇಕಾದ ಸಾಮರ್ಥ್ಯ – ಯಾರಾದರೂ ಮಾಡಬಹುದು. ಮೆದುಳನ್ನು ಬಳಸುವ ಅಗತ್ಯವೇ ಇಲ್ಲ. ಯಾವುದೇ ತಂತ್ರವೂ ಇಲ್ಲ. ಯಾವ ಬಗೆಯ 'ಹೊಣೆಗಾರಿಕೆಯೂ' ಇಲ್ಲ.ಎಲ್ಲಕ್ಕಿಂತ ಒಳ್ಳೆಯ ಅಂಶ ಎಂದರೆ ಇಲ್ಲಿ ನೀವು ಒಣ ನೆಲದಲ್ಲಿ ನಡೆಯುವ ಅವಕಾಶವೂ ಇದೆ. ನಾನೀಗ ಡಬಲ್ ವರ ಪಡೆದವ ಎಂದು ಬೀಗಬಹುದು.

ನನ್ನ ಬೆನ್ನು ಈಗ ಒಂದು ರಕ್ತರಂಜಿತ ಗುಳ್ಳೆ. ನನ್ನ ಮೊಳೆಗಳು ತರಚುಗಳಿಂದ ಗಾಸಿಗೊಂಡಿವೆ. ಇಂಥ ಗಾಯಗಳನ್ನು ಉಲ್ಲೇಖಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಅದು 'ತುರಿಕೆಯ ಒಂದು ಅತ್ಯಂತ ಸರಳ ಸ್ವರೂಪ'ಕ್ಕಿಂತ ಬೇರೆಯಲ್ಲ! ಇಟ್ಟಿಗೆಗಳನ್ನು

ಪೇರಿಸ್ತಾ ಇರೋ ಖೈದಿಗಳಿಗೆ ನಮಗಿಂತ ಹೆಚ್ಚಿನ ಆರಾಮೇನೂ ಇಲ್ಲ. ಅವರು ನಮ್ಮ ಹಾಗೆ ನಮ್ಮ ತೂಕದ್ದಷ್ಟೇ ಇದ್ದ ಭಾರವನ್ನು ಹೊತ್ತುಕೊಳ್ಳಬೇಕಿಲ್ಲ. ಆದರೆ ಅವರು ಈ ಮುದ್ದೆಗಳನ್ನು ಇಟ್ಟಿಗೆಗಳ ಆಕಾರಕ್ಕೆ ತರಲು ಮೇಸ್ತ್ರಿಯ ಕಡಿಗತ್ತಿಯನ್ನು ಬಳಸಬೇಕಿತ್ತು. ಅವರು ನಾವು ತಂದುಕೊಟ್ಟ ಮುದ್ದೆಯನ್ನು ಹಿಡಿದು ಎಲ್ಲಿಂದ ಈ ಕೆಲಸ ಆರಂಭಿಸಬೇಕೆಂದು ನೋಡುತ್ತಿದ್ದಾಗ ಅವರ ಕೈಯಲ್ಲಿ ಸುಡುಸುಡುವ ಕೆಂಡವೇ ಇದೆಯೇನೋ ಎಂಬಂತೆ ಭಾಸವಾಗ್ತಾ ಇತ್ತು.

ಒಬ್ಬ ಭೌತಶಾಸ್ತ್ರಜ್ಞ ಅಥವಾ ಒಬ್ಬ ಇಂಜಿನಿಯರ್‌ಗೆ ಈ ಅಸಮ ಮುದ್ದೆಗಳನ್ನು ಬಳಸಿ ನೇರವಾದ, ಸ್ವತಂತ್ರವಾಗಿ ನಿಲ್ಲುವ ಗೋಡೆಯನ್ನು ಕಟ್ಟುವುದು ತುಂಬಾ ಕಷ್ಟ. ಮೇಸ್ತ್ರಿಗಳು ಸಾಮಾನ್ಯವಾಗಿ ಈ ಮುದ್ದೆಗಳನ್ನು ಎಳೆಯುವ ಖೈದಿಗಳನ್ನು ಬೈಯುತ್ತಿದ್ದರು. ಸರಿಯಾದ, ಸಂಪೂರ್ಣ ಮತ್ತು ಇಟ್ಟಿಗೆ ಆಕಾರದ ಮುದ್ದೆಗಳನ್ನು ತರಲು ಹೇಳುತ್ತಿದ್ದರು.

'ನೀವೇ ಹೋಗಿ ತಂದುಕೊಳ್ಳಿ!' ಮುದ್ದೆ ಎಳೆದು ತರುವ ಖೈದಿಗಳು ತಮ್ಮ ಹಾಸ್ಯಪ್ರಜ್ಞೆಗೆ ತಾವೇ ಸಂತಸಪಡುತ್ತ ಹೇಳುತ್ತಿದ್ದರು. ಎಷ್ಟೆಂದರೂ ಈ ಇಟ್ಟಿಗೆ ಮೇಸ್ತ್ರಿಗಳು ತಂಡನಾಯಕರಲ್ಲವಲ್ಲ! ಅವರಿಗೆ ಯಾರು ಕ್ಯಾರೇ ಅನ್ನೋರು? ಮುದ್ದೆ ಎಳೆವವರು ಗೋಡೆಯ ಬದಿಗೆ ಮುದ್ದೆಗಳನ್ನು ಎಳೆದು ತರುವ ಬಗ್ಗೆ ಮಾತ್ರ ಎಚ್ಚರ ವಹಿಸುತ್ತಿದ್ದರು. ಅಷ್ಟೆ. ಅಲ್ಲಿಗೆ ಮುಗಿಯಿತು. ಅದು ಬಳಕೆಗೆ ಬರುತ್ತೋ ಇಲ್ಲವೋ ಎಂಬುದು ಬೇರೆಯವರಿಗೆ ಬಿಟ್ಟ ವಿಚಾರ.

ಸಶ್ರಮದ ಕೆಲಸವನ್ನು ಮಾಡುವವರು ತಮ್ಮ ಕೆಲಸಗಳ ಬಗ್ಗೆ ಅತ್ಯಂತ ಹೆಚ್ಚಿನ ನಿಗಾ ವಹಿಸ್ತಾರೆ. ಕೆಲಸ ಮಾಡುತ್ತ ಅವರು ಒಂದು ಸಾಧನದ ಥರ ಕಾಣುತ್ತಾರೆ.ಅವರಿಗೆ ವಿಧಾನದ ಮುಂದಿನ ಹೆಜ್ಜೆ ಅಗತ್ಯಗಳನ್ನು ಪರಿಶೀಲಿಸುವ ಅಗತ್ಯವೇ ಇಲ್ಲ. ಮಾದರಿ ಖೈದಿಯಾಗಲು ಉದ್ದೇಶದ ಮುಂದಿನ ಹೆಜ್ಜೆಯನ್ನು ತಡೆಯದ ಒಂದು ಕ್ರಮವೇ ಸಾಕು. 'ಗುರಿಯನ್ನು ತಲುಪುವ ವ್ಯಕ್ತಿ' ಎಂಬ ಅರ್ಹತೆಯನ್ನು ಪಡೆಯಲು ಅರ್ಹತೆ ಬಂದಂತೆಯೇ.

'ಬಂಡವಾಳ ನಿರ್ಮಾಣ'ದಲ್ಲಿ ಇಟ್ಟಿಗೆಸಾಲನ್ನು ಪರೀಕ್ಷಿಸುವ ಕಡಿಗತ್ತಿಯನ್ನು ಹಿಡಿದು ಅಡ್ಡಾಡುವವರು 'ದೊಡ್ಡ ಕೆಲಸಗಾರು'. ಮಣ್ಣಿನ ಮುದ್ದೆಗಳನ್ನು ಸಾಗಿಸುವರು'ಚಿಕ್ಕ ಕೆಲಸಗಾರರು'.ಆಮೇಲೆ ಇನ್ನೂ ಕೆಲವು ಸಣ್ಣ ಕೆಲಸಗಾರರಿದ್ದರು. ಅವರೂ ಖೈದಿಗಳೇ ; ದೊಡ್ಡ ಕೆಲಸಗಾರರಿಗೆ ಸಹಾಯ ಮಾಡುತ್ತಿದ್ದರು. ಮಣ್ಣನ್ನು ಮಿಶ್ರ ಮಾಡೋದು, ಮುದ್ದೆಗಳನ್ನು ಎತ್ತಿಕೊಡೋದು, ಮಣ್ಣನ್ನು ಎಳೆಯೋದು ಹೀಗೆ. ಕಟ್ಟಡದ ಪ್ರತೀ ಗೋಡೆಯನ್ನೂ ಹಲವು ಅಸಮ ಮಣ್ಣಿನ ಮುದ್ದೆಗಳನ್ನು ಬಳಸಿಯೇ ಕಟ್ಟುತ್ತಿದ್ದರು. ಅವುಗಳನ್ನು ಪರಸ್ಪರ ಕೂಡಿಸಿ ಇಡಲು ಒಣ ಮಣ್ಣೇ ಆಧಾರ.

ಬೇಜವಾಬ್ದಾರಿಯ ಬಂಡವಾಳ ನಿರ್ಮಾಣ ಕಾರ್ಮಿಕನ ಬಗ್ಗೆ ಒಂದು ಹಾಸ್ಯಚಟಾಕಿ ಇದೆ. ಒಮ್ಮೆ ಮನೆಯನ್ನು ಕಟ್ಟಿದ ಮೇಲೆ ಆತ ತನ್ನ ಜತೆಗಾರರಿಗೆ ಹೇಳ್ತಾನೆ,'ಸರಿ! ನೀನು ಇಲ್ಲಿ ನಿಂತುಕೊಂಡು ಗೋಡೆಯನ್ನು ಒತ್ತಿ ಹಿಡಿ. ನಾನು ಹೋಗಿ ಹಣ ತರ್ತೇನೆ. ನಾನು ಹಣ ತರುವವರೆಗೆ ಗೋಡೆ ಬೀಳಲು ಬಿಡಬೇಡ.' ಇದರ ಅರ್ಥ, ನೀವು ಗೋಡೆಯನ್ನು

ಸರಿಯಾಗಿ ಒತ್ತಿಹಿಡಿದಿರೋತನಕ ಕಟ್ಟಡಗಳು ಬೀಳದೆ ನೇರವಾಗಿ ನಿಂತಿರುತ್ತವೆ. ನೀವು ಅದನ್ನು ಬಿಟ್ಟು ನಡೆದ ಮರುಕ್ಷಣ ಬಿದ್ದುಹೋಗುತ್ತವೆ !

ನಿಜ, ಕಾರ್ಮಿಕ ಶಿಬಿರದಲ್ಲಿ ಈ ರೀತಿ ಕೆಲಸ ಮಾಡೋದು ಅಸಾಧ್ಯವೇ. ಕೆಲಸದ ಕೊನೆಗೆ ಹಣ ತರುವುದಂತೂ ಸಾಧ್ಯವೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಬಿದ್ದ ಗೋಡೆಯನ್ನು ಕಟ್ಟಿದವನು ಗೋಡೆಗಿಂತ ಕೆಟ್ಟ ಸ್ಥಿತಿಗೆ ಬೀಳ್ತಾನೆ. ಆತ ಆಗ ಉತ್ಪಾದನೆಯನ್ನು ಬುಡಮೇಲು ಮಾಡಿದ ಆಪಾದನೆಗೆ ಗುರಿಯಾಗ್ತಾನೆ.

ಹಾಗಾದರೆ ಏನು ಮಾಡಬೇಕು? ಒಂದೇ ಪರಿಹಾರ ಎಂದರೆ ಸಾಕಷ್ಟು ಮಣ್ಣನ್ನು ಬಳಸಿ ಎಲ್ಲಾ ಮುದ್ದೆಗಳನ್ನೂ ಜೋಡಿಸುವುದು.'ಅದು ಹಿಡಿದುಕೊಳ್ಳುತ್ತಾ ಇಲ್ಲವಾ ಅನ್ನೋದು ಮಣ್ಣಿನ ಒಂದು ಹೊಡೆತವನ್ನು ಅವಲಂಬಿಸಿದೆ.' ಇದು ದೊಡ್ಡ ಕೆಲಸಗಾರರ ಯಶಸ್ಸಿನ ರಹಸ್ಯ ಸೂತ್ರ. ಅತ್ಯಂತ ವಿಚಿತ್ರ ಆಕಾರದ ಇಟ್ಟಿಗೆಗಳು ಹೀಗೆ ಗೋಡೆಯ ತೂತು ಮುಚ್ಚುವ ಕೆಲಸಕ್ಕೆ ಬಳಕೆಯಾಗ್ತಾ ಇದ್ದವು. ಅದೃಷ್ಟವಶಾತ್ ಆ ಮೆಕ್ಕಲುಮಣ್ಣಿನ ಪ್ರಸ್ಥಭೂಮಿಯ ಮಣ್ಣು ಎಂಥದ್ದೆಂದರೆ ಒಮ್ಮೆ ಒಣಗಿತೆಂದರೆ ಇಟ್ಟಿಗೆ ಗೂಡಿನಲ್ಲಿ ಸುಟ್ಟ ಹಾಗೆ ಗಟ್ಟಿಯಾಗ್ತಿತ್ತು. ಅದು ಬಹುಶಃ ಐದರ ಹಂತದ ಭೂಕಂಪವನ್ನೂ ತಡೆದುಕೊಳ್ಳಬಹುದು.

ಸಣ್ಣ ಕೆಲಸಗಾರರು ಒಂದು ಕ್ಷಣ ಆರಾಮಾಗಿ ನಿಂತರೆ ದೊಡ್ಡ ಕೆಲಸಗಾರರ ಬೈಗುಳ. ಬಂಡವಾಳ ನಿರ್ಮಾಣದಲ್ಲಿ ದೊಡ್ಡ ಕೆಲಸಗಾರರು ತುಂಬಾ ಮುಖ್ಯ. ಅವರಲ್ಲಿ ತಂತ್ರಗಾರಿಕೆ ಇದೆ, ಅವರಿಗೆ ಹೊಣೆಗಾರಿಕೆ ಇದೆ. ಬೈಯ್ಯುವ ಕೆಲಸದಲ್ಲಿ ತಡದ ನಾಯಕನೂ ಬಾಯಿ ಸೇರಿಸ್ತಿದ್ದ. ಘಟನೆ ಏನೂ ಇರಲಿ, ಯಾವಾಗಲೂ ತಪ್ಪು ಸಣ್ಣ ಕೆಲಸಗಾರನದ್ದೇ. ಆ ದುರ್ದೈವಿ ಕೆಲಸಗಾರ ಯಾವುದನ್ನೂ ಸರಿಯಾಗಿ ಮಾಡಲಾರದೆ ಸೂರ್ಯ ಮೂಡಿದ ಕ್ಷಣದಿಂದ ಆರಂಭಿಸಿ ಸೂರ್ಯ ಪರ್ವತದಾಚೆ ಮುಳುಗಿ ಎಲ್ಲರೂ ಕೆಲಸ ಮುಗಿಸಿ ಹೋಗುವವರೆಗೂ ಬೈಗುಳಗಳನ್ನು ಸಹಿಸಿಕೊಂಡು ಇರಬೇಕಾಗಿತ್ತು.

ಬೈಗುಳಕ್ಕೆ ದೊಡ್ಡ ಕೆಲಸಗಾರ ಬಳಸೋ ಭಾಷೆ ಸರಳ ಭಾಷಣಕ್ಕಿಂತ ಅತ್ಯಂತ ವರ್ಣನೀಯ. ಆತ ಸಣ್ಣ ಕೆಲಸಗಾರನ ತಾಯಿಯ ಜೊತೆಗೆ ಮಲಗಲು ಬಯಸೋದಷ್ಟೇ ಅಲ್ಲ, ಆತ ಆ ತಾಯಿಯ ಎಲ್ಲಾ ಅಂಗಾಂಗಗಳನ್ನೂ ಅತ್ಯಂತ ವಿವರವಾಗಿ ಬಣ್ಣಿಸ್ತಿದ್ದ. ತಂಡನಾಯಕ ಮತ್ತು ಖೈದಿಗಳು ಈ ಬಗೆಯ ಭಾಷೆಯ ಸಚಿತ್ರಬಳಕೆಯನ್ನು ತುಂಬಾ ಪ್ರಶಂಸಿಸುತ್ತಿದ್ದರು. ನಾನೂ ಆ ಮಾತುಗಳನ್ನು ಕೇಳುತ್ತ ನಿಂತುಬಿಡ್ತಿದ್ದೆ. ಇದು ಒಂದು ಥರದ ಲಾಭ. ಒಂದು ಮನರಂಜನೆ. ನೀವು ಭತ್ತದ ಹೊಲಗಳಲ್ಲಿ ಕೆಲಸ ಮಾಡುವಾಗ ಈ ದೃಶ್ಯ ಸಿಗೋದಿಲ್ಲ.

ಇಟ್ಟಿಗೆ ಪೇರಿಸುವ ಕಡಿಗತ್ತಿಯನ್ನು ಹಿಡಿದುಕೊಳ್ಳಲು ಅನುಮತಿ ಇರೋ ಖೈದಿಗಳು ಸಾಮಾನ್ಯವಾಗಿ ಹೊರಗೆ ದೈಹಿಕ ಶ್ರಮದ ಕೆಲಸಗಳಲ್ಲಿ ತರಬೇತಿಯನ್ನು ಪಡೆದವರು. ಬಹುತೇಕ ಸಣ್ಣ ಖೈದಿಗಳು ಬುದ್ಧಿಜೀವಿಗಳು. ಅವರು ಬಲಪಂಥೀಯರು, ಐತಿಹಾಸಿಕ ಕ್ರಾಂತಿವಿರೋಧಿಗಳು ಅಥವಾ 'ಚಿಂತನಾ ಅಪರಾಧಿ'ಗಳು. ಇಂಥವರು ಕೇವಲ ದೈಹಿಕ ಕುಶಲತೆ ಇಲ್ಲದ ಕೆಲಸಗಳನ್ನಷ್ಟೆ ಮಾಡಬೇಕು. ಬೈಯುವುದರಲ್ಲೂ ಅವರು ಕೆಲಸ ಮಾಡುವುದಕ್ಕೇ ಹುಟ್ಟಿದ ಖೈದಿಗಳಿಗೆ ಸರಿಸಾಟಿ ಅಲ್ಲ. ಭತ್ತದ ಗದ್ದೆಗಳಲ್ಲಿ ಅಥವಾ

ನಿರ್ಮಾಣ ಸ್ಥಳದಲ್ಲಿ ನೀವು ಬೈಗುಳವನ್ನು ಕೇಳಿದಾಗ, ಅದರ ಗುರಿ ಒಬ್ಬ ಬುದ್ಧಿಜೀವಿ ಖೈದಿ ಅಂತ ಖಡಾಖಂಡಿತವಾಗಿ ಹೇಳಬಹುದು.

ಆದರೆ ಹಾಗಂತ ಯಾವಾಗಲೂ ಬುದ್ಧಿಜೀವಿಗಳು ಹೀಗಳೆತಕ್ಕೆ ಪಕ್ಕಾಗುತ್ತಾರೆ ಎಂದು ತಿಳೀಬೇಡಿ. ದೂಷಣಾಸಭೆಗಳಲ್ಲಿ ಬುದ್ಧಿಜೀವಿಗಳು ಕಾರ್ಮಿಕರ ಮೇಲೆ ದಾಳಿ ಮಾಡಿದ ಹಲವು ಸನ್ನಿವೇಶಗಳೂ ಇದ್ದವು. ಈ ಕಲೆಕ್ಟಿವ್ ಅಂದರೆ ಈ ಜನಸಮುದಾಯವು ಬಾಲ್ ಬೇರಿಂಗ್‌ಗಳನ್ನು ಅರೆಯುವ ಗಿರಣಿಯ ಹಾಗೆ. ಅದರೊಳಗೆ ಎಸೆದ ಪ್ರತಿಯೊಂದೂ ಅಲ್ಲಿರುವ ಎಲ್ಲಾ ವಸ್ತುಗಳಿಗೆ ಪಕ್ಕಾ ವಿರೋಧಿ. ಇದೂ ಒಂದು ಬಗೆಯ ಕಾರ್ಮಿಕ ಸುಧಾರಣೆ. ಜನರು ಪರಸ್ಪರ ಡಿಕ್ಕಿ ಹೊಡೆಯುವಂತೆ ಬಲವಂತ ಮಾಡುವುದು. ಬಾಲ್ ಬೇರಿಂಗ್ ಘಟಕದ ಹಾಗೆ ಎಲ್ಲವೂ ಅಲ್ಲಿದ್ದ ಇತರೆ ವಸ್ತುಗಳ ಹಾಗೆಯೇ ಕಾಣುವ ಘಟಕಗಳಾಗುವವರೆಗೆ ಸಂಸ್ಕರಿಸುವುದು, ಉಜ್ಜುವುದು, ಬೆರೆಸುವುದು....

ಇದು ಕಾರ್ಮಿಕ ಶಿಬಿರದ ಕಾರ್ಯ.

ನಿಜ, ಮಣ್ಣಿನ ಮುದ್ದೆಗಳನ್ನು ಹೊತ್ತೊಯ್ಯುವುದು ತುಂಬಾ ಒಳ್ಳೆಯ ಕೆಲಸ. ಒಬ್ಬ ಬುದ್ಧಿಜೀವಿಯಾಗಿರುವ ನನ್ನನ್ನು ಬೈಯಲು ಆಗುವುದಿಲ್ಲ ಅನ್ನೋದಷ್ಟೇ ಅಲ್ಲ, ಬೇರೆಯವರನ್ನು ಬೈಯುವುದನ್ನು ನೋಡುವ ಸಂತಸವೂ ನನಗೆ ಸಿಗುತ್ತೆ. ಬೈಗುಳಗಳನ್ನು ಎಸೆಯೋವಾಗ ಕಾಣುವ ಕಲೆಗಾರಿಕೆಯನ್ನು ನಾನು ಆನಂದಿಸಬಹುದು. ಹಾಗೆ ಬೈಸಿಕೊಳ್ಳೋದು ನನ್ನ ಹಾಗೆ ಬುದ್ಧಿಜೀವಿಗಳಾಗಿದ್ದರೂ, ನಿಮ್ಮ ಹೊಟ್ಟೆ ಖಾಲಿ ಇದ್ದಾಗ ಮತ್ತು ನಿಮ್ಮ ಬೆನ್ನು ನಿಮ್ಮ ದೇಹದ ತೂಕದಷ್ಟೇ ಭಾರವನ್ನು ಹೊತ್ತಿರೋವಾಗ ನಿಮ್ಮೊಳಗಿಂದ ಕರುಣೆ ಮತ್ತು ಅನುಕಂಪ ಹೊರಟೇ ಹೋಗಿರುತ್ತವೆ ಅನ್ನಿ. ನೀವು 'ಇಲ್ಲಾರೀ, ಅವೆಲ್ಲವೂ ಜೀವದ್ರವ್ಯಗಳಾಗಿವೆ ಹೋಗಿವೆ' ಅನ್ನಬಹುದು.ಇತರರು ನಿಮಗಿಂತ ಕೆಟ್ಟ ಸ್ಥಿತಿಯಲ್ಲಿ ಇದ್ದುದನ್ನು ನೋಡುವ ಹಂತದಲ್ಲಿ ನೀವಿದ್ದಾಗ ಅದು ನಿಮಗೆ ಒಂಥರ ಸಮಾಧಾನ ನೀಡುತ್ತೆ. ಅದು ಯಾತನೆಪಡುವ ಗ್ರಹಿಕೆಯ ನಿಮ್ಮ ದೃಷ್ಟಿಕೋನವನ್ನು ಅವಲಂಬಿಸಿರುತ್ತೆ. ಇತರರು ನಿಮಗಿಂತ ಹೆಚ್ಚು ಯಾತನೆ ಪಡುತ್ತಿದ್ದಾರೆ ಎಂಬುದನ್ನಷ್ಟೆ ನೀವು ಗಮನಿಸಿದರೆ ಸಾಕು ; ನಿಮ್ಮ ಸ್ವಂತ ಯಾತನೆ ಹಠಾತ್ತಾಗಿ ಕಡಿಮೆಯಾದಂತೆ ಅನ್ನಿಸುತ್ತೆ.

ಈ ಅಂಶವನ್ನು ನೀವು ಗ್ರಹಿಸಿದಾಗ ಇಂದ್ರಿಯಗಳು ಕಾಣುವ ಎಲ್ಲವೂ ಅಸ್ತಿತ್ವದಲ್ಲಿ ಇರುವುದಿಲ್ಲ ಎಂಬುದು ಅರಿವಾಗುತ್ತ ಹೋಗುತ್ತದೆ. ಅದು ಕೇವಲ ನಿಮ್ಮ ಮನಸ್ಸಿನ ಕೆಲಸ. ಯಾರೂ ಆಗ ದೇವರನ್ನು, ಅಥವಾ ತಥಾಕಥಿತ ದೇಶನಾಯಕರನ್ನು ಜನರ ಯಾತನೆಯನ್ನು ಅಲಕ್ಷಿಸಿದ ಬಗ್ಗೆ ಅಥವಾ ದೇಶಕ್ಕೆ ಅನಂತ ಕ್ಲೇಶವನ್ನು ತಂದ ಬಗ್ಗೆ ಹೀಯಾಳಿಸಲಾಗದು. ಅಥವಾ ಬೇರೆಯವರು ನೋವು ಅಂತ ಕರೆಯೋ ಸಂಗತಿಯನ್ನು ಅವರ ಮೇಲೆ ಕೆಲವರು ಹೇರಲು ಬಿಟ್ಟ ಬಗ್ಗೆ ಅವರನ್ನು ದೂರಲಾಗದು.

ನಿಮಗೆ ನನ್ನ ದಿನಚರಿಯಲ್ಲಿ ಈ ದಿನ ಖಬರಿಲ್ಲದೆ ಬರೆದ ಟಿಪ್ಪಣಿ ಕಾಣಿಸಲಿಲ್ವೆ?

'ಹಸಿರಿನಲ್ಲಿ ಹುಡುಕಿದ್ದು' ಅಂದ್ರೆ ತರಕಾರಿಯನ್ನು ಸಿದ್ಧಪಡಿಸೋದಕ್ಕೆ ಮುಖ್ಯ ಬಾಣಸಿಗನಿಗೆ

ಸಹಾಯ ಮಾಡಿದ್ದು ಅಂತ. ಕಾರ್ಮಿಕ ಸುಧಾರಣಾ ಶಿಬಿರದಲ್ಲಿ ನಾಲ್ಕು ಠಾಣೆಗಳಿವೆ. ಠಾಣೆ ಅಂದ್ರೆ ಒಂದು ಉಪಶಿಬಿರ. ಇಡೀ ಶಿಬಿರದ ಒಂದು ವಿಭಾಗ. ಪ್ರತೀ ಠಾಣೆಯಲ್ಲೂ ಎಂಟುನೂರರಿಂದ ಒಂದು ಸಾವಿರ ಜನ ಇರ್ತಾರೆ. ಸಹಜವಾಗೇ ಇಷ್ಟು ಪ್ರಮಾಣದ ಖೈದಿಗಳಿಗೆ ಅಡುಗೆ ಮಾಡೋದಕ್ಕೆ ಅಡುಗೆ ಮನೆಗಳು ದೊಡ್ಡದಾಗೇ ಇರುತ್ತಲ್ವ? ಒಬ್ಬ ವ್ಯಕ್ತಿಯ ಧಾನ್ಯ ಪಡಿತರ ಕಡಿಮೆ ಇದ್ದಷ್ಟೂ ಶಿಬಿರಗಳಲ್ಲಿ ನೀರು ಮತ್ತು ಕಾಡು ಗಿಡಗಳ ಮೇಲಿನ ಖರ್ಚು ಹೆಚ್ಚುತ್ತೆ. ಈ ಕೆಲಸಕ್ಕಾಗಿ ಇಷ್ಟು ಕೈಗಳು ಬೇಕು: ಕಲ್ಲಿದ್ದಲಿಗೆ ಬೆಂಕಿ ಹಚ್ಚೋದು, ನೀರು ತರೋದು, ಮಡಕೆಗಳನ್ನು ತೊಳೆಯೋದು, ಹಸಿರನ್ನು ಹುಡುಕೋದು ಹೀಗೆ. ಅಡುಗೆಮನೆಯಲ್ಲಿ ಹಂಗಾಮಿ ಸಣ್ಣ ಕೆಲಸಗಾರನಾಗೋದು ಅಂದ್ರೆ ಇಡೀ ಶಿಬಿರದಲ್ಲಿ ಅತ್ಯಂತ ಹೊಟ್ಟೆಕಿಚ್ಚಿನಿಂದ ಕಾಣುವ ಕೆಲಸ. ಹೊರಜಗತ್ತಿನಲ್ಲಿ ದೊಡ್ಡ ಕಂಪೆನಿಯಲ್ಲಿ ಪ್ರಧಾನ ವ್ಯವಸ್ಥಾಪಕನಿಗೆ ಸಹಾಯಕನಾದ ಹಾಗೆ. ಕಾಯಿಲೆಯಿಂದ ನರಳುತ್ತ ರೋಗಗಳ ವಠಾರದಲ್ಲಿ ಬಿದ್ದುಕೊಂಡಿರುವ ವ್ಯಕ್ತಿಗಳು ಈ ಸವಲತ್ತಿಗಾಗಿ ಸ್ಪರ್ಧೆಯನ್ನೂ ನಡೆಸಲು ತಯಾರು. 'ಸೋರೆಕಾಯಿ–ಮತ್ತು–ಹಸಿರು ತರಕಾರಿ – ಬದಲಿಗೆ – ಕಡಿಮೆ – ಪಡಿತರ – ಬಳಕೆ – ಮಾಡುವ' ನೀತಿಯ ಕಾಲದಲ್ಲಿ, ಊಟದಲ್ಲಿ ತರಕಾರಿಗಳದ್ದೇ ಮುಖ್ಯ ಪಾತ್ರ ; ಅವು ಎಡೆಯ ಪದಾರ್ಥವಲ್ಲ. ಜನ ಬರೀ ತರಕಾರಿಗಳನ್ನು ಮಾತ್ರ ತಿನ್ನುತ್ತ ಜೀವ ಹಿಡಿದುಕೊಂಡಿದ್ದರು.

ಹೌದು ಬಿಡಿ, ನಿಮಗೆ ಗೊಂದಲ ಹುಟ್ಟಬಾರದು. ನಾವು ತಿನ್ನುತ್ತಿದ್ದ ತರಕಾರಿಗಳು ಸಾಮಾನ್ಯ ಮೆನ್ಯುನಲ್ಲಿ ಸಿಗುತ್ತಿದ್ದ ತರಕಾರಿಗಳಲ್ಲ. ಅವು ಸಾಮಾನ್ಯವಾಗಿ ಪಠ್ಯಪುಸ್ತಕ ಅಥವಾ ಸಸ್ಯಶಾಸ್ತ್ರದಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಭತ್ತದ ಗದ್ದೆಯಲ್ಲಿ ಬೆಳೆಯುವ ಕಳೆಗಿಡಗಳು. ಅಥವಾ, ಕಣ್ಣಿಗೆ ಕಾಣುವ ಯಾವುದೋ ಹುಲ್ಲು.

ನನಗಂತೂ ಯಾವುದೇ ಹುಲ್ಲು ತಿನ್ನೋದು ಅಂದ್ರೆ ತುಂಬಾ ಇಷ್ಟ. ಅದರಲ್ಲೂ ಕಹಿ ಹುಲ್ಲು ಮತ್ತು ಗೋಣಿಸೊಪ್ಪು. ಕುಕೂಕಾಯಿ ಮತ್ತು ಡ್ಯಾಂಡೆಲಿಯಾನ್ ಗಿಡಗಳು ಸೇವಂತಿಗೆ ಹೂವಿನ ಥರ ಸಂಯುಕ್ತ ಕುಟುಂಬಕ್ಕೆ ಸೇರಿವೆ. ಡ್ಯಾಂಡೆಲಿಯಾನ್ ಎಲೆಗಳು ಯೂರೋಪ್ ಮತ್ತು ಜಪಾನ್‌ನ ಊಟದ ಮೇಜುಗಳಲ್ಲಿ ತುಂಬಾ ಪ್ರಸಿದ್ಧ. ಅವುಗಳು ಇಷ್ಟು ಜನಪ್ರಿಯ ಎಂದು ನಮಗೆ ಅವನ್ನು ತಿನ್ನುವಾಗ ಗೊತ್ತಿರಲಿಲ್ಲ. ಅವು 'ಹುಲ್ಲು' ಅಥವಾ 'ಕಳೆಗಿಡ' ಅಂತಲೇ ತಿಳಿದಿದ್ದೆವು. ಅವನ್ನೇ ಮಜವಾಗಿ ತಿನ್ನುತ್ತಿದ್ದೆವು.

ಗದ್ದೆಯಿಂದ ಕಿತ್ತ ಹುಲ್ಲು ಅಡುಗೆಮನೆಗೆ ಬಂದಮೇಲೆ ಮಡಕೆಯೊಳಗೆ ಹೋಗುವ ಮುನ್ನ ಅವನ್ನು ಆರಿಸಬೇಕು. ಅವನ್ನು ಕಿತ್ತವರು ಸಾಮಾನ್ಯವಾಗಿ ಮಣ್ಣು–ಬೇರಿನ ಸಹಿತ ಕೊಡುತ್ತಿದ್ದರು. ಅದನ್ನೇ ತಿನ್ನಬೇಕು ಎಂದು ಗೊತ್ತಿದ್ದರೂ ಅಂಥ ಎಚ್ಚರಿಕೆ ವಹಿಸ್ತಿರಲಿಲ್ಲ. ಉಳಿದೆಲ್ಲ ಸಂಗತಿಗಳ ಹಾಗೆ ಪ್ರತೀ ಖೈದಿ ದಿನಾಲೂ ಎಷ್ಟು ಗಿಡ ಕೀಳಬೇಕೆಂಬ ಗುರಿಯೂ ಇರುತ್ತೆ. ಬೇರು ಮತ್ತು ಮಣ್ಣನ್ನು ಹಾಗೇ ಬಿಡೋದ್ರಿಂದ ಗಿಡದ ತೂಕ ಹೆಚ್ಚುತ್ತೆ. ಮಣ್ಣಿನ ಮುದ್ದೆಗಳನ್ನು ಗೋಡೆ ಕಟ್ಟಲು ಬಳಸೋದಕ್ಕೆ ಬರುತ್ತೋ ಇಲ್ಲವೋ ಎಂಬ ಬಗ್ಗೆ ಗಮನ ವಹಿಸದ ಮಾದರಿಯೇ ಇಲ್ಲಿಯೂ ಜಾರಿ.

'ಹಸಿರಿನಲ್ಲಿ ಹುಡುಕೋದು' ಅಂದ್ರೆ ತಿನ್ನಬಲ್ಲ, ತಿನ್ನಲಾಗದ ಗಿಡಗಳನ್ನು ಬೇರ್ಪಡಿಸೋದು

ಅಂತಲೂ ಅಲ್ಲ. ನಾವು ತಿನ್ನದೇ ಇರೋ ಗಿಡವನ್ನು ಕೀಳೋ ಮಾತೇ ಇಲ್ಲ. ಅಥವಾ ಸತ್ತ ಗಿಡಗಳನ್ನು ಬೇರ್ಪಡಿಸೋದೂ ಅಲ್ಲ, ಪೆಟ್ಟಾದ ಕಾಂಡಗಳ ಗಿಡಗಳನ್ನು ಗುರುತಿಸೋದೂ ಅಲ್ಲ. ಹಾಗೇನಾದ್ರೂ ನೀವು ಮಾಡಿದ್ರೆ ನೀವು ಕೆಲಸಕ್ಕೆ ನಾಲಾಯಕ್. ಅಡುಗೆ ಮಾಡುವಾತ ನಿಮ್ಮತ್ತ ಕಿರುಚುತ್ತಾನೆ. 'ಹುಡುಕೋದು' ಅಂದ್ರೆ ಗಿಡಕ್ಕೆ ಅಂಟಿದ ಕೊಳಕನ್ನು ಮೆದುವಾಗಿ ಕೊಡಹೋದು. ಅದಂತೂ ಅದ್ಭುತ ಕೆಲಸ. ಮಣ್ಣಿನ ಮುದ್ದೆ ಎಳೆಯೋದಕ್ಕಿಂತ ಉತ್ತಮ. ನಾನು ಒಂದು ಮಣ್ಣಿನ ಮುದ್ದೆಯನ್ನೇ ಸ್ಟೂಲ್ ಥರ ಮಾಡಿಕೊಂಡು ಕೂರುತ್ತಿದ್ದೆ. ಪಕ್ಕದಲ್ಲಿ ಹಸಿರಿನ ರಾಶಿ. ನಿಧಾನವಾಗಿ, ಕಟ್ಟುಗಳನ್ನು ಕೊಡವೋದು. ಕಹಿಗಿಡ ಅಥವಾ ಗೋಣಿಸೊಪ್ಪು ತುಂಬಾ ರಸವತ್ತಾಗಿದೆ ಅನ್ನಿಸಿದ್ರೆ ಸಹಜವಾಗೇ ನಾನು ರುಚಿ ನೋಡ್ತೇನೆ.

ಎಲ್ಲಾ ಹಸಿರನ್ನು ಹುಡುಕೋ ಹೊತ್ತಿಗೆ, ನನ್ನ ಹೊಟ್ಟೆ ತುಂಬಿರುತ್ತೆ.

ಹವಾಮಾನ ಚೆನ್ನಾಗಿದೆ. ಸೂರ್ಯ ಜನ ಮತ್ತು ನೆಲದ ಮೇಲೆ ಸಾಕಷ್ಟು ಬಿಸಿಲು ಹಾಯಿಸಲು ಶ್ರಮಿಸ್ತಿದಾನೆ. ಆಗ ನಾನು ಹಸಿರಿನ ರಾಶಿಯನ್ನು ನೆರಳಿನ ಕಡೆ ಒಯ್ಯುತ್ತಿದ್ದೆ. ಬೀಚುಗಳಲ್ಲಿ ಛತ್ರಿಗಳ ಕೆಳಗೆ ಕುಳಿತಿರೋರಿಗೂ ಅಷ್ಟು ಸಮಾಧಾನ ಆಗಲ್ಲ ಅಂತ ಕಾಣುತ್ತೆ. ನಾನು ತಿಂತಾ ಇದ್ದದ್ದು ರಾಶಿಯ ಮಧ್ಯೆ ಇರ್ತಿತ್ತು. ನೆಲದ ದಟ್ಟ ,ತೇವ ಪರಿಮಳ. ರಾಶಿಯ ಮಧ್ಯೆ ಇದ್ದಮೇಲೆ ಕೇಳಬೇಕೆ, ಆ ಕಟ್ಟುಗಳು ಕೆಲವೊಮ್ಮೆ ಸಖತ್ತಾಗಿ ಕೊಳೆತಿರುತ್ತಿದ್ದವು.

ಹೊರಜಗತ್ತಿನಲ್ಲಿ ಐಸಿರಿಯಿಂದ ಬದುಕೋ ಹಾಗೆ ನಟಿಸುವ ಬಡವನ ಬಗ್ಗೆ ಒಂದು ಜೋಕ್ ಇದೆ. ಪ್ರತೀ ಸಲ ಆತ ಊಟ ಮುಗಿಸಿದ ಮೇಲೆ ಬಾಯಿಯನ್ನು ಹಂದಿಮಾಂಸದ ತುಣುಕಿನಿಂದ ಒರೆಸಿಕೊಳ್ತಾ ಇದ್ದನಂತೆ. ಅವನನ್ನು ನೋಡಿದ ಜನ 'ಓಹೋ, ಇವ ಈಗಷ್ಟೇ ಮಾಂಸ ತಿಂದಿದಾನೆ' ಅಂದ್ಕೋತಿದ್ರಂತೆ. ಈ ಶಿಬಿರಗಳಲ್ಲಿ ಖೈದಿಯ ಬಾಯಿ ಹಸಿರಾಗಿದೆಯೋ ಇಲ್ಲವೋ ಅಂತ ನೋಡೋದು ಕ್ರಮ. ಆತನ ತುಟಿಗಳ ಮೇಲೆ ಕ್ಲೋರೋಫಿಲ್ ಲಾಸ್ಯವಾಡುತ್ತಿದ್ದರೆ ಅದೃಷ್ಟವಂತ.

ಖೈದಿಗಳು ಹಸಿರನ್ನು ಕದ್ದಿದಾರಾ ಅಂತ ಕೆಲವೊಮ್ಮೆ ತಂಡನಾಯಕ ಪರಿಶೀಲನೆ ಮಾಡ್ತಿದ್ದ. ಜಾಣ ಖೈದಿಗಳು ತಿಂದ ಕೂಡಲೇ ಡಿನ್ನರ್ ಪಾರ್ಟಿಗಳಲ್ಲಿ ಕುಳಿತವರ ಹಾಗೆ ನೀಟಾಗಿ ಬಾಯಿಯನ್ನು ಒರೆಸಿಕೊಳ್ಳುತ್ತಿದ್ದರು. ಆದರೆ ಅಂತ ಅತಿಯಾಸೆಯ ಖೈದಿಯೊಬ್ಬ ತಂಡನಾಯಕನಿಗೆ ಸಿಕ್ಕಿದರೆ ಕಥೆ ಮುಗೀತು. ಶಂಕಿತ ವ್ಯಕ್ತಿಯ ಬಾಯಿಯನ್ನು ಆತ ತೆರೆಸುತ್ತಿದ್ದ; ಕುದುರೆಯ ಬಾಯಿಯನ್ನು ಪರಿಶೀಲನೆ ಮಾಡೋ ಹಾಗೆ. ಇದೇನು ಬ್ಯಾಂಕ್ವೆಟ್ ಹಾಲ್ ಅಲ್ವಲ್ಲ, ನಿಮ್ಮ ಬಾಯಿ ಮುಕ್ಕಳಿಸೋಕೆ ನೀರು ಇದ್ರೆ ತಾನೆ ! ಸಾಮಾನ್ಯವಾಗಿ 'ಪರೀಕ್ಷೆಗೆ ಒಳಗಾದ ಖೈದಿ' ಎಂದ್ರೆ 'ಸಿಕ್ಕಿಬಿದ್ದ ಖೈದಿ' ಅಂತಾನೇ.

'ಹಸಿರುಬಾಕ' ಸಿಕ್ಕಿಬಿದ್ದರೆ ಅವನನ್ನು 'ಚಿತ್ರೀಕರಿಸ'ಲಾಗುತ್ತೆ. 'ಚಿತ್ರೀಕರಿಸೋದು' ಏನು ಅಂತ ನಾನು ಆಮೇಲೆ ಹೇಳ್ತೇನೆ.ನಿಮ್ಮಂಥ ಸಹೃದಯಿ ಓದುಗರು ಹೀಗೇ ಜೊತೆಗಿದ್ದರೆ ಅವರಿಗೆ ಇನ್ನೂ ಕುತೂಹಲಕರ ವಿಷಯಗಳು ತಿಳಿಯುತ್ತವೆ.

ಹಾಗಂತ ನಾನೇನೂ ಹೆದರಬೇಕಾಗಿರ್ಲಿಲ್ಲ. ಹಸಿರನ್ನು ಹುಡುಕಲು ನನ್ನನ್ನು ನೇಮಿಸಿದಾರೆ ಅಂದ್ರೆ ನನಗೆ ವಿಶೇಷ ಗಮನ ನೀಡಿದ್ದಾರೆ ಅಂತಲೇ ಅರ್ಥ. ಅಂದ್ರೆ ಈ ದಿನ ನನ್ನ ಕೆಲಸ

ಭಾರೀ ಪ್ರಮಾಣದಲ್ಲಿ ಇರಲ್ಲ. ಬೆಳಗ್ಗೆ ಮುದ್ದೆಗಳನ್ನು ಹೊತ್ತೆ. ಮಧ್ಯಾಹ್ನ ಹಸಿರು ಹುಡುಕಿದೆ. ಎರಡೂ ತುಂಬಾ ಇಷ್ಟವಾದ ಕೆಲಸಗಳು. 'ನೋಡಿಸಿಕೊಳ್ಳೋ' ಸ್ತರದಲ್ಲಿ ಇರೋ ಖೈದಿಗಳು ಮಾತ್ರವೇ ಹೀಗೆ ಅದೃಷ್ಟವಂತರು. ಇವರು ಸಾಮಾನ್ಯವಾಗಿ 'ಸಂರಕ್ಷಣಾ ಮೌಲ್ಯ' ಇರೋ ಖೈದಿಗಳು. ಅಥವಾ ನಿರ್ದಿಷ್ಟ ಬಳಕೆ ಇರೋ ವ್ಯಕ್ತಿಗಳು.

ಮೊದಲನೆಯವರ ಪೈಕಿ ಹೊರಗಡೆ ಪ್ರಭಾವಿಯಾಗಿರೋ ವ್ಯಕ್ತಿಗಳು ಬರ್‍ತಾರೆ. ಅಥವಾ ತಂಡನಾಯಕನ ಜೊತೆಗೆ ದೋಸ್ತಿ ಇರೋರು ಎನ್ನಬಹುದು. ಉದಾಹರಣೆಗೆ ಇಲ್ಲಿಗೆ ಬಂದ ಖೈದಿಯೊಬ್ಬ ಸರ್ಕಾರದಲ್ಲಿ ಪ್ರಾಂತಮಟ್ಟದ ಹುದ್ದೆ ಹೊಂದಿದ್ದ. ಶಿಬಿರಕ್ಕೆ ಬಂದಾಗಿನಿಂದ್ಲೂ ಆತ ಒಂದು ದಿನವೂ ದೈಹಿಕ ಕೆಲಸ ಮಾಡಲಿಲ್ಲ. ಆತ ಜುಜುಬಿ ಕೆಲಸ ಮಾಡಲಿಕ್ಕೆ ನಾಯಕರು ಬಿಟ್ಟಿದ್ದರು. ಆತನಿಗೆ ಖಾಸಗಿ ಕೋಣೆಯೂ ಇತ್ತು. ಆತ ಉಳಿದ ಖೈದಿಗಳ ಜೊತೆ ಊಟಕ್ಕೆ ಸಾಲಿನಲ್ಲಿ ನಿಲ್ಲಬೇಕಾಗಿರ್‍ಲಿಲ್ಲ. ಸಂಜೆ ಆತ ವರದಿ ಮತ್ತು ಪಾಠಗಳನ್ನು ಕೇಳಬೇಕಿರಲಿಲ್ಲ. ಆಮೇಲೆ ಅಲ್ಲಿ ಯಾವುದೋ ಪುಸ್ತಕದಲ್ಲಿ ಯುದ್ಧದ ನಾಯಕನ ಪಾತ್ರದ ಪ್ರತಿಷ್ಠೆ ಹೊಂದಿದ ವ್ಯಕ್ತಿ ಇದ್ದ. ವಿಮೋಚನೆಯ ನಂತರ ಆತ ದಕ್ಷಿಣದ ನಗರವೊಂದರ ಮೇಯರ್ ಆಗಿದ್ದ. ಆತ ಈಶಾನ್ಯಕ್ಕೆ ಬಂದಮೇಲೆ ಅದೃಷ್ಟ ತಿರುಗಿತು. ಶಿಬಿರಕ್ಕೆ ಬಂದಾಗ ಆತ ಊಟಕ್ಕಾಗಿ ಹಂದಿಗಳ ಜೊತೆ ಕಾದಾಡಬೇಕಾಗಿತ್ತು. ತಂಡದ ನಾಯಕರಿಗೆ ಇದು ಗೊತ್ತಾದದ್ದೇ ತಡ, ಅವನನ್ನು ಮುಖ್ಯ ಅಡುಗೆ ಮನೆಯಲ್ಲಿ ಮುಖ್ಯ ಬಾಣಸಿಗನನ್ನಾಗಿ ಮಾಡಿದರು. ನೋಡ್ತಾ ಇರೋ ಹಾಗೇ ಆತ ಎಲ್ಲರಿಗಿಂತ ದಪ್ಪಗಾಗಿ ಬಿಡೋದೆ !

ಇನ್ನು ವಿಶೇಷ ಆತಿಥ್ಯ ಪಡೆಯುತ್ತಿದ್ದ ಎರಡನೆಯ ಬಗೆಯ ಖೈದಿ ಎಂದರೆ ಇಡೀ ಕ್ಯಾಂಪಿನಲ್ಲಿ ಮಾಡಲೇಬೇಕಾದ ಕೆಲಸವನ್ನು ಬಲ್ಲವ. ಭಾರೀ ಟ್ರಕ್ಕಿನ ಚಾಲಕ ಅಥವಾ ಅನುಭವೀ ಹೊಲ ವ್ಯವಸ್ಥಾಪಕ. ಅವರು ಜೀವಂತವಾಗಿ ಇರುವಂತೆ ನೋಡಿಕೊಳ್ಳಬೇಕಾದ್ದು ತುಂಬಾ ಅಗತ್ಯ.

ಆದರೆ ನಮ್ಮಂಥ ಸೃಜನಶೀಲ ವಿಭಾಗದ ಅಪರಾಧಿಗಳು ಯಶಸ್ವೀ ಸುಧಾರಣೆಯ ಭಾಗವಂತೂ ಆಗಿರಲಿಲ್ಲ. ನನ್ನಂಥ ವ್ಯಕ್ತಿಯನ್ನು ಚೆನ್ನಾಗಿ ನೋಡಿಕೊಂಡ್ರೆ ಇತರೆ ಬರಹಗಾರರಿಗೆ ಅಪರಾಧ ಮಾಡೋದು ಅಂಥ ಕೆಟ್ಟ ಕೆಲಸವೇನೂ ಅಲ್ಲ ಅಂತ ಅನ್ನಿಸ್ತಿತ್ತು ನೋಡಿ!

ನಮ್ಮ ನಾಯಕರಿಗಂತೂ ಲೇಖಕರ ಮೇಲೆ ಸದಾ ಅನುಮಾನ. ಆರು ವರ್ಷಗಳ ನಂತರ, ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ಈ ಮಾನಸಿಕತೆ ಇನ್ನೂ ಸ್ಪಷ್ಟವಾಯಿತು. ಅಷ್ಟು ಹೊತ್ತಿಗೆ ಈ ಬಗೆಯ ದುರದೃಷ್ಟ ಸನ್ನಿವೇಶಕ್ಕೆ ಸಿಗದೆ ಇರೋದಕ್ಕೆ ಯಾರಿಗೂ ಸಾಧ್ಯವಾಗ್ತಿರಲಿಲ್ಲ. ಅಷ್ಟಾಗಿಯೂ ಅದೃಷ್ಟವೂ ಅಲ್ಲಿರ್‍ತಿತ್ತು. ನಾನು ಅನುಭವಿಸಿದ ಹಾಗೆ. ಇದೆಲ್ಲ ಕೇವಲ ಛಾನ್ಸ್ ಎಂದು ನನಗೆ ಗೊತ್ತಿದ್ದರಿಂದ ನಾನು ಈ ಭಾವವನ್ನು ಪ್ರಶಂಸ್ತಿದ್ದೆ. ನನಗೆ ಸಂರಕ್ಷಣಾ ಮೌಲ್ಯ ಇದೆ ಎಂಬ ಭಾವದಿಂದ ನಾನು ನಾಯಕರನ್ನು ಹೆಚ್ಚು ಅಭಿಮಾನದಿಂದ ನೋಡ್ತಿದ್ದೆ.

ನಾನು ಹಸಿರನ್ನು ಎಲ್ಲರ ಎದುರಿಗೇ, ಸಾರ್ವಜನಿಕವಾಗೇ ತಿಂತಾ ಇದ್ದೆ. ತಂಡದ

ನಾಯಕ ನನ್ನನ್ನು ನೋಡ್ತಾನೆ ಅನ್ನೋ ಭಯವೂ ಇರಲಿಲ್ಲ. ಹಸಿರಿನಲ್ಲಿ ಹುಡುಕೋದಕ್ಕೆ ನನ್ನನ್ನು ಹಚ್ಚೋದು ಅಂದ್ರೂ ಒಂದೇ; ತಿನ್ನು ಅಂತ ನನ್ನನ್ನು ಕರೆಯೋದೂ ಒಂದೇ. ನಾಯಕರ ಸದುದ್ದೇಶಕ್ಕೆ ಬೆಲೆ ಕೊಟ್ಟು ನಾನು ಹುಚ್ಚನ ಥರ ತಿಂತಾ ಇದ್ದೆ. ನಾನು ಜೀವಂತವಾಗಿರಬೇಕು ಅನ್ನೋ ಅವರ ಹೃತ್ಪೂರ್ವಕ ಆಶಯವನ್ನು ಜಾರಿಗೆ ತರೋದಕ್ಕೆ ನಾನು ಶ್ರಮಿಸ್ತಿದ್ದೆ. ನನ್ನ ಜೀರ್ಣಶಕ್ತಿಯಂತೂ ಅದ್ಭುತವಾಗೇ ಇತ್ತಲ್ಲ, ಅದರಲ್ಲೂ ಕಳೆಗಿಡಗಳು ಬಹುಬೇಗ ಜೀರ್ಣವಾಗುತ್ತವೆ.

ನೀವು ಎಷ್ಟೇ ತಿನ್ನಿ, ಹೊಟ್ಟೆ ಉಬ್ಬಿದ ಹಾಗೆ ಅನ್ನಿಸಲ್ಲ.

ನಾಯಕರು ನನ್ನ ಬಗ್ಗೆ ಇಷ್ಟು ನಿಗಾ ವಹಿಸಿದ್ದಾದರೂ ಯಾಕೆ? ನನ್ನ ದಿನಚರಿಯ ಉಲ್ಲೇಖಗಳು ಇದನ್ನು ಸ್ಪಷ್ಟಪಡಿಸುತ್ತವೆ: 'ಹೊಳೆಯುತ್ತಿರು ಕೆಂಪು ಬಣ್ಣವೆ.'

ನಮ್ಮ ಕ್ಯಾಂಪಿನಲ್ಲಿದ್ದ ಹಿರಿಯ ಮುಖ್ಯಾಧಿಕಾರಿಯೇ ಇದರ ಹೀರೋ. ಆತ ಪಕ್ಷದ ಕಾರ್ಯದರ್ಶಿ. ಹಳೆ ಕ್ರಾಂತಿಕಾರಿ. ನಮ್ಮ ಕ್ಯಾಂಪು ಸಾರ್ವಜನಿಕ ಭದ್ರತಾ ವ್ಯವಸ್ಥೆಯ ಭಾಗವಾಗಿದೆ. ಹೀಗಾಗಿ ಪಕ್ಷದ ಕಾರ್ಯದರ್ಶಿ ಇಲ್ಲಿ ರಾಜಕೀಯ ಆಯುಕ್ತನಾಗ್ತಾನೆ. ನಾನು 1958ರಲ್ಲಿ ಆಗಷ್ಟೇ ಇಲ್ಲಿಗೆ ಬಂದಾಗ ಆತ ನನ್ನ ಮೇಲೆ ತುಂಬಾ ಪ್ರಭಾವ ಬೀರಿದ. ನಮ್ಮ ಆದರ್ಶದ ಪಕ್ಕಾ ಪ್ರತಿನಿಧಿ. ಕೆಲಸಗಾರ – ರೈತ – ಸೈನಿಕರ ವರ್ಗದ ಪ್ರತಿನಿಧಿ.

ನಾನು ಇಲ್ಲಿಗೆ ಬರೋದಕ್ಕೆ ಮುಂಚೆ ನೂರಾರು ಸ್ವಯಂ ಪರೀಕ್ಷೆಯ ಹಾಳೆಗಳನ್ನು ಬರೆದಿದ್ದೆ. ಅಸಂಖ್ಯ ಟೀಕೆ – ಸಂಘರ್ಷದ ಗೋಷ್ಠಿಗಳನ್ನು ಎದುರಿಸಿದ್ದೆ.
ನಾನು ಈ ಕಾರ್ಮಿಕ – ರೈತ – ಸೈನಿಕರಿಂದ ಕಲಿತು ನನ್ನ ವಿಶ್ವದೃಷ್ಟಿಯನ್ನೇ ಬದಲಿಸಿಕೊಳ್ಳುವುದೊಂದೇ ನನ್ನ ಅಂತಿಮ ಗುರಿ ಎಂದು ಪ್ರತಿಜ್ಞೆ ಮಾಡಿದ್ದೆ. ಈಗ ನಾನು ನನ್ನ ನಿಜ ಆದರ್ಶದ ಎದುರಿಗೇ ನಿಂತಿದ್ದೆ. ನನ್ನ ಹಸಿದ ಎರಡೂ ಕಣ್ಣುಗಳು ಅಯಾಚಿತವಾಗಿ ಮಿನುಗಿದವು.

ನನ್ನ ಜೊತೆ ಬಂದಿದ್ದ ಬುದ್ಧಿಜೀವಿಗಳ ಗುಂಪು ಒಂದಷ್ಟೋ ಹೋಮ್‌ವರ್ಕ್ ಮಾಡಿರಲಿಲ್ಲ. 1958ರ ಆ ಮೊದಲ ಫಸಲಿನ ಹೊತ್ತು ಹೇಗೆ ಕಟಾವು ಮಾಡಬೇಕೆಂದು ಆ ಹಳೆ ಮುಖ್ಯಾಧಿಕಾರಿ ಖುದ್ದಾಗಿ ಹೇಳಿಕೊಟ್ಟಿದ್ದ. ಹೇಗೆ ಕತ್ತಿ ಹಿಡಿಯಬೇಕು, ಹೇಗೆ ಭತ್ತದ ಗಿಡಗಳನ್ನು ಬಾಗಿಸಬೇಕು, ಹೇಗೆ ಅವನ್ನೆಲ್ಲ ಕತ್ತರಿಸಿ ಗಾಡಿಗೆ ಹೇರಬೇಕು ಎಲ್ಲವನ್ನೂ ವಿವರಿಸಿದ್ದ. ಕೈ ಹಿಡಿದು ಕಲಿಸಿದ್ದ. ನಿಜಕ್ಕೂ ಕಾರ್ಮಿಕ ಸುಧಾರಣೆಯ ಪ್ರತೀ ಅಂಶವನ್ನೂ ಆತ ಕಲಿಸಿದ್ದ.

ನಮ್ಮ ಕ್ಯಾಂಪಿನಲ್ಲಿ ಸಾವಿರಾರು ಎಕರೆ ಗದ್ದೆ ಇತ್ತು. ಕಟಾವು ಮುಗಿದಿತ್ತು. ಆದರೆ ಫಸಲನ್ನು ಒಕ್ಕುವ ಬಯಲಿಗೆ ಒಯ್ದಿರಲಿಲ್ಲ. ಆತ ಒಂದು ಸಭೆ ಕರೆದು ಹೇಗೆ ಭತ್ತದ ಗಿಡಗಳನ್ನು ಕಟ್ಟಬೇಕೆಂದು ತೋರಿಸಿಕೊಟ್ಟಿದ್ದ. ಒಂದು ಖುರ್ಚಿಯನ್ನು ಕಟ್ಟಿನ ಥರ ತೋರಿಸಿದ್ದ. ಹೇಗೆ ಹಗ್ಗವನ್ನು ಸುತ್ತಿ ಬಿಗಿಯಬೇಕು, ಅದನ್ನು ಮಾಡಿದ ಮೇಲೆ ಹೇಗೆ ವ್ಯಕ್ತಿ ನೆಲದ ಮೇಲೆ ಕುಳಿತು ರಾಶಿಯ ಸುತ್ತ ಬಂದಿರೋ ಹಗ್ಗವನ್ನು ಕೈಗಳಿಂದ ತೆಗೆದುಕೊಂಡು ಹೇಗೆ ಸುಲಭವಾಗಿ ಮೇಲೇಳಬಹುದು ಎಂದು ಆತ ತೋರಿಸಿದ್ದ.

‘ಈವರೆಗೆ ನೀವು ಶಾಲೆಯಲ್ಲಿ ಕಲಿತದ್ದೆಲ್ಲ ಹಾಳು, ಕೆಲಸಕ್ಕೆ ಬಾರದ್ದು. ಈಗ ನಾನು ಹೇಳಿಕೊಡ್ತಾ ಇರೋದೇ ನಿಜವಾದ ಪ್ರತಿಭೆ. ಜ್ಞಾನ ಅಂದ್ರೇನು ಗೊತ್ತ?ತಿನ್ನಲಿಕ್ಕೆ ಬೇಕಾದಷ್ಟು ಸಿಗೋದನ್ನು ಖಚಿತಪಡಿಸಿಕೊಳ್ಳೋ ಸಾಮರ್ಥ್ಯಕ್ಕೇ ಜ್ಞಾನ ಅಂತಾರೆ. ನೀವು ಕೇವಲ ಜ್ಞಾನದಿಂದ ಹೊಟ್ಟೆ ತುಂಬಿಸಿಕೊಂಡು ಧಾನ್ಯದ ಒಂದು ಕಾಳನ್ನೂ ಬೆಳೆಯೋದು ಹ್ಯಾಗೆ ಅಂತ ತಿಳೀದೇ ಇದ್ರೆ ಅದೆಂಥ ಹೊಲಸು ಅಮೇಧ್ಯ ಜ್ಞಾನ?’

ಅವತ್ತು ಯಾರೂ ಕೆಲಸಕ್ಕೆ ಹೋಗಲಿಲ್ಲ. ನಾವು ಅವನ ಪಾಠವನ್ನೇ ತದೇಕಚಿತ್ತದಿಂದ, ಗೌರವದಿಂದ ಕೇಳಿದೆವು. ಅವನ ಮುಖದ ತುಂಬಾ ನೆರಿಗೆಗಳಿವೆ. ಆತ ನಮ್ಮೆದುರು ಪ್ರದರ್ಶನ ಮಾಡ್ತಿದ್ದ ಹಾಗೆ ಉದ್ವಿಗ್ನನಾಗ್ತಾನೆ. ಬಾಯಿಯಿಂದ ಜೊಲ್ಲು ಹಾರುತ್ತೆ. ಮಾತಂತೂ ಆಶುಭಾಷಣ ಇದ್ದಹಾಗೆ. ಶಾಂಗ್ ಕ್ಸಿ ಪ್ರಾಂತದ ಅತ್ಯಂತ ಬಡಪ್ರದೇಶವಾದ ಶಾನ್‌ಬೀಯ ಪ್ರತಿಜ್ಞೆಗಳು ಅವನ ಬಾಯಲ್ಲಿ ಸರಾಗವಾಗಿ ಹೊರಡುತ್ತವೆ. ಪ್ರಾಂತೀಯ ಸೊಗಡು ಮಾತ್ರವಲ್ಲ, ಅವನ ಮಾತೇ ತುಂಬಾ ವರ್ಣರಂಜಿತ. ತಂಡನಾಯಕ ಅಥವಾ ಠಾಣೆನಾಯಕ ಮಾತಾಡ್ತಿದ್ರೆ ನಾವು ಹಾಗೇ ನಿದ್ದೆಗೆ ಜಾರ್ತಿದ್ದೆವು. ಆದ್ರೆ ಈತ ಬಂದರೆ ಸಾಕು, ಎಂಥ ಉತ್ಸಾಹ! ಅವನ ಹತ್ರ ಬೈಸಿಕೊಳ್ಳೋದೂ ಒಂಥರ ಮಜಾ.

ಆದರೆ ಅವನ ಬೈಗುಳಗಳಿಗೆ ನಾವು ಬೆಲೆ ಕೊಡ್ತಿರಲಿಲ್ಲ. ಅರವತ್ತು ದಾಟಿದ್ದ ಆತ ದಿನಾಲೂ ಗದ್ದೆಗೆ ಹೋಗಿ ಅಲೆದಾಡ್ತಿದ್ದ. ಯಾರಾದ್ರೂ ಕೆಲಸ ಮಾಡ್ದೆ ಇದ್ರೆ ಆತ ಬೈತಿದ್ದದ್ದು ಖೈದಿಯನ್ನಲ್ಲ, ತಂಡನಾಯಕನನ್ನು. ಖೈದಿಗಳಿಗೆ ತಂಡನಾಯಕನ ಹತ್ರ ಬೈಸಿಕೊಳ್ಳೋದಕ್ಕಿಂತ ಅವನ ಹತ್ರ ಬೈಸಿಕೊಳ್ಳೋದಕ್ಕೇ ಇಷ್ಟ. ಯಾಕಂದ್ರೆ ಹಾಗೆ ಬೈಯ್ಯೋದಕ್ಕೆ ತಂಡನಾಯಕ ಇನ್ನೊಬ್ಬ ಖೈದಿಯನ್ನು ಬಳಸ್ತಿದ್ದ. ಆದ್ರೆ ಈತ ಮಾತ್ರ ತಾನೇ ಖುದ್ದಾಗಿ ಬೈತಿದ್ದ. ಖೈದಿಯ ಗುದ್ದಲಿ ತೆಗೆದುಕೊಂಡು ಹೀಗೆ ಎಂದು ಹೇಳಿಕೊಡ್ತಿದ್ದ.

ಖೈದಿಗೆ ಆಗ ಒಂದು ಕ್ಷಣ ವಿರಾಮಾನೂ ಸಿಗ್ತಿತ್ತು.

‘ಮನುಷ್ಯರು ಎಲ್ಲಾ ವಸ್ತುಗಳಿಗೆ ಸ್ಫೂರ್ತಿ. ನಿಮ್ಮಂಥ ಬುದ್ಧಿಜೀವಿಗಳಂತೂ ಉಳಿದವರಿಗಿಂತ ಹೆಚ್ಚು! ಅದಕ್ಕೇ ನೀವು ಬೇರೆಯವರಿಗಿಂತ ಚೆನ್ನಾಗಿ ಕೇಳಬೇಕು’ ಅವನ ಉಪನ್ಯಾಸ ಸಾಮಾನ್ಯವಾಗಿ ಶುರುವಾಗೋದೇ ಹೀಗೆ. ಬುದ್ಧಿಜೀವಿಗಳು ಯಾವಾಗ್ಲೂ ವಿಧೇಯವಾಗಿರಬೇಕು ಅಂತ ಆತ ಸದಾ ಹೇಳ್ತಿದ್ದ.

‘ಅಲ್ಲಿ ನೋಡಿ! ಒಂದು ಟ್ರಾಕ್ಟರ್ ಇದೆಯಲ್ವ? ಅದು ಉಕ್ಕಿನ ಮುದ್ದೆ. ಅದು ವಿಧೇಯವಾಗಿರುತ್ತೆ! ಇವತ್ತು ಬೆಳಗ್ಗೆ ಅದು ಹೊಲದ ತುದಿಗೆ ಹತ್ತಿದ ಮೇಲೆ ಮಾತು ಕೇಳಲಿಲ್ಲ. ಎಲ್ಲರೂ ಪ್ರಯತ್ನಿಸಿದರೂ ಏನೂ ಆಗಲಿಲ್ಲ. ನಾನು ಅವರನ್ನು ಬದಿಗೆ ಸರಿಸಿ ಎರಡು ಲಾತ ಕೊಟ್ಟೆ ನೋಡಿ! ಮೋಟಾರ್ ಶುರುವಾಯ್ತು.’


‘ಆದ್ರೆ ಮನುಷ್ಯರನ್ನು ಹಾಗೆ ಯಾವಾಗ್ಲೂ ಒದೀತಾ ಇರೋದಕ್ಕಾಗಲ್ಲ. ಅವರು ತಾವೇ ಹಾಗೆ ವಿಧೇಯರಾಗಿರೋದನ್ನು ಅಭ್ಯಾಸ ಮಾಡ್ಕೋಬೇಕು. ಇನ್ನೊಬ್ಬರು ಹೇಳದೇನೇ ನಡೀಬೇಕು.’

ಸಾಮಾನ್ಯವಾದ ನಾಯಕ ವರದಿ ನೀಡಬೇಕಾದ್ರೆ ಆತ ಮಾರ್ಕ್ಸ್, ಲೆನಿನ್, ಸ್ಟಾಲಿನ್ ಮತ್ತು

ಮಾವೋನ ಪದಗಳನ್ನು ಉದ್ಧರಿಸ್ತಾನೆ. ಆದರೆ ನಮ್ಮ ಹಳೆ ಮುಖ್ಯಾಧಿಕಾರಿ ಇವನ್ನೆಲ್ಲ ಹೇಳಿ ಹೆದರಿಸ್ತಿರಲಿಲ್ಲ. ಅಪರಾಧ ಮಾಡಿದ ಬುದ್ಧಿಜೀವಿಗಳು ಒಂದು ಬಗೆಯ ನವಿರು ಅನುಭವವನ್ನು ಹೊಂದೋ ಹಾಗೆ ಮಾಡ್ತಿದ್ದ. ತಮ್ಮ ಜೀವಮಾನವಿಡೀ ಪುಸ್ತಕಗಳಲ್ಲೇ ಮುಳುಗಿಹೋಗಿದ್ದ ಇವರೆಲ್ಲ ಈತನ ಸರಳತೆಯನ್ನು ಎಂದೂ ಕಂಡಿರಲಿಲ್ಲ. ಯಾವುದೇ ಸಿದ್ಧಾಂತದಿಂದಲೂ ಕಲಬೆರಕೆಯಾಗದ ರೈತನ ಮಾತುಗಳನ್ನು ಎಂದೂ ಕೇಳಿರಲಿಲ್ಲ. ಸೈದ್ಧಾಂತಿಕವಾಗಿ ಅವನನ್ನು ವಿರೋಧಿಸಲಿಕ್ಕಂತೂ ಸಾಧ್ಯವೇ ಇರಲಿಲ್ಲ. ನಾವು ನಾಚಿಕೆಯಿಂದ ತಲೆ ತಗ್ಗಿಸುತ್ತಿದ್ದೆವು.

ನೀವೇ ಹೇಳಿ, ಮನುಷ್ಯರು ಉಕ್ಕಿನ ಮುದ್ದೆ ಥರ ಅಥವಾ ದೊಡ್ಡಿಯಲ್ಲಿರೋ ಪ್ರಾಣಿ ಥರ ಅವಿಧೇಯವಾಗಿರಲಿಕ್ಕೆ ಸಾಧ್ಯವಾಗುತ್ತ? ವಿಧೇಯರಾಗಿರೋದು ಬುದ್ಧಿಜೀವಿಗಳ ಪ್ರಮುಖ ಲಕ್ಷಣವಾಗಿರಬೇಕು.





# ಅವ ಸತ್ತಿದ್ದಾದರೂ ಹೇಗೆ?

ಉಪನ್ಯಾಸದ ವೇಳೆ ಆತ ಈ ನೆಲವನ್ನು ಹೇಗೆ ಉಳುವುದಕ್ಕೆ ಸೂಕ್ತವಾದ ಪ್ರದೇಶವನ್ನಾಗಿ ಮಾಡೋದಕ್ಕೆ ಎದುರಿಸಿದ ದುರ್ಭರ ಕ್ಷಣಗಳನ್ನು ನೆನಪು ಮಾಡಿಕೊಡುತ್ತಿದ್ದ. ನಾವು ಹವಾಮಾನ ವಾರ್ತೆಯ ಬಗ್ಗೆ ಮಾತಾಡ್ತಾ ಇದೇವೇನೋ ಅನ್ನೋ ಥರ ಸಲೀಸಾಗಿ ಮಾತಾಡ್ತಿದ್ದ.ನಾವು ಕೆಲಸ ಮಾಡ್ತಾ ಇರೋ ಈ ನೆಲ ಕೆಲವೇ ವರ್ಷಗಳ ಹಿಂದೆ ಕಣ್ಣು ಹಾಯಿಸಿದಷ್ಟೂ ಬರೀ ನೀರು ತುಂಬಿದ ಪ್ರದೇಶವಾಗಿತ್ತು. ಉಪ್ಪಿನಿಂದ ಬಿಳುಪಾಗಿತ್ತು. ಆಳೆತ್ತರವನ್ನೂ ಮೀರಿದ ಕಳೆ. ಕೃಷಿತಜ್ಞರು ಇಲ್ಲಿಗೆ ಬಂದಾಗ ಅವರು ಆಗೋದೇ ಇಲ್ಲ ಅನ್ನೋ ಹಾಗೆ ತಲೆ ಆಡಿಸಿದ್ದರು. ಇದನ್ನು ಸಾಗುವಳಿಗೆ ಪರಿವರ್ತಿಸೋದಕ್ಕೆ ಹಣ ಹಾಗೂ ಸಮಯ ನೀಡೋದು ವ್ಯರ್ಥ ಎಂದಿದ್ದರು.

ಆದರೆ ನಮ್ಮ ಮುದಿ ಮುಖ್ಯಾಧಿಕಾರಿ ಈ ಪ್ರದೇಶವನ್ನೇ ನೆಚ್ಚಿಕೊಂಡ. ಆತ ಸೇನೆಯಿಂದ ಹೊರಬಿದ್ದ ಒಂದು ಡಜನ್ ಸೈನಿಕರನ್ನು ಇಲ್ಲಿಗೆ ಕರೆತಂದ. ಅವರು ಬಿಡಾರ ಹೂಡಿದರು. ಹೊಲದ ಪಡಿತರವನ್ನೇ ತಣ್ಣಗೆ ತಿಂದರು (ಆತ ಈ ಮಾತು ಕೇಳುವ ಹೊತ್ತಿಗೆ ನಮಗೆ ಸಣ್ಣಗೆ ಜೋಂಪು). ಇಲ್ಲಿ ಆಗ ಒಂದೂ ಯಂತ್ರ ಇರಲಿಲ್ಲ. ಒಂದು ಡಜನ್ ಗುದ್ದಲಿಗಳು, ಕೊಡಲಿಗಳು. ಅವರು ತಮ್ಮ ಬರಿಗಾಲಿನಿಂದಲೇ ಸಾವಿರಾರು ಎಕರೆ ನೆಲವನ್ನು ಅಳೆದರು. ಎಲ್ಲಿ ಕಾಲುವೆ ಹರಿಸಬೇಕು, ಎಲ್ಲಿ ಕಟ್ಟಡಗಳನ್ನು ಕಟ್ಟಬೇಕು, ಎಲ್ಲಿ ಹೊಲ ಇರಬೇಕು, ಎಲ್ಲಿ ತರಕಾರಿ ಬೆಳೀಬೇಕು – ಎಲ್ಲವನ್ನೂ ಅವರು ನಿರ್ಧರಿಸಿದರು. ಸಂಜೆ ಎಣ್ಣೆದೀಪದಲ್ಲಿ

ಸುತ್ತ ಕುಳಿತು ಯೋಜನೆ ರೂಪಿಸಿದರು. ಹಗಲಿನಲ್ಲಿ ಮರದ ಕೊರಡುಗಳಿಂದ ಗುರುತು ಮಾಡಿದರು.

ಆಗ ಬಂತು ನೋಡಿ ಒಂದು ಟ್ರಾಕ್ಟರ್. ಆಮೇಲೆ ಮತ್ತಷ್ಟು ಖೈದಿಗಳು. ಮುಖ್ಯಾಧಿಕಾರಿಯ ಪದಗಳನ್ನೇ ಬಳಸಿ ಹೇಳೋದಾದ್ರೆ, ಸಮರಕ್ಕಾಗಿ ಒಂದು ಸಾವಿರ ಸೇನೆ ಹಾಗೂ ಹತ್ತು ಸಾವಿರ ಕುದುರೆಗಳು ಬಂದಂತೆ. ಇದೊಂದೇ ಉಪಮೆಯನ್ನು ಆತ ಬಳಸುತ್ತಾನೆ. ಬಹುಶಃ ಬೇರೆ ಯಾರೋ ಅದನ್ನು ಹೇಳಿಕೊಟ್ಟಿರಬೇಕು. ಅದನ್ನು ಹೇಳುವಾಗ ಆತ ತನ್ನದೇ ಮಾತಿನಂತೆ ಹೇಳುತ್ತಾನೆ.

ಹಾಗೆ ಬಂದ ಮೊದಲ ತಂಡದ ಎಲ್ಲಾ ಖೈದಿಗಳೂ ತಂಡತಂಡವಾಗಿ ಸತ್ತುಹೋದರು ಎಂಬುದನ್ನು ಆತ ಎಂದೂ ಅಲ್ಲಗಳೆದಿಲ್ಲ.

'ಆ ದಿನಗಳಲ್ಲಿ ಕಷ್ಟ ಅಂದ್ರೆ ನಿಜವಾದ ಕಷ್ಟಾನೇ. ಬನ್ ಜಗಿಯುತ್ತಲೇ ವಾಲಿದ್ದನ್ನು ನೀವು ನೋಡಬಹುದಿತ್ತು. ಅವನನ್ನು ಮುಟ್ಟಿದರೆ,ಅರೆ, ಸತ್ತೇ ಹೋಗಿದಾನೆ! ಅವನು ಹಸಿವಿನಿಂದ ಸತ್ತನಾ? ಇಲ್ಲ ! ಅವನ ಬಾಯಿ ತುಂಬಾ ಬನ್ ಇರಲಿಲ್ವೆ? ನಿಮ್ಮ ಬಾಯಿ ತುಂಬಾ ಒಂದು ಬನ್ ಇದೆ ಅಂತಾದ್ರೆ ನೀವು ಖಂಡಿತ ಹಸಿವಿನಿಂದ ಸಾಯಲ್ಲ.'

ಹಾಗಾದ್ರೆ ಅವ ಸತ್ತಿದ್ದಾದರೂ ಹ್ಯಾಗೆ? ಆತ ಅದನ್ನು ಮಾತ್ರ ಹೇಳುತ್ತಿರಲಿಲ್ಲ.

ಈ ಬಗ್ಗೆ ಅನುಭವ ಇದ್ದವರಾರೂ ಮುಂದೆ ಬರುವ ಸುಖದ ದಿನಗಳನ್ನು ನೆನೆಸಿಕೊಳ್ಳುವ ತಾಪತ್ರಯ ತೆಗೆದುಕೊಳ್ಳುತ್ತಿರಲಿಲ್ಲ. ಕಳೆದುಹೋದ ಕಷ್ಟದ ದಿನಗಳನ್ನೇ ಮುಂದಿನ ದಿನಗಳಿಗೆ ದಿಕ್ಸೂಚಿಯಾಗಿ ಬಳಸುತ್ತಿದ್ದರು. ಭವಿಷ್ಯದ ನೋಟ ತೀರಾ ಮಬ್ಬು. ಆದರೆ ಗತಕಾಲದ ನೋವು ಮತ್ತು ಯಾತನೆ ಮಾತ್ರ ನೈಜ ತಾನೆ?

ನಾವು ಈ ಕಥೆಯನ್ನು ಕೆಲವು ಸಲ ಕೇಳಿದ ಮೇಲೆ ನಮ್ಮ ಹಿಂದಿನವರ ಕ್ಲೇಷಗಳೇ ನಾವೂ ಈ ಕಷ್ಟವನ್ನು ಸಹಿಸಿಕೊಳ್ಳಬೇಕು ಎಂಬುದಕ್ಕೆ ಕಾರಣವಾದವು. ನಮಗಿಂತ ಹಿಂದೆ ಇದ್ದವರು ನಮಗಿಂತ ಕಷ್ಟದ ದಿನಗಳನ್ನು ಅನುಭವಿಸಿದ್ದರಲ್ಲಾ ಅನ್ನೋದೇ ನಮಗೆ ಸಮಾಧಾನದ ಸಂಗತಿ. ನಾವೇ ಅದೃಷ್ಟವಂತರು ಎಂಬ ಭಾವ ನಮ್ಮಲ್ಲಿ.

ಮುದಿ ಮುಖ್ಯಾಧಿಕಾರಿ ಪ್ರಕಾರ, ತನ್ನನ್ನೂ ಸೇರಿಸಿಕೊಂಡು, ಅಲ್ಲಿ ಕೆಲಸ ಆರಂಭಿಸಿದ ಎಲ್ಲರಿಗೂ ತರಲೆ ತುರಿಕೆ ಗುಳ್ಳೆಗಳು ಬಂದಿದ್ದವು. ಅಂಥ ಉಪ್ಪುನೀರಿನಲ್ಲಿ ಕಾಲುಗಳನ್ನು ಮುಳುಗಿಸಿಕೊಂಡೇ ಇದ್ದರೆ ಅದೆಲ್ಲ ಸಹಜ.

'ನೀವೆಲ್ಲ ವಿಜ್ಞಾನದ ಬಗ್ಗೆ ನಂಬಿಕೆ ಇಟ್ಟಿದೀರ ಅಲ್ವ? ಹಾಗಾದ್ರೆ ಇದನ್ನು ವೈಜ್ಞಾನಿಕ ನಿಯಮ ಅನ್ನಬಹುದು. ನಿಮ್ಮ ಕಾಲುಗಳ ಮೇಲೆ ಗುಳ್ಳೆಗಳನ್ನು ಹೊಂದೋದು ಸುಧಾರಣೆ ಮಾಡುವ ಒಂದು ಮಾರ್ಗ. ನಿಮಗೆ ಗುಳ್ಳೆಗಳೇ ಬರದಿದ್ರೆ ನಿಮ್ಮನ್ನು ಸುಧಾರಿಸ್ಲಿಕ್ಕೇ ಆಗಲ್ಲ!' ಖೈದಿಗಳು ಗುಳ್ಳೆಗಳ ತುರಿಕೆ ತಡೆಯಲಾಗದೆ ನೀರಿನಿಂದ ಹೊರಳಿ ದಂಡೆಗೆ ಬಂದಾಗ ಆತ ಕಾಲುವೆಯ ಬದಿಯಲ್ಲಿ ನಿಂತು ನಗುತ್ತಿದ್ದ:'ಅದ್ಭುತ! ಇದು ನಿಮ್ಮನ್ನು ಇನ್ನಷ್ಟು ಬೇಗ ಸುಧಾರಣೆ ಮಾಡುತ್ತೆ!'

ನಾನು ಈ ವಾಕ್ಯಗಳ ಮುಂದೆ ಇಟ್ಟಿರೋ ಆಶ್ಚರ್ಯಸೂಚಕ ಚಿಹ್ನೆಗಳನ್ನು ಸಾಮಾನ್ಯ ಚೀನೀ ವರ್ಣಮಾಲೆಯಲ್ಲಿ ಬರೆಯೋದಕ್ಕೇ ಸಾಧ್ಯವಿಲ್ಲ. ಮಗು ನಡೆಯೋದಕ್ಕೆ ಆರಂಭಿಸಿದಾಗ ತಂದೆ ತೋರಿಸುವ ಸಂತಸದ ಭಾವ ಅದು. ನಾವು ತುರಿಕೆಯಿಂದ ಸತ್ತು ಮತ್ತೆ ಜೀವ ಪಡೆದಾಗ ಒಂಥರ ಸಮಾಧಾನ ಆಗ್ತಿತ್ತು. ದೇಶದ ಹಿರಿಯ ನಾಯಕರು ನಮ್ಮಂಥ ಬುದ್ಧಿಜೀವಿಗಳಿಗೆ ಯಾವಾಗ್ಲೋ ಹೇಳಿಬಿಟ್ಟಿದ್ದರು:'ನೀವು ಹೊಸ ಮನುಷ್ಯರಾಗಲಿಕ್ಕೆ ನೀವು ನಿಮ್ಮ ದೇಹಗಳನ್ನೇ ಕೊಡವಿಕೊಳ್ಳಬೇಕು. ನಿಮ್ಮ ಮೂಳೆಗಳನ್ನೇ ಬದಲಿಸ್ಕೋಬೇಕು.'

ಅಂದಮೇಲೆ ಚರ್ಮ ಕಿತ್ತುಹೋಗೋದು ದೊಡ್ಡ ಮಾತೇನಲ್ಲ ಬಿಡಿ.

ಕಾರ್ಮಿಕ ಶಿಬಿರದಲ್ಲಿ ಕೆಲಕಾಲ ಧಾನ್ಯವನ್ನು 'ಮಿತಿಯಲ್ಲಿ ತಿನ್ನುವ' ಪಡಿತರ ವ್ಯವಸ್ಥೆಗೆ ಒಳಪಡಿಸಬಾರದು ಅನ್ನೋ ನಿಯಮ ಬಂತು. ಆಗ ಇಡೀ ದೇಶದಲ್ಲಿ ಒಂದು ಘೋಷಣೆ ಮೊಳಗಿತ್ತು:'ನಿಮ್ಮಹೊಟ್ಟೆ ತುಂಬಿಸಿಕೊಳ್ಳಿ. ನಿಮಗೆ ಸಾಧ್ಯವಾದಷ್ಟೂ ತಿನ್ನಿ. ಇನ್ನೂ ಹೆಚ್ಚಿನ ಉತ್ಪಾದನೆಗೆ ಬೇಕಾದ ಎಲ್ಲಾ ತಡೆಗಳನ್ನೂ ನಿವಾರಿಸಿಕೊಳ್ಳಿ!' ಆ ವರ್ಷದ ಕೊನೆಗೆ ಧಾನ್ಯದ ಕೊರತೆಯಾದಾಗ ಮತ್ತೆ ಪಡಿತರ ಜಾರಿಗೆ ಬಂತು. ಮುದಿ ಮುಖ್ಯಾಧಿಕಾರಿ ಈ ವ್ಯವಸ್ಥೆಯನ್ನು ಎಲ್ಲರಿಗಿಂತ ಭಿನ್ನವಾಗಿ ಜಾರಿಗೆ ತಂದ. ಉಳಿದವರು ಆಕಾಶದಿಂದ ಉದುರಿದ ಕೆಂಪು ಶೀರ್ಷಿಕೆಯ ದಾಖಲೆಯನ್ನು ಬೀಸಿ ಪ್ರಕಟಣೆ ಹೊರಡಿಸಿ ಪಡಿತರ ವ್ಯವಸ್ಥೆಯನ್ನು ಸುಮ್ಮನೆ ಜಾರಿಗೆ ತರುತ್ತಿದ್ದರು.

ಆದರೆ ನಮ್ಮ ಮುಖ್ಯಾಧಿಕಾರಿ ಎಲ್ಲ ಖೈದಿಗಳ ಸಭೆ ಕರೆಯಲು ತಂಡನಾಯಕರಿಗೆ ತಿಳಿಸಿದ. ನಮ್ಮ ಉಪಾಹಾರದ ನಂತರ ಆ ಸಭೆ. ಆ ಒಕ್ಕುವ ಅಂಗಳದಲ್ಲಿ ಪ್ರತಿಯೊಬ್ಬ ಖೈದಿ ಬಂದು ನಿಲ್ಲುವವರೆಗೆ ಆತ ಕಾದ. ಆಮೇಲೆ ಬಾಣಸಿಗರಿಗೆ ಖೈದಿಗಳ ಬ್ಯಾರಕಿಗೆ ಹೋಗಲು ತಿಳಿಸಿದ. ಅವರು ಅಲ್ಲಿ ಆಹಾರವನ್ನು ಹುಡುಕಿದರು. ಖೈದಿಗಳು ಇನ್ನೂ ತಿಂದು ಮುಗಿಸದ ಬನ್ನು,ಅನ್ನ ಮುಂತಾದ ಆಹಾರವನ್ನು ಅವರು ಬಳಿದುಕೊಂಡು ಹೊರಬಂದರು. ಅವರು ಅವನ್ನು ಅಲ್ಲಿ ಪ್ರದರ್ಶಿಸಿದರು. ಆಮೇಲೆ ಆತ ತನ್ನ ಉಕ್ಕಿನ ಮುಖವನ್ನು ಕೆಂಪಗೆ ಮಾಡಿಕೊಂಡು ಕಿರುಚಿದ:

'ಪಾಪ!ಪಾಪ! ಅಲ್ಲಿ ನೋಡಿ! ನಾವು ನಿಮಗೆ ಬೇಕಾದಷ್ಟು ತಿನ್ನಿ ಅಂತ ಬಿಟ್ಟೆವು. ಆದ್ರೆ ನೀವು? ಅದನ್ನೆಲ್ಲ ವೇಸ್ಟ್ ಮಾಡಿದ್ರಿ. ಗೋಧಿಯ ಪ್ರತಿಯೊಂದೂ ಕಾಳು ರೈತನ ರಕ್ತ ಮತ್ತು ಬೆವರು ಅನ್ನೋದು ನಿಮಗೆ ಗೊತ್ತಿಲ್ವೆ? ಅವರ ಕೆಲಸ ಎಲ್ಲಾ ವೇಸ್ಟ್ ಆಗಬೇಕ? ಪಾಪಿಗಳು ನೀವು! ಮುಂದಿನ ಊಟದಿಂದ ಆರಂಭಿಸಿ ಎಲ್ಲರೂ ಈಗ ಪಡಿತರ ವ್ಯವಸ್ಥೆಗೆ ಬರ್ತೀರ ಗೊತ್ತಾಯ್ತ? ನೀವು, ಅಡುಗೆ ಮಾಡೋರೆ... ನನ್ನ ಮಾತು ಕೇಳ್ತಾ ಇದೀರ? ಮುಂದಿನ ಊಟದಿಂದ ಪಡಿತರ ವ್ಯವಸ್ಥೆ!'

ಚೀನಾದಲ್ಲಿ ಹಳೇ ಗಾದೆ ಮಾತಿದೆ:'ಸ್ವರ್ಗದ ಪಾಪಗಳನ್ನು ಅಲಕ್ಷಿಸಬಹುದು. ಅವುಗಳ ಬಗ್ಗೆ ನೀವು ಮಾಡೋದು ಏನೂ ಇರಲ್ಲ. ಆದರೆ ನಿಮ್ಮ ಮೇಲೆ ನೀವೇ ತಂದುಕೊಳ್ಳುವ ಪಾಪಗಳು ಮಾತ್ರ ಕೊನೆಗೆ ನಿಮ್ಮನ್ನೇ ಕಬಳಿಸುತ್ತವೆ.' ನಿಜ, ನಿಮ್ಮ ಅಪರಾಧಗಳಿಗೆ ನೀವೇ ಹೊಣೆ. ನೀವೇ ನಿಮ್ಮ ಬೆಲ್ಟನ್ನು ಬಿಗಿ ಮಾಡಿಕೊಂಡು ನಿಮ್ಮ ಗಂಟಲಿಗೆ ಬೀಗ ಜಡಿದುಕೊಳ್ಳಬೇಕಾದಾಗ ಯಾರನ್ನು ದೂರ್ತೀರಿ? ನಮ್ಮನ್ನು ನಾವೇ ಬೈದುಕೊಂಡೆವು.

ಆಮೇಲೆ ಪಡಿತರ ಕಡಿಮೆಯಾಗುತ್ತ ಹೋದಂತೆ, ಜನ ಮತ್ತಷ್ಟು ಗುಂಪುಗುಂಪಾಗಿ ಸಾಯುತ್ತಿದ್ದಂತೆ.... ಸಾವಿನ ದವಡೆಯಲ್ಲಿದ್ದ ಖೈದಿಗಳೂ ತಮ್ಮ ಹಿಂದಿನ ಪಾಪಗಳ ಬಗ್ಗೆ ಪಶ್ಚಾತ್ತಾಪ ಪಡುತ್ತಿದ್ದರು. ಅವರು ಈ ಹಿಂದೆ ಅಷ್ಟು ಧಾನ್ಯವನ್ನು ಹಾಳುಮಾಡದೇ ಹೋಗಿದ್ದರೆ ಖಂಡಿತ ಅವರಿಗೆ ಇವತ್ತು ಊಟಕ್ಕೆ ಬೇಕಾದಷ್ಟು ಸಿಗ್ತಿತ್ತು.

ನಾವು ಹಸಿವಿನಿಂದ ಸಾಯ್ತಾ ಇದ್ರೆ ಅದು ನಮ್ಮದೇ ಲೋಪ.

ಸಾಕಷ್ಟು ಧಾನ್ಯ ಇಲ್ಲದಿದ್ದಾಗ, ನಾವು ಸಹಜವಾಗೇ ಹುಲ್ಲು ತಿನ್ನುತ್ತಿದ್ದೆವು. ಮುದಿ ಮುಖ್ಯಾಧಿಕಾರಿ ಮಾತು ಕೇಳಿದರೆ ನಮಗೆಲ್ಲ ಹುಲ್ಲು ತಿನ್ನೋದು ಚೀನಾದ ಸಾಂಪ್ರದಾಯಿಕ ಆಹಾರ ಸಂಸ್ಕೃತಿ ಅಂತಲೇ ಅನ್ನಿಸುತ್ತಿತ್ತು. ನಾವು ಹುಲ್ಲು ತಿನ್ನೋದಕ್ಕೆ ಆರಂಭಿಸಿದಾಗ ಮುದಿ ಮುಖ್ಯಾಧಿಕಾರಿ ನಮಗೆ ಸೂಚನೆ ನೀಡಿದ್ದ:

'ಕಷ್ಟದ, ಬರದ ದಿನಗಳಲ್ಲಿ ಕಳೆ ಗಿಡಗಳನ್ನು ತಿನ್ನೋದು ನಮ್ಮಂಥ ಶ್ರಮಿಕವರ್ಗದ ಜನ್ಮಜಾತ ಪ್ರತಿಭೆಗಳಲ್ಲಿ ಒಂದು! ಶೂ ಪಿಂಗ್ವಿ ಕೊನೆಗೂ ಮನೆಗೆ ಬಂದಾಗ ಬಾವೋಶುನ್ ಅವನ ಮೊದಲ ಹೆಂಡತಿಯಾಗಿದ್ದಳು (ಇದು ತಾಂಗ್ ಮನೆತನದ ಕಥೆ). ಕಳೆ ಗಿಡಗಳ ಬಗ್ಗೆ ಯಾಕೆ ಬೇಸರ? ಹಿಂದೆ ಎಲ್ಲರೂ ಇವನ್ನೇ ತಿಂತಿದ್ರು. ಅವರೆಲ್ಲ ಆಸೆಬುರುಕರಾಗೋವರೆಗೆ ಇದನ್ನೇ ತಿಂತಾ ಇದ್ರು. ಆಮೇಲೆ ಒಳ್ಳೇ ತರಕಾರಿ ತಿನ್ನೋದಕ್ಕೆ ಶುರು ಮಾಡಿದ್ರು. ನೀವು ಇಲ್ಲಿಗೆ ಬಂದಿರೋದು ಸುಧಾರಣೆ ಆಗೋದಕ್ಕೆ. ಭೂಮಾಲೀಕರಾಗೋದಕ್ಕೂ ಅಲ್ಲ, ಬಂಡವಾಳಶಾಹಿಗಳಾಗೋದಕ್ಕೂ ಅಲ್ಲ. ಆದ್ದರಿಂದ ಇಲ್ಲಿರೋ ಎಲ್ಲರೂ ಹುಲ್ಲನ್ನೇ ತಿಂತಾರೆ. ಇಲ್ಲವಾದ್ರೆ ನೀವು ಯಾರೂ ಸರಿಯಾಗಿ ಸುಧಾರಣೆ ಆಗೋದೇ ಇಲ್ಲ!'

ಖೈದಿಗಳಿಗೆ ಕೆಲಸ ಮಾಡೋದಕ್ಕೆ ಯಾವ ಶಕ್ತಿಯೂ ಇರಲೇ ಇಲ್ಲ. ಕೆಲವರಂತೂ ಹೊಲದ ನಡುವೆಯೇ ಬಿದ್ದುಕೊಂಡಿರುತ್ತಿದ್ದರು. ಇನ್ನೂ ಕೆಲವರು 'ಸತ್ತ ನಾಯಿಗಳ ಹಾಗೆ ನಟಿಸುತ್ತ' ಕೆಲಸಕ್ಕೇ ಹೋಗುತ್ತಿರಲಿಲ್ಲ. ಖೈದಿಗಳು ಬರೀ ಹುಲ್ಲನ್ನು ಮಾತ್ರ ತಿಂತಾ ಇದ್ದಿದ್ರಿಂದ ಅವರಿಗೆ ಕೆಲಸ ಮಾಡೋದಕ್ಕೆ ಶಕ್ತಿ ಇಲ್ಲ ಎಂಬ ಪ್ರತಿಕ್ರಾಂತಿ ಸಿದ್ಧಾಂತವೂ ಅಲ್ಲಿ ಚಾಲ್ತಿಯಲ್ಲಿತ್ತು. ಇದನ್ನು ಕೇಳಿದಾಗ ಮುದಿ ಮುಖ್ಯಾಧಿಕಾರಿ ಇದೆಲ್ಲ ಮೂರ್ಖ ವಾದ ಎಂದುಬಿಟ್ಟ:'ಹುಲ್ಲಿನಲ್ಲಿ ಪೌಷ್ಟಿಕಾಂಶ ಇಲ್ಲ ಅಂತ ಯಾರು ಹೇಳಿದಾರೆ? ಅದರಿಂದ ಶಕ್ತಿ ಪಡೆಯಕ್ಕಾಗಲ್ಲ ಅಂತ ಯಾರು ಹೇಳ್ತಾರೆ? ರಾಸುಗಳು ಹುಲ್ಲು ತಿನ್ನಲ್ವೆ? ಅವು ನಿಮಗಿಂತ ಹೆಚ್ಚು ಕೆಲಸ ಮಾಡಲ್ವೆ?'

ಕ್ರಿಮಿನಲ್ ಅಪರಾಧ ಮಾಡಿದ ಮತ್ತು ಐತಿಹಾಸಿಕವಾಗಿ ಪ್ರತಿಕ್ರಾಂತಿಕಾರಿ ಮನೋಭಾವ ಹೊಂದಿದ ಕೆಲವೇ ಖೈದಿಗಳು ಈ ಥರ ಅನುಮಾನ ಪಡುತ್ತಿದ್ದರು.ಅವರು ಭೂಗತವಾಗಿ ಈ ಸಿದ್ಧಾಂತ ಹರಡುವುದನ್ನು ಮುಂದುವರೆಸಿದರು. ಬುದ್ಧಿಜೀವಿಗಳಲ್ಲಿ ಯಾರೂ ಮುದಿ ಮುಖ್ಯಾಧಿಕಾರಿಯ ಮಾತುಗಳನ್ನು ನಂಬಲಿಲ್ಲ ಎಂದು ಬಾಯಿಬಿಟ್ಟು ಹೇಳಲಿಲ್ಲ. ನಾವೆಲ್ಲ 'ಬೋಲ್‌ಶೆವಿಕ್ ಕಮ್ಯುನಿಸ್ಟ್ ಪಾರ್ಟಿಯ ಕಿರು ಇತಿಹಾಸ' ಮತ್ತು 'ಡಯಲೆಕ್ಟಿಕಲ್ ಮೆಟೀರಿಯಲಿಸಮ್' ಓದಿಕೊಳ್ಳುತ್ತಿದ್ದವರು. ನಮಗೆಲ್ಲ ಅವನ ಬಗ್ಗೆ ವಿಪರೀತ ಗೌರವ. ಉಕ್ಕಿನ ಮುದ್ದೆಗಳ ಬಗ್ಗೆ ಇರಲಿ, ಚೀನಾದ ಸಾಂಪ್ರದಾಯಿಕ ಆಹಾರ ಪದ್ಧತಿಯ ಬಗ್ಗೆ

ಇರಲಿ, ಅವನ ಮಾತೆಂದರೆ ಹೊಸ ಬಗೆಯ ಚಿಂತನೆ.

ಈ ಬುದ್ಧಿಜೀವಿಗಳು ಅವನ ಮಾತನ್ನೇ ಕೇಳಲ್ಲ ಅಂತಾದರೆ ಅವರು ಇನ್ನಾರನ್ನು ಅನುಸರಿಸ್ತಾರೆ? ಕಾರ್ಮಿಕ ಶಿಬಿರಗಳಿಗೆ ಬಂದ ಬುದ್ಧಿಜೀವಿಗಳು ಸ್ವತಂತ್ರವಾಗಿ ಯೋಚಿಸೋ ಶಕ್ತಿಯನ್ನೂ ಕಳೆದುಕೊಂಡಿದ್ದರು. ಅವರು ಸುದೀರ್ಘ ಸಂಘರ್ಷ–ಸ್ವಯಂಟೀಕೆಯ ನೂರಾರು ಗೋಷ್ಠಿಗಳನ್ನು, ಅಧ್ಯಯನ ಗೋಷ್ಠಿಗಳನ್ನು, ಓದಿನ ಗುಂಪುಗಳನ್ನು ಅನುಭವಿಸಿ ಸಹಿಸಿಕೊಂಡು ಬಂದವರು; ಅವರೆಲ್ಲ ಆತ್ಮವಿಶ್ವಾಸವನ್ನೇ ಕಳೆದುಕೊಂಡವರು. ದುರ್ಬಲರಾದವರು. ಸ್ಫೂರ್ತಿಯೇ ಇಲ್ಲದವರು.

ಮುಖ್ಯಾಧಿಕಾರಿಯ ಕಚ್ಚಾ ತರ್ಕಗಳನ್ನು ಅನುಮಾನಿಸೋದಕ್ಕೆ ಅವಕಾಶವೇ ಇರಲಿಲ್ಲ. ಚೀನಾದ ಬುದ್ಧಿಜೀವಿಗಳ ಮೆದುಳುಗಳು ಯಾವಾಗಲೋ ಸಾರ್ವಜನಿಕ ಶೌಚಾಲಯಗಳಾಗಿ ಹೋಗಿದ್ದವು.

ಆರು ವರ್ಷಗಳ ನಂತರ ಜಿಯಾಂಗ್ ಖಿಂಗ್ ತನ್ನ ಮುಟ್ಟಿನ ಬಟ್ಟೆಯನ್ನೂ ಅದರೊಳಗೆ ಎಸೆದದ್ದು ಈಗ ಇತಿಹಾಸ.

ಮುಖ್ಯಾಧಿಕಾರಿ ಹೇಳುತ್ತಿದ್ದ ಪಾಠಗಳು ಪಠ್ಯಪುಸ್ತಕಗಳಲ್ಲಿ ಇದ್ದ ಜ್ಞಾನಕ್ಕಿಂತ ಭಿನ್ನ. ಆದರೆ ಪುಸ್ತಕದಲ್ಲಿ ಇದ್ದದ್ದಾರೂ ಏನು ಎಂದು ಅನುಮಾನಿಸುವುದಕ್ಕೂ ಅಲ್ಲಿ ಯಾರೂ ಇರಲಿಲ್ಲ. ಬಂಡವಾಳಶಾಹಿ ವರ್ಗವಷ್ಟೇ ಅಲ್ಲಿ ಪುಸ್ತಕವನ್ನು ಓದಿದ್ದ ವರ್ಗ. ಈಗ ನಾವೆಲ್ಲ ಶ್ರಮಿಕರು – ರೈತರು – ಕಾರ್ಮಿಕರಿಂದ ಕಲಿಕೆಗೆ ಒಳಗಾಗಿದ್ದೆವು. ಜ್ಞಾನಕ್ಕೂ ವರ್ಗಭೇದವಿದೆ. ಉದಾಹರಣೆಗೆ ಬಂಡವಾಳಶಾಹಿ ವರ್ಗದ ಜ್ಞಾನವು ಮನುಷ್ಯ ಮತ್ತು ಲೋಹದ ನಡುವಣ ಹೋಲಿಕೆಗಳು ಸರಿಯಲ್ಲ, ಮನುಷ್ಯನ ಮತ್ತು ರಾಸುಗಳ ಹೊಟ್ಟೆ ಮತ್ತು ಕರುಳುಗಳು ಪರಸ್ಪರ ಭಿನ್ನ ಎಂದು ಹೇಳುತ್ತವೆ. ಆದರೆ ಬಂಡವಾಳರಹಿತ ವರ್ಗದ ಜ್ಞಾನವು ಅಂದರೆ ಪ್ರೋಲೆಟರಿಯೇಟ್ ಜ್ಞಾನವು ಮನುಷ್ಯ ಮತ್ತು ಲೋಹ ಎರಡೂ ಒಂದೇ ಎಂದು ಹೇಳುತ್ತವೆ; ಮನುಷ್ಯರು ಮತ್ತು ರಾಸುಗಳ ನಡುವೆ ಸಮಾನತೆಯನ್ನು ಗುರುತಿಸುತ್ತವೆ. ನೀವು ಯಾವುದನ್ನು ನಂಬಬೇಕು? ನೀವು ಕೊನೆಯದನ್ನೇ ನಂಬಬೇಕು.

ಅದು ಕಾಮನ್ ಸೆನ್ಸ್‌ನ ಪ್ರಶ್ನೆ ಅಲ್ಲ ಬಿಡಿ. ವರ್ಗಪ್ರಶ್ನೆ.

ಬಂಡವಾಳಶಾಹಿ ಜ್ಞಾನಿಗಳು ಮಾಡಲಾಗೋದೇ ಇಲ್ಲ ಎಂದ ಅನೇಕ ಕೆಲಸಗಳನ್ನು ಈ ವರ್ಗವು ತುಂಬಾ ಸುಲಭವಾಗಿ ಮಾಡಿ ತೋರಿಸುತ್ತದೆ. ತಜ್ಞರು ಈ ಕೆಲಸ ಆಗೋದೇ ಇಲ್ಲ ಅಂದರೆ ರೈತರು – ಕಾರ್ಮಿಕರು –ಸೈನಿಕರು ಈ ಕೆಲಸ ಆಗುವಂತೆ ನೋಡಿಕೊಳ್ಳುತ್ತಾರೆ.

ಉದಾಹರಣೆಗೆ ಈ ಕಾರ್ಮಿಕ ಶಿಬಿರವನ್ನೇ ತಗೊಳ್ಳಿ. ಕೆಲವೇ ವರ್ಷಗಳ ಹಿಂದೆ ಈ ನೆಲವು ಕೇಂದ್ರ ಸರ್ಕಾರವು ನಡೆಸುವ ಭಾರೀ ಪ್ರಮಾಣದ ಕೃಷಿಪ್ರದೇಶವಾಗಲಿಕ್ಕೆ ಸಾಧ್ಯವೇ ಇಲ್ಲ ಎಂದು ಹಲವು ಜನ ಹೇಳಿದ್ದರು. ರಶ್ಯಾ ದೇಶದ ತಜ್ಞರೂ ಈ ಮಾತು ಹೇಳಿದ್ದರು. ಆದರೆ ನಮ್ಮ ಮುದಿ ಮುಖ್ಯಾಧಿಕಾರಿ ಕೆಲವು ಡಜನ್ ಕಾರ್ಮಿಕರನ್ನು ಇಲ್ಲಿಗೆ ಕರೆತಂದ. ಬಿಳಿ ಉಪ್ಪಿನ ಪ್ರದೇಶವನ್ನು ಹೊಲವನ್ನಾಗಿ ಪರಿವರ್ತಿಸಿದ. ಉಬ್ಬುತಗ್ಗುಗಳನ್ನು

ಸಮತಟ್ಟು ಮಾಡಿದ. ಇಡೀ ಯೋಜನೆಗೆ ಎಷ್ಟೋ ಜೀವಗಳು ಬಲಿಯಾದವು, ನಿಜ. ಆದರೆ ಹೊಲಗಳು ಉತ್ಪನ್ನ ನೀಡುತ್ತಿರೋದನ್ನು ನೀವು ಅಲ್ಲಗಳೆಯಕ್ಕಾಗಲ್ಲ. ದೂರದಿಂದ ನೋಡಿದರೆ ಬಿಳಿ ನೆಲದ ಮೇಲೆ ಹಸಿರನ್ನು ಹಾಸಿದಂತೆ ಕಾಣುತ್ತದೆ.

ಇವೆಲ್ಲವನ್ನೂ ಅಲ್ಲಗಳೆಯಲಿಕ್ಕೆ ಆಗಲ್ಲ. ನೀವು ಈ ಹಿಂದೆ ಕಲಿತದ್ದೆಲ್ಲವೂ ಪೂರ್ಣವಲ್ಲ ಎಂದು ನೀವು ನಿಟ್ಟುಸಿರು ಎಳೆಯಬೇಕಾಗುತ್ತೆ. ಅವುಗಳಲ್ಲಿ ಲೋಪಗಳಿದ್ದವು. ಅದಕ್ಕೇ ನೀವು ಮರುಶಿಕ್ಷಣ ಪಡೀಬೇಕು.

ಹಳೆ ಮಾದರಿಯ ದೇಶಭಕ್ತಿ ಮತ್ತು ರಾಷ್ಟ್ರೀಯತೆಯ ಶಿಕ್ಷಣವನ್ನು ಪಡೆದ ಚೀನೀ ಬುದ್ಧಿಜೀವಿಗಳಲ್ಲಿ ಒಂಥರ ಮೂಢಾರಾಧನೆ ನೆಲೆಸಿರುತ್ತೆ. ಅವರೆಲ್ಲ ಕಚ್ಚಾ ಪ್ರದೇಶಗಳಲ್ಲಿ ಮೇಲೆದ್ದ ಕಾರ್ಖಾನೆ, ಎಣ್ಣೆ ಗಣಿಗಳು, ಹೊಲಗದ್ದೆಗಳಂಥ ನಿರ್ಮಾಣ ಯೋಜನೆಗಳನ್ನು ನೋಡಿ ಅಡ್ಡಬೀಳಬೇಕು. ಇವೆಲ್ಲ ಮುನ್ನಡಿ ಇಡುತ್ತಿರುವ ದೇಶದ ಅಭಿವೃದ್ಧಿಯ ಸಂಕೇತಗಳು.ನಿಸರ್ಗದತ್ತ ವಾತಾವರಣದ ಮೇಲೆ ಅವು ಉಂಟುಮಾಡುವ ಪರಿಣಾಮಗಳ ಮೇಲೆ ಅಥವಾ ಈ ಯೋಜನೆಗಳಿಗೆ ತೆತ್ತ ಬೆಲೆಗಾಗಲೀ ಅವರ ಲಕ್ಷ್ಯ ಇಲ್ಲ.

ಸಂಜೆ ನಕ್ಷತ್ರಗಳನ್ನೂ ಮಂಕುಮಾಡಿದ ಚಂದ್ರ ಮೇಲೆ ಮೂಡಿದ ಹೊತ್ತು ನಾವೆಲ್ಲ ಆ ಕಣದಲ್ಲಿ ಚಿಕ್ಕಪ್ಪ ಹೇಳುವ ಕಥೆಗಳನ್ನು ಕೇಳುವ ಮಕ್ಕಳ ಹಾಗೆ ಸಾಲಾಗಿ ಕೂತಿರುತ್ತಿದ್ದೆವು. ಹಿಂದಿನ ಕಥೆಗಳನ್ನು ಆತ ಬಣ್ಣಿಸ್ತಿದ್ದ. 'ಮೊದಲು ನನಗೆ ಅಕ್ಷರಗಳೇ ಗೊತ್ತಿರಲಿಲ್ಲ. ನಾನು ಕ್ರಾಂತಿಯಲ್ಲಿ ಲಿಯೂ ಶಿದಾನ್‌ನನ್ನು ಅನುಸರಿಸಿದೆ. ನಾನು ಅಂಟು ಹಚ್ಚಿದ ಮೇಲೆ ಭಿತ್ತಿಪತ್ರಗಳನ್ನು ಆತ ಗೋಡೆಗೆ ಅಂಟಿಸ್ತಿದ್ದ. ನಿಧಾನವಾಗಿ ನಾನು ಅಕ್ಷರಗಳನ್ನು, ಆಮೇಲೆ ಪದಗಳನ್ನು ಕಲಿತೆ. ಆದರೆ ವಾಸ್ತವ ಏನು ಅಂದ್ರೆ ನೀವು, ಬುದ್ಧಿಜೀವಿಗಳು ನನಗೆ ಏನಾದ್ರೂ ಪರೀಕ್ಷೆ ಕೊಟ್ರೆ ನಾನು ಪಾಸಾಗಲ್ಲ! ಯಾಕೆ? ಯಾಕಂದ್ರೆ ನಾನು ಕಲಿತದ್ದು ಕ್ರಾಂತಿಕಾರಿಗಳಿಂದ. ನನಗೆ ಗೊತ್ತಿರೋದು ಕ್ರಾಂತಿ ಮಾತ್ರ. ಇದು ನೀವು ಪುಸ್ತಕಗಳಲ್ಲಿ ಓದಿರೋದಕ್ಕಿಂತ ತುಂಬಾ ಉಪಯುಕ್ತ...'

ಆತ ತೀರಾ ಗೌರವದಿಂದ ಲಿಯೂ ಶಿದಾನ್‌ನನ್ನು ಸ್ಮರಿಸಿಕೊಳ್ಳುತ್ತಿದ್ದ. 'ಆತ ತುಂಬಾ ಒಳ್ಳೆ ಮನುಷ್ಯ. ಆತ ಭೂಮಾಲೀಕನ ಮಗ ಅನ್ನೋದು ನಿಜ. ಆದರೆ ಆತ ಕ್ರಾಂತಿಯನ್ನು ಕೈಗೆ ತೆಗೆದುಕೊಂಡಾಗ ಆತ ಸಾಯಲಿಕ್ಕೂ ಹೆದರಲಿಲ್ಲ. ನಮ್ಮಂಥ ಬಡಜನರಿಗಾಗಿ ಆತ ನದಿಗಳಲ್ಲಿ, ಪರ್ವತಗಳ ಮೇಲೆ ಹೋರಾಟ ಮಾಡ್ತಿದ್ದ.'

ಈ ಪದಗಳು ನಮ್ಮನ್ನು ಒಂದು ಬೆಚ್ಚಗಿನ ಗಾಳಿಯ ಹಾಗೆ ತಾಗುತ್ತಿದ್ದವು. ಮರುಕ್ಷಣವೇ ಅವು ನಮಗೆ ಹಸಿವಿನಿಂದ ಬಳಲುತ್ತಿರುವ,ಬಸವಳಿದ, ಆಸೆಯೇ ಇಲ್ಲದ ಮನುಷ್ಯರನ್ನು ನೆನಪಿಸುತ್ತಿದ್ದವು. ಗತಕಾಲದ ಬಗ್ಗೆ ಅವರಿಗೆಲ್ಲ ಯಾವ ಹೆಮ್ಮೆಯೂ ಇರಲಿಲ್ಲ. ಅವರ ಹಿಂದಿನ ಎಲ್ಲ ಶಿಕ್ಷಣವೂ ಸುತ್ತಲಿನ ವಾಸ್ತವತೆಯ ಮುಂದೆ ಒಂದು ದುರಂತದ ಹಾಗೆ ಕಾಣಿಸುತ್ತಿದೆ. ಹೀಗಿದ್ದೂ ಅವರು ಭವಿಷ್ಯ ಇದೆ ಎಂದು ನಂಬಿದ್ದರು. ಅಧಿಕಾರಿಯ ಮಾತು ಕೇಳಿ 'ಕೆಟ್ಟ ಹಿನ್ನೆಲೆ'ಯಿಂದ ಬಂದ ಖೈದಿಗಳ ಕಣ್ಣಲ್ಲಿ ನೀರು ಚಿಮ್ಮುತ್ತಿತ್ತು.

ಮುಖ್ಯಾಧಿಕಾರಿಯನ್ನು ಪ್ರಾಮಾಣಿಕವಾಗಿ ಶ್ಲಾಘಿಸುತ್ತಿದ್ದವರಲ್ಲಿ ನಾನೂ ಒಬ್ಬ. ಆತ


ಹೇಳುತ್ತಿದ್ದ ಪ್ರತೀ ಪದವೂ ಹೊಸತು, ಆ ಕ್ಷಣದಲ್ಲೇ ಹುಟ್ಟಿದ್ದು ಅನ್ನಿಸುತ್ತಿತ್ತು. ಆತ ನಿಜಕ್ಕೂ ಕಲಾವಿದನೇ ಎಂದು ನನ್ನೊಳಗೆ ಅಳಿದುಳಿದಿದ್ದ ಕಾವ್ಯಪ್ರಜ್ಞೆ ಹೇಳುತ್ತಿತ್ತು. ಸಾಮಾನ್ಯವಾಗಿ ನಾನು ಹುಲ್ಲಿನ ಸಾರು ಕುಡಿದ ಮರುಕ್ಷಣದಲ್ಲೇ ಆತ ಹಲವು ವರದಿಗಳನ್ನು ನೀಡುತ್ತಿದ್ದ. ಹೀಗಾಗಿ ನನಗೆ ಹಸಿವಿನ ತೀವ್ರತೆ ಕಾಡುತ್ತಿರಲಿಲ್ಲ. ಅದಕ್ಕೇ ನಾನು ಅವನ ಬಗ್ಗೆ ಬರೆಯೋದಕ್ಕೆ ಯೋಚಿಸಿದೆ. ಇಷ್ಟಕ್ಕೂ ನನ್ನ ಹತ್ತಿರ ಪೆನ್ ಇತ್ತಲ್ಲ...

ಕೆಲವು ಜನರಿಗೆ ವಿಶೇಷ ಆತಿಥ್ಯ ಸಿಗುತ್ತಿತ್ತು ಎಂದು ನನಗೆ ಸ್ಪಷ್ಟವಾಗಿತ್ತು. ಕೆಲವು ಖೈದಿಗಳು ಯಾವಾಗಲೂ ತೀರಾ ಸುಲಭದ ಕೆಲಸ ಮಾಡುತ್ತಿದ್ದರು. ದ್ವೇಷಿಸುವುದು ಸರಿಯಲ್ಲ ತಾನೆ? ಆದ್ದರಿಂದ ನನಗೆ ನಾನೂ ಇಂಥ 'ನೋಡಿಕೊಳ್ಳುವವರ' ಸಾಲಿಗೆ ಸೇರಬೇಕು ಎನಿಸಿತು. ನಾನು ಯುವಕನಾಗಿದ್ದಾಗಲೂ ಬಲಾಢ್ಯನಾಗಿರಲಿಲ್ಲ. ಹಸಿರನ್ನು ತಿನ್ನೋದರಲ್ಲಿ ಇರಲಿ, ಕಷ್ಟದ ಕೆಲಸ ಮಾಡೋದಿರಲಿ, ನಾನು ಯಾರಿಗೂ ಸ್ಪರ್ಧಿಯಾಗಿರಲಿಲ್ಲ. ಈಗ ನನ್ನಲ್ಲಿ ಉಳಿದಿರೋದೇ ನಲವತ್ತನಾಲ್ಕು ಕಿಲೋ ತೂಕದ ದೇಹ. ನನ್ನ ಪುಟ್ಟ ಜೀವವನ್ನು ಹಾಗೇ ಸಂರಕ್ಷಿಸಿಕೊಳ್ಳಬೇಕಂದ್ರೆ ನಾನು ಕಷ್ಟದ ಹಾದಿಯಲ್ಲಿ ಸಾಗಬಾರದು. ತುಂಬಾ ಜನ ಹೀಗೆ ತಮ್ಮ ಒಳ್ಳೇ ಸಂಗತಿಗಳನ್ನೇ ಕವಚ ಮಾಡಿಕೊಂಡು ಲೋಪಗಳನ್ನು ಮುಚ್ಚಿಕೊಳ್ಳುತ್ತಾರೆ. ನನ್ನಲ್ಲಿರೋ ಉಪಯುಕ್ತತೆ ಅಂದರೆ ನನ್ನ ಬರವಣಿಗೆ ಮಾತ್ರ ಅನ್ನೋದು ನನಗೆ ಗೊತ್ತಿತ್ತು. ಅದೊಂದೇ ನಾನು ಹೊರಜಗತ್ತಿನಲ್ಲಿ ಕಲಿತ ಒಂದೇ ಒಂದು ಕರುಣಾಜನಕ, ಕ್ಷುಲ್ಲಕ ಪ್ರತಿಭೆ. ಈ ಕಾರ್ಮಿಕ ಶಿಬಿರದಲ್ಲಿ ಯಾರಾದರೂ ಬರೆಯಬೇಕು ಎಂದಿದ್ದರೆ ಈ ಮುದಿ ಮುಖ್ಯಾಧಿಕಾರಿಯನ್ನೇ ಮುಖ್ಯ ಪಾತ್ರವನ್ನಾಗಿ ರೂಪಿಸಬೇಕಾಗಿತ್ತು. ಅವನನ್ನು ಹೊಗಳುವ ಸಾಲುಗಳಿದ್ದ ಒಂದು ಲೇಖನವನ್ನು ಬರೆಯಲು ನಾನು ನಿರ್ಧರಿಸಿದೆ. ನಿಜಕ್ಕೂ ಆತ ಬರೆಯಲು ತಕ್ಕ ವ್ಯಕ್ತಿಯೂ ಆಗಿದ್ದ ಅನ್ನೋದೂ ನಿಜವೇ.

ಒಂದು ದಿನ ಮುದಿ ಮುಖ್ಯಾಧಿಕಾರಿ ತನ್ನ ಪಾಠವನ್ನು ಮುಗಿಸಿದ ಮೇಲೆ ನಾನು ಅವನ ಹತ್ತಿರ ಹೋಗಿ ನನ್ನ ಈ ಆಸೆಯನ್ನು ವ್ಯಕ್ತಪಡಿಸುವ ಸಂದೇಶವನ್ನು ತಂಡದ ನಾಯಕನಿಗೆ ತಲುಪಿಸಿದೆ. ಕೆಲವು ದಿನಗಳ ನಂತರ ತಂಡದ ನಾಯಕ ನನ್ನನ್ನು ಮುಖ್ಯ ಕಾರ್ಯತಂಡದಿಂದ ಕಿತ್ತ. ದೊಡ್ಡ ಹೊಲಕ್ಕೆ ಹೋಗಬೇಕಿಲ್ಲ ಎಂದ. ಬದಲಿಗೆ ಮಣ್ಣಿನ ಮುದ್ದೆಗಳನ್ನು ಎಳೆಯೋದು ಅಥವಾ ಹಸಿರಿನಲ್ಲಿ ಹುಡುಕೋವಂಥ ಸರಳ, ಸುಲಭ ಕೆಲಸಗಳು. ನಾನೂ 'ನೋಡಿಕೊಳ್ಳಲ್ಪಡುವವರ' ವರ್ಗಕ್ಕೆ ಸೇರಿಬಿಟ್ಟೆ!

ಅಲ್ಲದೆ, ನಾನು ಮಣ್ಣಿನ ಮದ್ದೆಗಳನ್ನು ಎಳೆಯದ, ಹಸಿರನ್ನು ಹುಡುಕದ ಹೊತ್ತಿನಲ್ಲಿ ಈ ಬರವಣಿಗೆಗೆ ತೊಡಗಬೇಕು.ಇದ್ದಬದ್ದ ಕೃತಜ್ಞತಾಪೂರ್ವಕ ಸಂಭ್ರಮಗಳನ್ನು ನಾನು ಜೋಡಿಸಿಕೊಳ್ಳಬೇಕಾಗಿತ್ತು. ಮುದ್ದೆ ಎಳೆಯೋದಕ್ಕಿಂತ ಬರವಣಿಗೆಯಲ್ಲೇ ನನಗೆ ಹೆಚ್ಚು ಅಭ್ಯಾಸ ಇದ್ದುದರಿಂದ ನಾನು ಕೆಲವೇ ರಾತ್ರಿಗಳಲ್ಲಿ ಒಂದು ಲೇಖನವನ್ನು ಮುಗಿಸಿದೆ.

ಈಗಾಗಲೇ ನಾನು ಈ ಅಂತಿಮ ಪಠ್ಯವನ್ನು ತಿದ್ದುತ್ತಾ ಕೂತಿದೀನಿ.



# ಫೀನಿಕ್ಸ್ ಬಾತು ಗೊತ್ತ?

## ಜುಲೈ 13

**ಬಾತುಕೋಳಿ ಹಟ್ಟಿಯಲ್ಲಿ ಕಾಂಗ್ ತೆಗೆದೆ**
**'ಹೊಳೆ ಕೆಂಪು ಬಣ್ಣವೆ' ಮುಗಿಸಿದೆ**

ಬಾತುಕೋಳಿ ಹಟ್ಟಿಯು ಸರೋವರದ ತುದಿಯಲ್ಲಿದೆ. ಅಲ್ಲೇ ನಮ್ಮ ಮುದಿ ಮುಖ್ಯಾಧಿಕಾರಿ ಇಲ್ಲಿಗೆ ಬಂದ ಮೊದಲ ಕಾರ್ಯತಂಡಕ್ಕೆ ಬಿಡಾರ ಹೂಡಿದ್ದು. ಅದೇ ಈ ಶಿಬಿರದ ಮೊಟ್ಟಮೊದಲ ಬಂಡವಾಳ ನಿರ್ಮಾಣ ಎನ್ನಬಹುದು.

ಮೊದಲು ಇಲ್ಲಿ ನಿಜವಾಗಿಯೂ ಬಾತುಕೋಳಿಗಳನ್ನು ಇಡುತ್ತಿದ್ದರು. ಈಗಲೂ ಇಲ್ಲಿ ಬಾಯಲ್ಲಿ ನೀರೂರಿಸೋ ಕೆಲವು ಬಾತುಕೋಳಿಗಳಿವೆ. ಆದರೆ ಈಗ ಇಲ್ಲಿ ಮುಖ್ಯವಾಗಿ ಜೀವಿಸ್ತಾ ಇರೋರು ಖೈದಿಗಳು. ಬಾತುಕೋಳಿ ಸಾಕಣೆಗೆ ಅಂಥ ಆಸಕ್ತಿ ಈಗಿಲ್ಲ. ಎಲ್ಲಾ ಖೈದಿಗಳೂ ಈಗ ಹೊಲದಲ್ಲಿ ಬೆಳೆ ಬೆಳೆಯೋದಕ್ಕೆ ಶ್ರಮಿಸ್ತಾರೆ.

ಅಧಿಕೃತ ದಾಖಲೆಗಳ ಪ್ರಕಾರ ಈ ಜಾಗ ಒಂದು ಠಾಣೆ. ಆದರೆ ಜನ ಈಗಲೂ ಇದನ್ನು ಬಾತುಕೋಳಿ ಹಟ್ಟಿ ಎಂದು ಕರೆಯುತ್ತಿದ್ದರು. ಎಲ್ಲಾ ಬಾತುಕೋಳಿಗಳನ್ನು ತಿಂದು

ಮುಗಿಸಿದ ಮೇಲೂ ಹೀಗೇ ಕರೀಬಹುದು ಬಿಡಿ. ಯಾಕೆಂದರೆ ಚೀನಾದಲ್ಲಿ ಅನೇಕ ಸ್ಥಳಗಳು ಹೀಗೆ ನಿಜವಾದ ಅರ್ಥವನ್ನೇ ಹೊಂದಿದ್ದವು.

ಈ ಪ್ರಸ್ತಭೂಮಿಯೂ ಬದಲಾಗಿದೆ. ಇದೀಗ ಸಣ್ಣ ಗುಡ್ಡ. ಈ ಹಟ್ಟಿಯಿಂದ ನಮ್ಮ ಮುಖ್ಯಾಧಿಕಾರಿಯ ದೃಷ್ಟಿಯನ್ನು ಯಾರಾದ್ರೂ ಅರಿಯಬಹುದು. ಆತ ಯಾಕೆ ಇಲ್ಲೇ ಹೊಲ ಮಾಡಲಿಕ್ಕೆ ನಿರ್ಧರಿಸಿದ ಎಂದು ಗೊತ್ತಾಗೋದೇ ಇಲ್ಲಿಗೆ ಬಂದಾಗ. ಆಗ ನಮ್ಮ ಕಾರ್ಮಿಕ ಶಿಬಿರವೂ ಸೇರಿದಂತೆ ಇಡೀ ಪ್ರದೇಶವೇ ಒಂದು ದೊಡ್ಡ ಕೆರೆ. ನೀರು ಎಷ್ಟು ನೀಲಿ... ನೆಲವೂ ಸ್ಪಷ್ಟವಾಗಿ ಕಾಣುತ್ತಿತ್ತು. ಕೆಳಗೆ ಹವಳವೂ ಮೇಲೆದ್ದು ಬರುತ್ತಿದ್ದವು. ಹಳಬರ ಹೇಳಿಕೆ ಪ್ರಕಾರ ಇಲ್ಲಿ ಮೀನುಗಳು ಮೇಲೆ ಹಾರಿದಾಗ ದಡಕ್ಕೇ ಬಂದು ಬೀಳುತ್ತಿದ್ದವು. ಹಂದಿ ಸಾಕುತ್ತಿದ್ದವರು ಅವನ್ನು ಹಿಡಿಯುತ್ತಿದ್ದರು.

ನಮ್ಮ ಮುಖ್ಯಾಧಿಕಾರಿ ಘೋಷಿಸಿದ :' ಹುಲ್ಲು ಬೆಳೆಯೋ ಪ್ರದೇಶ ಅಂದ್ರೆ ಧಾನ್ಯವನ್ನು ಬೆಳೆಯೋ ಪ್ರದೇಶ!' ಸರಿ, ಕಾರ್ಮಿಕರು ಬುಟ್ಟಿಯಲ್ಲಿ ಮಣ್ಣು ಹೊತ್ತು ತಂದರು. ಸರೋವರಕ್ಕೆ ತುಂಬುತ್ತ ಹೋದರು. ಎಷ್ಟು ಘನ ಮೀಟರುಗಳಷ್ಟು ಮಣ್ಣನ್ನು ನಮ್ಮ ಹಿಂದಿನ ಖೈದಿಗಳು ತಂದು ಹಾಕಿದರು ಅನ್ನೋ ಲೆಕ್ಕ ನನಗೆ ಗೊತ್ತಿಲ್ಲ.

ಈಗ ಕೆರೆಯ ಒಂದು ಭಾಗ ಮಾತ್ರ ಹಾಗೇ ಇದೆ. ಅದು ಈಗಲೂ ಎಷ್ಟು ಚೆಲುವಿನಿಂದ ತುಂಬಿದೆ ಅನ್ನಿಸುತ್ತೆ. ಆ ನೀರಿನ ಮೇಲೆ ಬೇಸಗೆಯ ಗಾಳಿ ಬೀಸಿದಾಗ, ಜವುಗು ಸಸ್ಯಗಳು ಪರಸ್ಪರ ಪಿಸುಗುಟ್ಟಿದಾಗ.... ಅಜ್ಜಿಯೊಬ್ಬಳು ಕೆಳದನಿಯಲ್ಲಿ ಯಾವುದೋ ಮಂತ್ರವನ್ನು ಜಪಿಸಿದ ಹಾಗೆ... ಮಧ್ಯಾಹ್ನ ಮಂಜು ಮೇಲೇರುತ್ತೆ. ನೀರುಹಕ್ಕಿಗಳು ಕನ್ನಡಿಯಂಥ ನೀರಿನ ಮೇಲೆ ಹಾರುತ್ತವೆ. ಹಾಡಿನ ಯಾವುದೋ ಸದ್ದಿನ ಹಾಗೆ ಸುತ್ತುತ್ತ ಈ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಿ ಹಾರಿ ಜವುಗು ಸಸ್ಯಗಳ ಮೇಲೆ ಕೂತುಕೊಳ್ಳುತ್ತವೆ. ಈ ದೃಶ್ಯವೇ ಖೈದಿಗಳನ್ನು ಅವರ ಚಿಂತನೆಯಲ್ಲಿ ಬೇರೊಂದು ಜಗತ್ತಿಗೆ ಒಯ್ಯುತ್ತೆ.

ನೀವು ಭಾವುಕತೆಯನ್ನು ಉದ್ದೀಪಿಸುವ,ಕರುಳನ್ನು ತೀವ್ರವಾಗಿ ಕಾಡುವ ಈ ದೃಶ್ಯವನ್ನು ಅಲಕ್ಷಿಸಿ ಈ ನಿಸರ್ಗದತ್ತ ಸೌಂದರ್ಯವನ್ನು ಅಳೆಯಲು ವಾಸ್ತವಿಕ ಕಣ್ಣುಗಳನ್ನು ಹಾಯಿಸಿದರೆ, ನಿಮಗೆ ಇಂಥ ಪ್ರದೇಶದಲ್ಲಿ ಜನರನ್ನು ಕರೆತಂದು ಬೃಹತ್ ಪ್ರಮಾಣದ ಸರ್ಕಾರಿ ಹೊಲವನ್ನು ನಿರ್ಮಿಸುವ ಸಾಧ್ಯತೆ ಕಾಣುತ್ತೆ.

ಖೈದಿಗಳು ಇಲ್ಲಿ ಮೊದಲು ಮಣ್ಣಿನ ಬುಟ್ಟಿಗಳನ್ನು ಹೊತ್ತು ಹೊಲವನ್ನು ಎಬ್ಬಿಸುತ್ತಿದ್ದಾಗ, ಇಲ್ಲಿ ಯಾವುದೇ ಧಾನ್ಯ ಬೆಳೆಯೋದು ಅಸಾಧ್ಯವೇ ಆಗಿತ್ತು. ಇಲ್ಲಿ ಕೇವಲ ಮೀನು ಮತ್ತು ಬಾತುಕೋಳಿಗಳನ್ನು ಮಾತ್ರ ಬೆಳೆಸಿ ತಿನ್ನಬಹುದಾಗಿತ್ತು. ಉತ್ತರದ ಶಾನ್ ಶಿ ಪ್ರದೇಶದ ಜನರಿಗೆ ಮೀನು ಇಷ್ಟವಿಲ್ಲ. ಅವರಿಗೆ ಅದನ್ನು ಬೆಳೆಸೋದೂ ಗೊತ್ತಿಲ್ಲ. ಬಾತುಕೋಳಿಗಳ ವಿಷಯ ಬೇರೆ. ಅವು ತಿನ್ನಲು ರುಚಿ. ಅವುಗಳ ಆಹಾರವೂ ಸರಳ. ನೀವು ಬಾತುಕೋಳಿ ಮಂದೆಯನ್ನು ಕೆರೆಯ ಅಂಚಿಗೆ ಕರೆದುಕೊಂಡು ಹೋದರೆ ಸಾಕು. ಅವು ರಾತ್ರಿ ತಾವೇ ಮರಳುತ್ತವೆ. ನಿಮಗೆ ಬಾತುಕೋಳಿಗಳ ಮೊಟ್ಟೆಗಳು ಹೆಚ್ಚುವರಿ ಲಾಭ! ಮೊದಲು ಇಲ್ಲಿ ಬಾತುಕೋಳಿಗಳನ್ನು ಬೆಳೆಸೋಣ ಎಂದು ಮುಖ್ಯಾಧಿಕಾರಿ ನಿರ್ಧರಿಸಿದ.

ನಾನು ಬಾತುಕೋಳಿ ಹಟ್ಟಿಗೆ ಹೋಗುವ ಹೊತ್ತಿಗೆ ಸೂರ್ಯ ಮೇಲೇರಿದ್ದ. ನಾನೇ ಸ್ವತಃ ಅಲ್ಲಿಗೆ ಹೋದೆ. ಈ ಕ್ಷಣದ ಮಟ್ಟಿಗೆ ನಾನು ನಂಬಿಗಸ್ತ ಖೈದಿ. ನಾನು ಈ ಅದ್ಭುತ ಕ್ಷಣವನ್ನು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳೋದಕ್ಕೆ ಬಯಸಿದ್ದೆ. ನಾನು ನನಗೆ ಇಷ್ಟವಾಗೋವಷ್ಟು ಹೊತ್ತು ಕೆರೆಯನ್ನೇ ನೋಡುತ್ತ ಕುಳಿತೆ. ಸುತ್ತಮುತ್ತ ತಿನ್ನೋದಕ್ಕೆ ಏನಾದ್ರೂ ಸಿಗುತ್ತ ಅಂತಲೂ ಹುಡುಕಿದೆ. ನನ್ನ ಅದೃಷ್ಟ ಚೆನ್ನಾಗಿದ್ರೆ ರಸ್ತೆಯ ಮೇಲೆ ಹತ್ತಿರದ ಹಳ್ಳಿಯ ಯಾರಾದ್ರೂ ಸಿಗಬಹುದು. ನನ್ನ ಜೇಬಿನಲ್ಲಿ ಕೆಲವು ನಾಣ್ಯಗಳಿವೆ. ಬಹುಶಃ ನಾನು ಕೆಲವು ಆಲೂಗೆಡ್ಡೆಗಳನ್ನು ಖರೀದಿಸಬಹುದು.

ಬಾತುಕೋಳಿ ಹಟ್ಟಿಯ ಬಹುತೇಕ ಕಟ್ಟಡಗಳು ನಿಜಕ್ಕೂ ಹಟ್ಟಿಗಳೇ . ಅವು ನಾನು ಈವರೆಗೆ ಜೀವಿಸಿದ್ದ ಮುದ್ದೆಗಳ ರಾಶಿಗಿಂತ ಹಿಂದಿನ ಪೀಳಿಗೆಯವು. ಮೂರೇ ಗೋಡೆಗಳು. ನಾಲ್ಕನೆಯ ಬದಿಯಲ್ಲಿ ಜವುಗುಹುಲ್ಲಿನಿಂದ ಮಾಡಿದ ತಟ್ಟಿ. ಅದು ಮಳೆಯನ್ನು ತಡೆಯುತ್ತೆ, ಗಾಳಿಯನ್ನಲ್ಲ. ಒಳಗೆ ಬಾತುಕೋಳಿ ಹಿಕ್ಕೆ ವಾಸನೆ ಇದ್ರೂ, ಗಾಳಿ ಮಾತ್ರ ಒಂಥರ ಫ್ರೆಶ್. ಸಮಸ್ಯೆ ಅಂದ್ರೆ ಇವು ಕೇವಲ ಒಂದೂವರೆ ಮೀಟರ್ ಎತ್ತರದ ಹಟ್ಟಿಗಳು. ನಿದ್ದೆ ಮಾಡೋದಕ್ಕೆ ಮಲಗೋದನ್ನು ಬಿಟ್ಟು ಉಳಿದೆಲ್ಲ ಕೆಲಸವನ್ನೂ ನೀವು ಸೊಂಟ ಬಗ್ಗಿಸಿಯೇ ಮಾಡಬೇಕು.

ಮೊದಲು ಇಲ್ಲಿ ಬಾತುಕೋಳಿಗಳು ಮಾತ್ರ ಜೀವಿಸ್ತಿದ್ದರಿಂದ, ಈ ಕೊಳಕು ನೆಲದ ಮೇಲೆ ಹಾಗೇ ಮಲಗಲಿಕ್ಕೆ ಜನರಿಗೆ ಅಸಾಧ್ಯವಾಗಿದ್ದರಿಂದ ಅವರು ಒಳಗೇ ಕಾಂಗ್‌ಗಳನ್ನು (ಒಂದು ಬಗೆಯ ಕಟ್ಟೆ ಹಾಸಿಗೆಗಳು ಅಂದ್ಕೊಳ್ಳಿ) ರಚಿಸಿದ್ದರು. ಕಾಂಗ್ ಒಳಗೆ ಬರೋದಾಗಲೀ, ಹೊರಗೆ ಹೋಗೋದಾಗಲೀ ಒಂಥರ ಬೆಂಕಿಪೊಟ್ಟಣದ ಖಾನೆಯನ್ನು ಬಾಕ್ಸಿನಿಂದ ಹೊರಗೆ ಎಳೆದ ಅಥವಾ ಒಳಗೆ ತಳ್ಳಿದ ಹಾಗೆ. ಇವತ್ತು ನಾನು ದೊಡ್ಡ ಕೆಲಸಗಾರನಿಗೆ ಸಹಾಯಕನಾಗಿ ಕೆಲಸ ಮಾಡಿದೆ. ಕಾಂಗ್‌ನ ಮಣ್ಣಿನ ಮುದ್ದೆಗಳನ್ನು ಹೊರಗೆ ಹಾಕಿದೆ. ಈಗ ಬೇಸಗೆ. ಕಾಂಗ್ ಬೇಡ. ಮುದ್ದೆಗಳನ್ನು ಈಗ ಗೊಬ್ಬರವಾಗಿ ಬಳಸಬಹುದು.

ಈ ಕೆಲಸ ಮಾಡಬೇಕಾದ್ರೆ ನಾನು ಹಿರಿಯ ಕಾರ್ಮಿಕ ಕೆಳಗೆ ಕೂರಬೇಕು.

'ಹಟ್ಟಿಯಲ್ಲಿರೋ ಖೈದಿಯನ್ನು ನೀವು ನಂಬೋ ಹಾಗಿಲ್ಲ. ಅವರೆಲ್ಲ ಕಳ್ಳರು. ಅವರು ಮನೇಲೇ ಇರೋದಕ್ಕೆ ಬಿಟ್ರೆ ಎಲ್ಲಾ ಬಾತುಕೋಳಿಗಳ, ಎಲ್ಲಾ ಮೊಟ್ಟೆಗಳ ಕಥೆ ಮುಗಿದ ಹಾಗೆ' ಎಂದು ದೊಡ್ಡ ಖೈದಿ ಹೇಳಿದ. 'ಮನೆ' ಅಂದ್ರೆ ಹಟ್ಟಿ.

ಈ ದೊಡ್ಡ ಕಾರ್ಮಿಕ ತನ್ನ ಸೆರೆಮನೆ ಅವಧಿ ಮುಗಿದ ಮೇಲೂ ಇಲ್ಲೇ ಉಳಿದವ. ಆತನ ಶಿಕ್ಷೆ ಮುಗಿದು ಈಗ ಸಾಮಾನ್ಯ ಮನುಷ್ಯನಾಗಿದ್ದರೂ ಆತ ಈಗಲೂ 'ಕಾರ್ಮಿಕ – ಸುಧಾರಣೆ – ಮತ್ತು – ಕಾರ್ಮಿಕ – ಶಿಕ್ಷಣದಿಂದ – ಬಿಡುಗಡೆಯಾದ – ಖೈದಿ' ಎಂದೇ ಪರಿಗಣಿತ. ಹೊರಗೆ ಹೋದಮೇಲೂ ಖೈದಿಯ ಚರ್ಮವನ್ನು ಕಿತ್ತುಹಾಕಲು ಯಾರಿಗೂ ಸಾಧ್ಯವಿಲ್ಲ. ಆತ ನಲವತ್ತರ ಹರೆಯದವ. ಬಲವಾದ ದೇಹ. ತನ್ನ ಆಹಾರ ಪಡಿತರದ ಕೊರತೆಗಳನ್ನು ಹೇಗೋ ತುಂಬಿಸಿಕೊಳ್ಳುತ್ತಿದ್ದಾನೆ ಎಂಬಂತೆ ಭಾಸವಾಗುತ್ತಿತ್ತು. ಹ್ಯಾಗೆ ಇಂಥ ಅದೃಷ್ಟ ಒದಗಿತು ಎಂದು ಅವನನ್ನು ಕೇಳಿದೆ.

'ಯಾವುದು ಏನು ಎಂದು ಮುಖ್ಯಾಧಿಕಾರಿಗೆ ಗೊತ್ತು!' ಆತ ನಕ್ಕ. ಹುನಾನ್ ವರಸೆಯ ಭಾಷೆ. 'ನಾನೂ ಬಡ ಕೃಷಿ ಹಿನ್ನೆಲೆಯವ. ನನಗೆ ಕೆಲಸ ಮಾಡೋದು ಗೊತ್ತು. ಏನು ಮಾಡಬೇಕು ಅಂತ ನೋಡ್ತಾ ಇರೋದು ತುಂಬಾ ಮುಖ್ಯವೇ ಹೊರತು ಕೆಲಸಕ್ಕೆ ಬೆನ್ನು ತಿರುಗಿಸೋದಲ್ಲ. ನೀನು ಇಷ್ಟು ನೆನಪಿಟ್ಟುಕೊಂಡ್ರೆ ಸಾಕು. ಉದಾಹರಣೆಗೆ ನಿನಗೆ ಇನ್ನೂ ವಿಷಯ ಗೊತ್ತಾಗಿಲ್ಲ. ನೋಡು, ಎಲ್ಲಾ ಮಣ್ಣಿನ ಮುದ್ದೆಗಳನ್ನು ಬಾಗಿಲಲ್ಲೇ ಪೇರಿಸಿದೀಯ. ಇನ್ನು ಒಂದು ನಿಮಿಷದಲ್ಲಿ ನಾವುಹೊರಗೆ ಹೋಗೋದಕ್ಕೇ ಆಗಲ್ಲ!'

ಒಳಗಿಂದ ಮುದ್ದೆಗಳನ್ನು ತೀರಾ ದೂರಕ್ಕೆ ಎಸೆಯೋವಷ್ಟು ಶಕ್ತಿ ನನಗಿಲ್ಲ ಎಂದೆ. ಆತ ಕರುಣೆಯಿಂದನನ್ನನ್ನು ನೋಡುತ್ತ ಹೇಳಿದ ' ನೀನು ಇಂಕು ಮತ್ತು ಪೆನ್ನುಗಳ, ಸಂಸ್ಕೃತಿಯ ಮನುಷ್ಯ. ಮುಂದಿನ ಊಟ ಬರೋವಾಗ ನಿನಗೆ ಕೊಂಚ ಹೆಚ್ಚು ಬೇಯಿಸೋದಕ್ಕೆ ಹೇಳ್ತೀನಿ.'

ಈ ಉತ್ತೇಜನ ಸಿಕ್ಕದ ಮೇಲೆ ನಾನು ಮುದ್ದೆಗಳನ್ನು ಸಾಧ್ಯವಿದ್ದಷ್ಟೂ ದೂರ ಎಸೆಯೋದಕ್ಕೆ ಪ್ರಯತ್ನಿಸಿದೆ. ಆಮೇಲೆ ಅವುಗಳನ್ನು ಮತ್ತೆ ರಾಶಿ ಹಾಕಿದೆ.

ಮಧ್ಯಾಹ್ನದ ಊಟದ ಹೊತ್ತಿಗೆ ನೋಡಿದರೆ ಆತ ಕಾಣಿಸಲಿಲ್ಲ. ಈ ಕೋಮಿಂಗ್‌ಟಾಂಗ್ ಬೋಳಿಮಗ, ಈ ಐತಿಹಾಸಿಕ ಪ್ರತಿಕ್ರಾಂತಿಕಾರಿ ಬದ್ಮಾಶ್! ಆತ ತನ್ನ ಭರವಸೆಯನ್ನು ಮರೆತು ಊಟ ಮಾಡಲಿಕ್ಕೆ ಹೋಗಿಬಿಟ್ಟಿದ್ದ.

ನಾನು ಊಟ ಹಾಕುತ್ತಿದ್ದ ಸಿಬ್ಬಂದಿಯನ್ನೇ ದಿಟ್ಟಿಸಿದೆ. ಆತ ಅವರಿಗೆ ಒಂದು ಮಾತು ಹೇಳಿರಬಹುದು ಎಂದು ಎಂಬ ನಿರೀಕ್ಷೆಯಲ್ಲಿ ನನ್ನ ಕಣ್ಣುಗಳನ್ನು ಅಗಲಿಸಿದೆ. ಅವರು ನನ್ನ ಚಹರೆಯನ್ನು ಹುಡುಕುತ್ತಿರಬಹುದು. ಆದರೆ ಅವರು ಹಾಗೇನೂ ಮಾಡಲಿಲ್ಲ. ಅವರು ಉಳಿದ ಖೈದಿಗಳಿಗೆ ಕೊಡೋ ಆಹಾರವನ್ನೇ ನನಗೂ ಕೊಟ್ಟರು.

ಅದೇ. ನನ್ನ ಬೋಗುಣಿಯಲ್ಲಿ ಒಂದು ಸೌಟು ಹುಲ್ಲಿನ ಸಾರು.

ನಾನೇ ಎಸೆದ ಮುದ್ದೆಗಳ ರಾಶಿಯ ಮೇಲೆ ಒಬ್ಬನೇ ಕುಳಿತೆ. ನನ್ನ ನೀರು ಸಾರನ್ನೇ ಕುಗ್ಗಿಹೋದ ಮನಸ್ಸಿನಿಂದ ಕುಡೀತಿದ್ದೆ. ಆಗ ಆತ ಹೊಟ್ಟೆ ತುಂಬಿಸಿಕೊಂಡು ತೇಗುತ್ತ ಬಂದ. ತನ್ನ ಪ್ಯಾಂಟಿನಿಂದ ಎರಡು ಬಾತುಮೊಟ್ಟೆಗಳನ್ನು ತೆಗೆದ.

'ಇವು ನಿನಗೆ. ಬೇಯಿಸಿದ್ದು. ರೆಡಿ. ಮಜಾ ಮಾಡು!'

ನನಗೆ ದಿಗ್ಭ್ರಮೆಯಾಯಿತು. ನನ್ನ ತಲೆ ಮೇಲೆ ಹೀಗೆ ಅದೃಷ್ಟ ಬೀಳುತ್ತೆ ಎಂದು ಎಂದೂ ಭಾವಿಸಿರಲಿಲ್ಲ. ಈ ಭಿಕ್ಷೆಯನ್ನು ನನ್ನ ಕೈಗೆ ಹಾಕುವಾಗ ಅವನ ಮುಖದಲ್ಲಿ ಬಹುಕೋಟ್ಯಾಧಿಪತಿಯ ಭಾವ ಇಣುಕುತ್ತಿದೆ. ಈ ದಿನಗಳಲ್ಲಿ ಒಬ್ಬ ಮನುಷ್ಯ ಇಷ್ಟು ಸಿರಿವಂತನಾಗೋದಕ್ಕೆ ಎಲ್ಲಾದ್ರೂ ಸಾಧ್ಯ ಇದೆಯೆ?

ನಾನು ಒಂದೇ ಮೊಟ್ಟೆ ತಿಂದೆ. ನನ್ನ ಜೀವನದಲ್ಲೇ ಅಂಥ ರುಚಿಕರ ವಸ್ತುವನ್ನು ತಿಂದಿಲ್ಲ ಅನ್ನೋಹಾಗೆ ಆಸ್ವಾದಿಸಿದೆ. ಮೊದಲು ಮೊಟ್ಟೆಯ ಕವಚವನ್ನು ಅತೀವ ಪಶ್ಚಾತ್ತಾಪದಿಂದ ತೆಗೆದೆ. ಅದು ಮಾತ್ರ ನಿಜಕ್ಕೂ ತಿನ್ನಕ್ಕಾಗಲ್ಲ. ಆಮೇಲೆ ಇನ್ನೊಂದು ಮೊಟ್ಟೆಯನ್ನು ಬೆವರು

ಒರೆಸೋ ಬಟ್ಟೆಯಲ್ಲಿ ಜೋಪಾನವಾಗಿ ಸುತ್ತಿಕೊಂಡೆ. ಅದನ್ನು ಹಟ್ಟಿಯ ಗೋಡೆಯ ಸಂದಿನಲ್ಲಿ ಅಡಗಿಸಿ ಇಟ್ಟೆ. ನನ್ನ ಜೇಬಿನಲ್ಲಿ ಇಟ್ಟುಕೊಂಡ್ರೆ ಅದು ಜಜ್ಜಿಹೋಗಬಹುದು.

'ಅದನ್ನೂ ತಿನ್ನು. ಒಂದೇ ಮೊಟ್ಟೆ ಹ್ಯಾಗೆ ಸಾಕಾಗುತ್ತೆ?'

'ಇಲ್ಲ, ಬೇಕಾದಷ್ಟಾಯ್ತು. ಸಾಕು,ಸಾಕು.' ಇದೇ ಬುದ್ಧಿಜೀವಿಗಳ ಒಂದೇ ಒಳ್ಳೆ ಲಕ್ಷಣ. ಅವರು ಯಾವುದೇ ಸಂಗತಿಯನ್ನೂ ವಿಶ್ಲೇಷಣಾತ್ಮಕವಾಗಿ ನೋಡ್ತಾರೆ. ತಿನ್ನೋ ವಿಚಾರದಲ್ಲೂ ಅಷ್ಟೆ. ಒಂದು ಬಾತುಕೋಳಿ ಮೊಟ್ಟೆಯೇನೋ ಬಾಯೊಳಗೆ ಹಾಕಿಕೊಳ್ಳೋದಕ್ಕೆ ತುಂಬಾ ಚಿಕ್ಕದು. ಆದರೆ ಕ್ಯಾಲೋರಿಗಳ ವಿಷಯಕ್ಕೆ ಬಂದ್ರೆ, ಪ್ರೋಟೀನುಗಳ ಬಗ್ಗೆ ಮಾತಾಡೋದಾದ್ರೆ, ಕೊಬ್ಬು ಗಮನಿಸಿದ್ರೆ,ಇಡೀ ದೇಹದ ಅಗತ್ಯಗಳನ್ನು ತೃಪ್ತಿಪಡಿಸೋದಕ್ಕೆ ಒಂದು ಮೊಟ್ಟೆ ಬೇಕಾದಷ್ಟಾಯ್ತು.

ಮಧ್ಯಾಹ್ನ ನಾವು ಗೆಳೆಯರಾದೆವು. ಆತ ತನ್ನನ್ನು 1953ರಲ್ಲೇ ಬಂಧಿಸಿದರು ಎಂದು ತಿಳಿಸಿದ. ಆತನ ರೆಜಿಮೆಂಟ್ ದಂಗೆಯೆದ್ದ ಕೆಲವೇ ದಿನಗಳಲ್ಲಿ ಆತನ ನಾಯಕ ಸೆರೆಯಾದ. ಎಲ್ಲರನ್ನೂ ಸೇರಿಸಿ 'ಅಧ್ಯಯನ ಗುಂಪು' ರೂಪಿಸಲಾಯಿತು. ತಮ್ಮ ನಾಯಕನ ಅಪರಾಧಗಳನ್ನು ಬಯಲು ಮಾಡಲು ಅವರಿಗೆ ಹೇಳಲಾಯಿತು. ಚೆನ್ನಾಗಿ ಬಯಲು ಮಾಡದ ವ್ಯಕ್ತಿಗಳನ್ನು 'ಕಾನೂನು' ಪ್ರಕಾರ ನೋಡಿಕೊಳ್ಳಲಾಯಿತು. ಒಬ್ಬರೂ 'ಸಾಕಷ್ಟು' ಪ್ರಮಾಣದಲ್ಲಿ ನಾಯಕನ ಅಪರಾಧವನ್ನು ಬಯಲು ಮಾಡಲಿಲ್ಲ. ಈತನ ಸೆರೆವಾಸ ತೀರಾ ಲಘು: ಕೇವಲ ಐದು ವರ್ಷಗಳು.

'ಹಾಗೆ ನೋಡಿದ್ರೆ ಮನೆಯಲ್ಲಿ ಇರೋದಕ್ಕಿಂತ ಈ ಐದು ವರ್ಷಗಳೇ ಚೆನ್ನಾಗಿದ್ದವು! ನಾನು ಪ್ರತೀದಿನ ಬಾತುಕೋಳಿ ತಿಂತಿದ್ದೆ. ಹೊರಗೆ ಇದ್ದಿದ್ರೆ ಸಾಧ್ಯ ಆಗ್ತಿತ್ತ?'

'ಈಗಲೂ ನೀನು ಬಾತುಕೋಳಿ ತಿಂತೀಯಾ?' ನನ್ನ ದನಿಯಲ್ಲಿ ಒಂದು ಬಗೆಯ ಅಸೂಯೆ.

'ಹೌದು. ಮುಖ್ಯಾಧಿಕಾರಿ ತಿನ್ನೋವಾಗ್ಲೆಲ್ಲ ನಾನೂ ತಿಂತೇನೆ. ಈ ಶಾನ್ ಬೀ ಜನಕ್ಕೆ ಬಾತುಕೋಳೀನ ಏನು ಮಾಡಬೇಕು ಅಂತ ಗೊತ್ತಿಲ್ಲ. ಅವರು ಬಾತುಕೋಳೀನ ನೀರಿನಲ್ಲಿ ಕುದಿಸಿ ತಿಂತಾರೆ. ಅದನ್ನೇ ಬಾತುಕೋಳಿ ಅಂತಾರೆ. ಹಾಸ್ಯಾಸ್ಪದ. ನಾವು ಗೊತ್ತಲ್ಲ, ಹುನಾನ್‌ನವರು. ಅದನ್ನು ಬೇಯಿಸೋದು ಹ್ಯಾಗೆ ಅಂತ ಚೆನ್ನಾಗಿ ಗೊತ್ತು. ಸೋಯಾ ಸಾಸ್ ಹಾಕಿದ ಬಾತು, ಉಪ್ಪುನೀರಿನ ಬಾತು, ಹಬೆಯಲ್ಲಿ ಬೆಂದ ಬಾತು, ಫೀನಿಕ್ಸ್ ಬಾತು. ನಾನು ಪ್ರೆಸ್ಡ್ ಬಾತನ್ನೂ ಮಾಡಬಲ್ಲೆ. ನಾನು ಬೇಯಿಸಿದ ಬಾತನ್ನೇ ಮುಖ್ಯಾಧಿಕಾರಿ ಇಷ್ಟಪಡ್ತಾನೆ.'

'ಮುಖ್ಯಾಧಿಕಾರಿ ಈಗಲೂ ಬಾತು ತಿಂತಾನಾ?!' ನನಗೆ ಆಘಾತವಾಯ್ತು.

ಇಡೀ ದೇಶವೇ ಹಸಿವಿನಿಂದ ತತ್ತರಿಸಿರೋವಾಗ, ತನ್ನ ಜನರ ಸಿಹಿ ಕಹಿಯನ್ನು ಸಮಾನವಾಗಿ ಹಂಚಿಕೊಳ್ತಾನೆ ಎಂದು ನಾನು ಗೌರವಿಸುವ ಈ ಮುಖ್ಯಾಧಿಕಾರಿ ಹೀಗೆ ಬಾತುಕೋಳಿ ತಿಂತಾನೆ !

‘ಹೌದು! ದಿನಕ್ಕೆ ಒಂದು! ತಾನೇ ತಿನ್ನಲಿಕ್ಕೆ ಅಂತ ಸಾಕ್ತಿರೋ ಬಾತುಕೋಳಿಗಳಲ್ಲಿ ಒಂದನ್ನು ನಿನಗೆ ಕೊಡ್ತಾನೆ ಅಂತ ತಿಳ್ಕೊಂಡಿದೀಯ? ಹ!’ ಆತ ಮುಖ್ಯಾಧಿಕಾರಿ ಪರವಾಗಿ ನನ್ನನ್ನು ಛೇಡಿಸಿದ.

ಇದು ನಿಜಕ್ಕೂ ಮುಖ್ಯಾಧಿಕಾರಿಯ ನಿಂದನೆ. ಅವನ ಮುಖ ನೋಡಿದಾಗ ನಮಗೆಲ್ಲರಿಗೂ ಪ್ರತಿದಿನವೂ ಸೇರುವ ಬಾತುಕೋಳಿಗಳನ್ನು ಮುಖ್ಯಾಧಿಕಾರಿ ತಿನ್ನೋದು ತಪ್ಪಲ್ಲ ಎನ್ನುವಂತಿತ್ತು. ಅದು ಅವನಿಗೆ ಅಂಥ ಮುಖ್ಯ ವಿಷಯವೇ ಆಗಿರಲಿಲ್ಲ. ಅದಕ್ಕೇ ಆತ ಅದನ್ನು ದೊಡ್ಡ ದನಿಯಲ್ಲಿ ನನಗೆ ಹೇಳಿದ್ದ.

ನಾವು, ಬುದ್ಧಿಜೀವಿಗಳು ಭಿನ್ನ. ಯಾವುದಾದ್ರೂ ಸಂಗತಿ ಒಳ್ಳೆಯದಲ್ಲ ಎಂದರೆ ಅದರ ಬಗ್ಗೆ ಮಾತಾಡಬಾರದು ಎಂದು ನಮಗೆ ಗೊತ್ತು. ಹಾಗೆ ಮಾತಾಡೋದಕ್ಕೆ ಧೈರ್ಯವೂ ಇರಲ್ಲ ಬಿಡಿ ! ಹೀಗಿದ್ದರೂ ಮುಖ್ಯಾಧಿಕಾರಿ ಬುದ್ಧಿಜೀವಿಗಳಿಗೆ ಬೇರೆಯವರಿಗಿಂತ ಹೆಚ್ಚಾಗಿ ಎಚ್ಚರಿಕೆ ನೀಡ್ತಿದ್ದ. ಪ್ರತಿನಿತ್ಯ ನಮ್ಮ ಕುಂಡೆಗೆ ಬಾರಿಸ್ತಿದ್ದ. ಆದರೆ ವಾಸ್ತವವಾಗಿ ಬುದ್ಧಿಜೀವಿಗಳಿಗೆ ಯಾವುದನ್ನು ಬಿತ್ತರಿಸಬೇಕು, ಯಾವುದನ್ನು ಆಳವಾಗಿ ಅಡಗಿಸಿಡಬೇಕು ಎಂಬುದು ಚೆನ್ನಾಗಿ ಗೊತ್ತಿತ್ತು.

ಉದಾಹರಣೆಗೆ ನಾನೇ. ಮುಖ್ಯಾಧಿಕಾರಿ ಜನರ ಬಾತುಕೋಳಿಗಳನ್ನು ದಿನಾಲೂ ತಿಂತಾನೆ ಎಂದು ನನಗೆ ಗೊತ್ತಿದ್ದರೆ ನಾನು ಅದನ್ನು ಮುಖ್ಯಾಧಿಕಾರಿಗಿಂತ ಹೆಚ್ಚು ಗುಪ್ತವಾಗಿ ಇಡ್ತೇನೆ.

ಅಕಸ್ಮಾತ್ ನನಗೆ ಮುಖ್ಯಾಧಿಕಾರಿ ಬಾತುಕೋಳಿಗಳನ್ನು ತಿಂತಾನೆ ಎಂದು ಗೊತ್ತಾಗಿದೆ. ಆದರೂ ನಾನು ಅತನ ಬಗ್ಗೆ ಲೇಖನ ಬರೆಯೋದನ್ನು ಮುಂದುವರೆಸಿದೆ. ಅತನ ಚಹರೆ ನನ್ನೊಳಗೆ ಕೊಂಚ ಕುಗ್ಗಿದೆ, ನಿಜ. ಆದರೆ ಸಾರ್ವಜನಿಕ ಕರ್ತವ್ಯಗಳಲ್ಲಿ ಆತ ತೋರುವ ಪ್ರಾಮಾಣಿಕತೆಯ ಬಗ್ಗೆಹೆಚ್ಚಿನ ಒತ್ತು ನೀಡ್ತೇನೆ. ಗೌರವಾನ್ವಿತ ಹಿರಿಯರು ಮತ್ತು ಸಂಬಂಧಿಕರ ಬಗ್ಗೆ ಕೆಟ್ಟದ್ದನ್ನು ಹೇಳುವುದು ಸರಿಯಲ್ಲ ಎಂಬ ನಂಬಿಕೆ ಚೀನೀ ಬುದ್ಧಿಜೀವಿಗಳಲ್ಲಿದೆ. ‘ಹೊಸ ಮನುಷ್ಯರನ್ನು ಹೊಗಳಲು, ಕ್ರಾಂತಿಕಾರಿ ನಾಯಕರನ್ನು ಶ್ಲಾಘಿಸಲು’ ಸಾಹಿತ್ಯರಚನೆ ಮಾಡಬೇಕೆಂಬ ನಾಯಕರುಗಳ ಕರೆಗೆ ಈ ಸಂಪ್ರದಾಯ ಚೆನ್ನಾಗಿ ಹೊಂದಿಕೊಳ್ಳುತ್ತೆ. ತಾವು ಒಂದು ಬಗೆಯ ಮಾಲೀಕತ್ವವನ್ನು ಹೊಂದಿದ್ದೇವೆ ಎಂಬ ಭಾವವನ್ನು ಲೇಖಕರು ಇಲ್ಲಿ ಅನುಭವಿಸಬಹುದು. ನಾವು ಇಲ್ಲಿ ಹೊಂದಿರುವ ಸೆನ್ಸಾರ್‌ಶಿಪ್ ತೀರಾ ಅನವಶ್ಯಕ – ಲೇಖಕರು ಈಗಾಗಲೇ ತಮ್ಮ ತಲೆಯೊಳಗೆ ಅತ್ಯಂತ ಖಡಕ್ ಆಗಿರುವ ಸ್ವಯಂ ಸೆನ್ಸಾರ್‌ಶಿಪ್ ಬ್ಯೂರೋವನ್ನು ಭದ್ರವಾಗಿ ಸ್ಥಾಪಿಸಿಕೊಂಡಿದ್ದಾರೆ.

ಈ ಸಂಜೆ ನಾನು ನನ್ನ ಹಾಸಿಗೆಯ ಮೇಲೆ ಹೊಟ್ಟೆ ಇಟ್ಟು ಮಲಗಿದೆ. ಮುಖ್ಯಾಧಿಕಾರಿಯನ್ನು ‘ಹೊಳೆಯುತ್ತಿರು ಕೆಂಪು ಕಿರಣವೆ’ ಎಂದು ಹೊಗಳಿದೆ. ಹಾಗೇ ಅವನ ಕೈಯಿಂದ ತಪ್ಪಿಸಿಕೊಂಡಿದ್ದ ಬಾತುಮೊಟ್ಟೆಯನ್ನು ಗುಪ್ತವಾಗಿ ತಿಂದೆ. ಒಟ್ಟಾರೆ ಇವತ್ತು ತುಂಬಾ ಒಳ್ಳೇ ದಿನ. ನನಗೆ ರಸ್ತೆಯಲ್ಲಿ ಯಾರೂ ಸಿಗಲಿಲ್ಲ, ನಾನು ಆಲೂ ಖರೀದಿ ಮಾಡಲಾಗಲಿಲ್ಲ. ಆದರೆ ಬಹುಶಃ ಆಲೂಗಿಂತ ಅದೆಷ್ಟೋ ಹೆಚ್ಚು ಪ್ರಮಾಣದಲ್ಲಿ ಪ್ರೋಟೀನು ಇರೋ ಒಂದು ವಸ್ತುವನ್ನು ನನಗೆ ಕೊಡಲಾಗಿದೆ. ಹಾಗೇ ಲೇಖನದ ಕೆಲಸಾನೂ ಸರಳವಾಗಿ ಸಾಗ್ತಿದೆ. ಶೀರ್ಷಿಕೆ ತೀರಾ ಅಶ್ಲೀಲವಾಗಿರಬಹುದು. ಆದರೆ

ಸಾಹಿತ್ಯದ ಶೀರ್ಷಿಕೆಗಳು ಹಾಗೆ ಇರೋದು ಈಗಿನ ಫ್ಯಾಶನ್. 'ಚಳಿಗಾಲದ ಬೆಳೆ ತೆಗೆಯಲು ಆತುರ ಮಾಡಿ', 'ನಾಟಿಗೆ ಮುಂದಡಿ ಮುಂದಡಿ ಇಡಿ',' ಬೇಸಗೆ ಮತ್ತು ಚಳಿಗಾಲದ ಮೇಲೆ ಫಸಲು ಕಟಾವು ರದ್ದತಿ ಅವಲಂಬಿಸಿದೆ', 'ಚಳಿಗಾಲದ ನಾಟಿ ಮಾಡಲು ಪಕ್ಷದ ನಾಯಕ ತನ್ನ ತಂಡದ ಜೊತೆಗೆ ಇರ್ತಾನೆ', 'ನೀವೇ ನಮ್ಮ ಮಾದರಿ', 'ನರ್ಸ್‌ಮೇಡ್ ಹಂದಿ' ಮುಂತಾಗಿ ಈಗ ಮ್ಯಾಗಜಿನ್‌ಗಳಲ್ಲಿ ತುಂಬಿ ಹರಿಯುತ್ತಿರುವ ಶೀರ್ಷಿಕೆಗಳಿಗೆ ಹೋಲಿಸಿದರೆ 'ಹೊಳೆಯುತ್ತಿರುವ ಕೆಂಪು ಕಿರಣವೆ' ಶೀರ್ಷಿಕೆಗೆ ಕೊನೇಪಕ್ಷ ಕೊಂಚ ಕಾವ್ಯದ ಗುಣ ಇದೆ.

ಅಲ್ಲ, ನಿಮಗೂ ಹಾಗೆ ಅನ್ನಿಸಲ್ವ ಹೇಳಿ?





# ಕ್ಲೋರೋಫಿಲ್ ಸಹಿತ ಆತ್ಮವಿಶ್ವಾಸಭರಿತ

## ಜುಲೈ 14

**ಬೆಳಗ್ಗೆ ಕಳೆ ಕಿತ್ತೆ**
**ಮಧ್ಯಾಹ್ನ ಅವುಗಳನ್ನು ಅರಸಿದೆ.**

ಗಿಡಗಳನ್ನು ತಿನ್ನಲು ಕಿತ್ತಾಗ ಕೆಲವು ಖೈದಿಗಳು ಬೇಜವಾಬ್ದಾರಿಯಿಂದ ವರ್ತಿಸ್ತಾರೆ ಅಂತ ನಾನು ಇಲ್ಲಿ ಹೇಳಿದೇನೆ. ಹೀಗೆ ಕಳೆ ಕೀಳೋರನ್ನು 'ನೋಡಿಕೊಳ್ಳುತ್ತಿರುವ' ಮತ್ತು ಆಸ್ಪತ್ರೆಯ ಖೈದಿಗಳ ಪೈಕಿ ಆರಿಸ್ತಾರೆ. ಮುಖ್ಯ ಕಾರ್ಯ ತಂಡವು ಎಂದಿನಂತೆ ಕೆಲಸದ ಮೇಲೆ ಹೋದಾಗ ನಾವು ಸೇರ್ತೇವೆ. ಮೆದುಹೃದಯದ ತಂಡನಾಯಕನ ಜೊತೆಗೆ ಹತ್ತಿರದ ಹೊಲಕ್ಕೆ ಹೋಗ್ತೇವೆ.

ನಿರ್ದಿಷ್ಟ ಸ್ಥಳ ತಲುಪಿದ ಮೇಲೆ ನಾವು ಅಲ್ಲೇ ಹರಡಿಕೊಳ್ತೇವೆ. ಕಳೆಗಿಡಗಳ ದೊಡ್ಡ ಕಂಟಿಗಳನ್ನು ಹುಡುಕ್ತೇವೆ. ನಾವು ಹ್ಯಾಗಪ್ಪಾ ಅಂದ್ರೆ ತಮ್ಮದೇ ವ್ಯಾಪ್ತಿಯಲ್ಲಿ ಆಹಾರವನ್ನು ಹುಡುಕೋ ಮೊಲಗಳ ಹಾಗೆ. ಸಾಮಾನ್ಯವಾಗಿ ಆಸ್ಪತ್ರೆಯ ಖೈದಿಗಳು ಕಳೆಗಾಗಿ ನೆಲವನ್ನು ಅಗೆಯಲ್ಲ. ಅವರು ದಟ್ಟವಾಗಿ ಹುಲ್ಲು ಬೆಳೆದ ಪ್ರದೇಶವನ್ನು ಹುಡುಕಿ ಮಲಗ್ತಾರೆ. ಅವರನ್ನು ಹಾಗೆ ನೋಡಿದರೂ ತಂಡನಾಯಕ ತಲೆ ಕೆಡಿಸಿಕೊಳ್ಳಲ್ಲ. ಅವನ ಉದ್ದೇಶಗಳೇ ಬೇರೆ. ಕಾಯಿಲೆ ಇದ್ದವರು ಹಾಸಿಗೆಯಲ್ಲಿ ಮಲಗಬೇಕು. ಅವರನ್ನು ಹೊರಗೆ ತಂದು ಸಂಖ್ಯೆಯನ್ನು ಹೆಚ್ಚಿಸಿಕೊಳ್ಳೋದು ತುಂಬಾ ಮುಖ್ಯ.

ಆದರೆ 'ನೋಡಿಕೊಳ್ಳುತ್ತಿರುವ'ಂಥ ನಮ್ಮಂಥ ಖೈದಿಗಳು ನಿಜವಾಗಿಯೂ ಅಗೆಯಬೇಕಾಗಿತ್ತು. ನಮ್ಮ ಬಗ್ಗೆ ತಂಡನಾಯಕ ತುಂಬಾ ಕಟ್ಟುನಿಟ್ಟು. ಯಾಕೆಂದರೆ ನಾವೇ ಇಡೀ ಕ್ಯಾಂಪಿಗೆ ಬೇಕಾಗೋವಷ್ಟು ಹುಲ್ಲನ್ನು ಬುಡಸಹಿತ ಕೀಳಬೇಕಾದ ಹೊಣೆಗಾರಿಕೆ ಇರುವವರು. ನಾವು ಅದಾಗಲೇ ಹೊಗಳಲ್ಲಿ ಕೆಲಸ ಮಾಡದೆ ಇರಬಹುದಾದ ಸವಲತ್ತುಗಳನ್ನು ಹೊಂದಿರೋರು.ಹಾಗೇ 'ತರಲೆ ತುರಿಕೆ ಗುಳ್ಳೆ'ಗಳನ್ನು ಸಹಿಸಿಕೊಳ್ಳುವ ತಾಪತ್ರಯ ಇಲ್ಲದವರು!

'ನೀವು ಪ್ರತಿಯೊಬ್ಬರೂ ಇಪ್ಪತ್ತೈದು ಜಿನ್ (ಒಂದು ಜಿನ್ ಅಂದರೆ ಸುಮಾರು ಅರ್ಧ ಕಿಲೋ) ಕಳೆ ಕೀಳಬೇಕು. ಹಾಗೆ ಮಾಡದೇ ಇದ್ರೆ ನಿಮಗೆ ಊಟ ಇಲ್ಲ !' ಮೇಲ್ಮಟ್ಟದ ಒಂದು ಜಾಗದಲ್ಲಿ ನಿಂತು ನಾಯಕ ಕಿರುಚ್ತಿದ್ದ. ಆಮೇಲೆ ಒಣ, ತಣ್ಣನೆಯ ಜಾಗ ನೋಡಿಕೊಂಡು ಮಲಗ್ತಿದ್ದ.

ನನ್ನ ಪಾಲಿನ ಒಂದು ಬೋಗುಣಿ ನೀರು ಹುಲ್ಲು ಸಾರನ್ನು ತಿನ್ನಲು ನಾನೂ ಕಳೆಗಳನ್ನು, ಹುಲ್ಲನ್ನು ಬೇರುಸಹಿತ, ಕೊಳೆಸಹಿತ ಕೀಳಬೇಕಾಗಿತ್ತು. ಈ ಕೊಳೆ ಅಂಥ ಭಾರವಾಗಿರಲಿಲ್ಲ ಅನ್ನೋದೇ ಬೇಸರದ ವಿಷಯ.

ಇಡೀ ದೇಶವೇ ನೈಸರ್ಗಿಕ ದುರಂತಗಳಿಂದ ಯಾತನೆಗೆ ಒಳಗಾಗಿದೆ ಅನ್ನೋ ಸಂಗತಿ ಕೇಳ್ತಿದ್ದೇವೇನೋ ನಿಜ. ಆದರೆ ನಾವಿದ್ದ ಸ್ಥಳದ ವಾತಾವರಣ ಮಾತ್ರ ತುಂಬಾ ಸುಂದರವಾಗಿದೆ. ನಮ್ಮ ಮೇಲೆ ಈ ನಿಸರ್ಗ ಯಾಕೆ ಅಷ್ಟು ಕರುಣಾಮಯಿ ಅನ್ನೋದು ನಮಗೆ ಅರ್ಥವಾಗ್ಲೇ ಇಲ್ಲ. ಹವಾಮಾನ ಚೆನ್ನಾಗಿದೆ. ಆದರೆ ನಮಗೆ ಮಾತ್ರ ಹಸಿವು. ಸರಕ್ ಎಂದು ಒಂದು ಹುಲ್ಲಿನ ಗಿಡ ಮೇಲೆ ಬಂದಾಗ ಅದರ ಜೊತೆಗೇ ವಾಯುವ್ಯ ದಿಕ್ಕಿನಿಂದ ಬೀಸುವ ಗಾಳಿಯಲ್ಲಿ ಬಂದು ಸೇರಿಕೊಳ್ಳುವ ಮೇಲ್ಮಣ್ಣಿನ ಪರಿಮಳ. ಈ ಪರಿಮಳದ ಹಸಿರು ಆವಿ ಅತ್ಯಂತ ಮಾದಕ. ಒಂದು ಬ್ಯಾಂಕ್ವೆಟ್‌ನಲ್ಲಿ ಇದ್ದೀರೋ ಅಥವಾ ಒಂದು ಹಣ್ಣಿನ ಅಂಗಡಿಯಲ್ಲಿ ಇದ್ದೀರೋ ಎಂಬ ಭಾವ ನಿಮ್ಮನ್ನು ಆವರಿಸುತ್ತೆ. ಅದರ ಪರಿಮಳ ನಿಮ್ಮ ಪುಪ್ಪುಸದೊಳಕ್ಕೆ ನುಗಿ ರಕ್ತದಲ್ಲಿ ಬೆರೆತು ದೇಹದೆಲ್ಲೆಡೆ ಹರಡುತ್ತೆ.

ಈ ಹಸಿರು ಆವಿಯನ್ನು ಹೀರಿಕೊಂಡು ನಾನು ನನ್ನ ದೇಹವೇ ಹಿಗ್ಗುತ್ತ ಹಿಗ್ಗುತ್ತ ಪಾರದರ್ಶಕವಾಗುತ್ತಿದೆ ಎಂಬ ಭಾವವನ್ನು ಹೊಂದುತ್ತಿದ್ದೆ. ಬಹುಶಃ ನಾನು ತುಂಬಾ ತೆಳು ಹುಲ್ಲಿನ ಸಾರನ್ನು ಕುಡಿದಿದ್ದಕ್ಕೇ ಹೀಗಾಗಿರಬಹುದು. ಅಥವಾ ನನ್ನ ದೇಹವು ಅದಾಗಲೇ ಸಾಕಷ್ಟು ಪ್ರಮಾಣದಲ್ಲಿ ಈ ಕ್ಲೋರೋಫಿಲ್‌ನ್ನು ಹೊಂದಿದೆ. ಅದು ಈ ಜಗತ್ತಿನ ಹಸಿರಿನ ಜೊತೆಗೆ ಬೆರೆಯುತ್ತಿದೆ. ಒಂದು ಕ್ಷಣದ ಮಟ್ಟಿಗೆ ನನಗೆ ಹಸಿವು ಕಾಡುತ್ತಿರಲಿಲ್ಲ. ಬದಲಿಗೆ ನಾನು ಒಂದು ಮೈಗೆ ಎಚ್ಚರವಿಲ್ಲದ, ಆತ್ಮವಿಶ್ವಾಸಭರಿತ ಎಳೆ ಹಸಿರು ಎಲೆಯಾಗಿದ್ದೇನೆ ಅನ್ನಿಸುತ್ತಿದೆ.

ನನಗೆ ಬರೀ ಇಪ್ಪತ್ತಮೂರು ವರ್ಷ ವಯಸ್ಸು. ವರ್ಷವರ್ಷವೂ ಬೆಳೆಯುವ ಗಿಡಗಳಿಗೆ ಹೋಲಿಸಿದರೆ ನಾನು ತೀರಾ ಹರೆಯದವ.

ಹಳದಿ ನದಿಯ ಎರಡೂ ಬದಿಯಲ್ಲಿರುವ ನೆಲದಲ್ಲಿ ಪ್ರತೀವರ್ಷ ಬರುವ ನೆರೆಯ

ಹೂಳು ಇದೆ. ಪರಿಣಾಮವಾಗಿ ಬುಡಮೇಲಾದ ಗಿಡಗಳ ಮೇಲಣ ಮಣ್ಣಿನ ಪದರಗಳು ಪುಸ್ತಕದ ಹಾಳೆಗಳ ಹಾಗೆ ಕಾಣಿಸುತ್ತವೆ. ಈ ಪದರಗಳಿಗೆ ಅವುಗಳದ್ದೇ ಇತಿಹಾಸ ಇದೆ. ಪ್ರತಿಯೊಂದೂ ಕಾಲದ ಒಂದು ಘಟ್ಟವನ್ನು ಬಣ್ಣಿಸುತ್ತದೆ. ಮನುಷ್ಯರಿಗೆ ಗೊತ್ತಾಗದ, ಅರ್ಥವೇ ಆಗದ ಅದ್ಭುತ ಕಥೆಗಳನ್ನು ಹೇಳುತ್ತದೆ. ನನಗೆ ಹಿಂದೆಂದೂ ಹೀಗೆ ನೆಲದ ನೇರ ಸಂಪರ್ಕ ಆಗಿರಲಿಲ್ಲ. ಇದು ಕೊಳಕು ನೆಲವಲ್ಲ. ತುರಿಕೆ ತರುವುದಿಲ್ಲ. ಬರೀ ಹಳದಿ ನೆಲ. ನಮ್ಮ ಚರ್ಮದ ಹಾಗೇ ಕಾಣುವ ನೆಲ. ಅಸಂಖ್ಯ ವಸ್ತುಗಳನ್ನು ಬೆಳೆಯಬಹುದಾದ ನೆಲ. ನಮ್ಮ ದೇಹದ ಹಾಗೇ ಅದರ ವಾಸನೆ. ನಾನು ಹುಲ್ಲನ್ನು ಅಗೆಯುತ್ತಿದ್ದಂತೆ ನಾನು ನೆಲವನ್ನು ಅತ್ಯಂತ ತೀವ್ರವಾದ ಭಾವುಕತೆಯಲ್ಲಿ ಪರಿಶೀಲಿಸುತ್ತಿದ್ದೆ. ಪುಸ್ತಕದ ಪುಟಗಳು ನನ್ನ ಕೈಯಲ್ಲಿ ಹರಿದುಹೋಗುತ್ತಿವೆ. ಹಳದಿ ಮಣ್ಣಿನ ಧೂಳು ನನ್ನ ಸುತ್ತ ಮಂಜಿನಂತೆ ಹರಡುತ್ತೆ. ನಾನು ಒಂದು ಪ್ರಾಚೀನ ಜಗತ್ತಿಗೆ ಪರಿಚಯಗೊಂಡ ಹಾಗೆ. ಕೀಳುತ್ತಿರುವ ಹುಲ್ಲಿನ ಸದ್ದು ಯಾವುದೋ ಹಳೆಯ ಸಂಪುಟದ ಗಟ್ಟಿ ಹಾಳೆಗಳನ್ನು ತಿರುಗಿಸಿದ ಹಾಗೆ. ಎರಡಕ್ಕೂ ನಾನು ಎಂದೂ ಓದಲಾಗದ ಅದ್ಭುತ ಪಾಂಡಿತ್ಯ ಇದೆ.

ಪ್ರತೀ ಮುಂಜಾನೆಯ ಸೂರ್ಯಕಿರಣಗಳ ನಡುವೆ, ಹಸಿರು ತೇವಭರಿತ ನೆಲದ ಮೇಲೆ ಬೀಸುವ ಮೆಲುಗಾಳಿ, ಹಸಿರು ಗಾಳಿಯಲ್ಲಿ ಖುಷಿಯಿಂದ ಹಾರುವ ಮಿಡತೆಗಳು.... ನನ್ನ ಕೈಯಲ್ಲಿ ಅತ್ಯಂತ ಅರ್ಥಗರ್ಭಿತವಾದ, ಕುತೂಹಲಭರಿತ ಪುಸ್ತಕಗಳ ಹಾಳೆಗಳು.... ಆಹಾ! ನಾನು ಒಂದು ಕ್ಷಣ ಬದುಕಿನಲ್ಲಿ ನನ್ನ ಸ್ಥಿತಿಯನ್ನೇ ಮರೆಯುತ್ತಿದ್ದೆ. ಕವನ ಬರೆಯುವ ಮನಸ್ಥಿತಿಗೆ ಹೋಗುತ್ತಿದ್ದೆ.

ಆದರೆ ಇಲ್ಲೊಂದು ಅಪಾಯ ಇದೆ. ಅದು ದುರಂತಕ್ಕೂ ದಾರಿ ಮಾಡಿಕೊಡಬಹುದು. ಇಂಥ ದರಿದ್ರ ಕವನಗಳನ್ನುಬರೆದದ್ದಕ್ಕೇ ನಾನು ಈ ಕಠಿಣ ಶ್ರಮಕ್ಕೆ ಒಳಗಾಗಿದ್ದೇನೆ. ಚೀನಾದಲ್ಲಿ ಒಂದು ಹಳೆ ಗಾದೆ ಇದೆ:'ಪರ್ವತಗಳು ಮತ್ತು ನದಿಗಳನ್ನು ಚಲಿಸುವುದು ಸುಲಭ. ಆದರೆ ಮನುಷ್ಯನ ಪ್ರಕೃತಿಯನ್ನು ಬದಲಿಸುವುದು ಅಸಾಧ್ಯ.' ನಾನು ಕವನಗಳನ್ನು ಬರೆಯಬಾರದು ಎಂದು ಬಯಸಿದ್ದರೂ, ಕವನಗಳೇ ನನ್ನನ್ನು ಸುತ್ತಿಕೊಂಡಿವೆ ಅನ್ನಿಸುತ್ತಿತ್ತು.

ಈ ದಿನ ಅಂಥಾ ದುರದೃಷ್ಟದ ಘಟನೆಗಳು ನಡೆಯಲಿಲ್ಲ. ನನ್ನ ದಿನಚರಿಯನ್ನು ನೋಡಿದರೆ ನನಗೆ ನನ್ನ ಒಂದು ಬೋಗುಣಿ ಹುಲ್ಲಿನ ಸಾರು ಸಿಕ್ಕಿದೆ ಅನ್ನಿಸುತ್ತದೆ. ನನಗೆ ಊಟ ಕೊಡದೆ ಶಿಕ್ಷೆ ನೀಡಲಿಲ್ಲ. ಅಷ್ಟೇಕೆ, ನನಗೆ ಹಸಿರು ಹುಡುಕೋ ಇಷ್ಟವಾದ ಕೆಲಸವನ್ನೇ ಕೊಟ್ಟಿದ್ದರು.

ಹೀಗಿದ್ದೂ ನಾನು ನನ್ನ ಕೆಲವನ್ನು ಮುಗಿಸ್ಲಿಲ್ಲ ಎಂದೇ ಹೇಳಬೇಕು. ಇಪ್ಪತ್ತೈದು ಜಿನ್ ಎಂದರೆ ಸಾಮಾನ್ಯ ಭಾರವೇನಲ್ಲ. ನೀವು ಹಾಗಂತ ನಂಬದೇ ಇದ್ರೆ ನಿಮ್ಮದೇ ಕೈಗಳಲ್ಲಿ, ಖಾಲಿ ಹೊಟ್ಟೆಯಲ್ಲಿ ಅಷ್ಟು ಪ್ರಮಾಣದ ಹುಲ್ಲನ್ನು ಕಿತ್ತು ನೋಡಿ.

ಕಿತ್ತ ಹುಲ್ಲಿನಲ್ಲಿ ಕೆಲವನ್ನು ನಾನು ಅಲ್ಲೇ ತಿಂದು ಮುಗಿಸಿದ್ದೆ ಅಂತ ಹೇಳಬೇಕ?





# ಸೋರೆಕಾಯಿ ತಿನ್ನೋದು ಕ್ಷುದ್ರ ಹುಳಗಳನ್ನೂ ತಿನ್ನಬಹುದು!

## ಜುಲೈ 15

**ವಿಶ್ರಾಂತಿ. ಹಸ್ತಪ್ರತಿಗೆ ಮೊಹರು.**
**ಆದರೆ ಅಂಚೆಗೆ ಹಾಕಲಿಲ್ಲ. ಮಧ್ಯಾಹ್ನ ವರದಿ ಕೇಳಿದೆ.**
**ಠಾಣೆ ನಾಯಕ ವಾಂಗ್, ವಿಭಾಗ ನಾಯಕ ಹೌ, ಮುಖ್ಯಾಧಿಕಾರಿ)**
**ಡಬಲ್ ಕೌಂಟರ್ ಶುರು ಮಾಡಿದೆ.**

ನಮ್ಮ ಕಾರ್ಮಿಕ ಶಿಬಿರದಲ್ಲಿ 'ವಿಶ್ರಾಂತಿ' ಅನ್ನೋ ಸಿದ್ಧವ್ಯವಸ್ಥೆ ಏನೂ ಇಲ್ಲ. ನಿಯಮಿತ ರಜೆಯೂ ಇಲ್ಲ. ಹೊಲಗದ್ದೆಗಳಲ್ಲಿ ಹೆಚ್ಚು ಕೆಲಸ ಇಲ್ಲದ ದಿನಗಳಲ್ಲಿ ನಾವು ಕೆಲಸಕ್ಕೆ ಹೋಗಬೇಕೋ ಬೇಡವೋ, ಎಂದು ನಮ್ಮ ನಾಯಕರು ನಿರ್ಧರಿಸುತ್ತಿದ್ದರು.

ಈ ವಾಕ್ಯ ನಿಮಗೆ ಸರಿಯಾಗಿ ಕಾಣಿಸದೆ ಇರಬಹುದು. ಆದರೆ ಇದಕ್ಕಿಂತ ಚೆನ್ನಾಗಿ

ಬರೆಯೋದಕ್ಕೆ ನನಗೆ ಬರಲ್ಲ. ಮುಂದಿನ ಪುಟಗಳಲ್ಲೂ ನಿಮಗೆ ಇಂಥ ಅನೇಕ ವಾಕ್ಯಗಳು ಸಿಗುತ್ತವೆ. ಹುಷಾರಾಗಿರಿ !

ಇದನ್ನು ವಿಶ್ರಾಂತಿ ಎಂದು ಕರೆಯೋ ಹಾಗಿಲ್ಲ. ಕೆಲಸಕ್ಕೆ ಹೋಗದ ದಿನ. ವಾಸ್ತವವಾಗಿ ಈ ದಿನಗಳು ಇನ್ನೂ ಕಠಿಣ. ಅದರಲ್ಲೂ 'ನೋಡಲ್ಪಡುತ್ತಿರುವಂಥ' ನನ್ನಂಥ ಜನರಿಗೆ ತುಂಬಾ ಕಷ್ಟ. ದೊಡ್ಡ ಹೊಲಗಳಲ್ಲಿ ಕೆಲಸ ಮಾಡುವ ಖೈದಿಗಳಿಗೂ ಕೆಲಸಕ್ಕೆ ಹೋಗೋದು ಇಷ್ಟ ಇಲ್ಲ. ಕೆಲಸಕ್ಕೆ ಹೋಗದಿರೋದಕ್ಕೆ ಮುಖ್ಯವಾದ ಕಾರಣ ಎಂದರೆ ಕ್ಯಾಂಪು ಕೇವಲ ಎರಡು ಸಲ ಊಟ ನೀಡುತ್ತಿತ್ತು. ಬೆಳಗ್ಗೆ ಒಂಬತ್ತು ಗಂಟೆಗೆ ಒಂದು ಸಲ; ಮಧ್ಯಾಹ್ನ ನಾಲ್ಕು ಗಂಟೆಗೆ ಕೊನೇ ಸಲ.

ನಿಮ್ಮ ಹೊಟ್ಟೆಯಲ್ಲಿ ಒಂದು ಸೌಟು ಹುಲ್ಲಿನ ಸಾರು ಅಷ್ಟು ಕಾಲದವರೆಗೆ ಇರುತ್ತಾ ಅಂತ ನೀವೇ ಪರೀಕ್ಷೆ ಮಾಡಿಕೊಳ್ಳಿ!

ಪರಿಣಾಮ: ಇಂಥ ದಿನಗಳಲ್ಲಿ ತಿನ್ನಲು ಏನಾದ್ರೂ ಸಿಗುತ್ತಾ ಎಂದು ಹುಡುಕೋದೇ ತುಂಬಾ ಮುಖ್ಯವಾದ ಚಟುವಟಿಕೆ. ಹಾಗಂತ ನಮಗೆ ಹುಡುಕೋದಕ್ಕೆ ಹೊರಗೆ ಹೋಗೋದಕ್ಕೆ ಅನುಮತಿ ಸಿಗ್ತಿರಲಿಲ್ಲ. ಎರಡು ದಂಟಿನ ಹಾಗಿರೋ ಕಾಲುಗಳ ಮೇಲೆ ನಡೆದಾಡೋ ಭಯಂಕರ ನೆರಳುಗಳ ಹಾಗೆ ಖೈದಿಗಳು ಸೆರೆಮನೆಯಲ್ಲಿ ಅತ್ತಿತ್ತ ಸುತ್ತು ಹಾಕುತ್ತಿದ್ದರು. ಇರುವೆಗಳು ಒಂದನ್ನೊಂದು ದಾಟಿ ಮುಂದೆ ಹೋಗುವ ಹಾಗೆ ಎಲ್ಲರೂ ಆಹಾರಕ್ಕಾಗಿ ಹರಿಹಾಯ್ತಾ ಇದ್ದರು.

ನೀವು ಪ್ರತಿಯೊಬ್ಬ ವ್ಯಕ್ತಿಯ ಮುಖದ ಮೇಲಿನ ಭಾವವನ್ನು ಪರಾಮರ್ಶೆಗೆ ಒಳಪಡಿಸಬೇಕು. ಅವನ ಮುಖದ ನೋಟವೇ ಒಂದು ಸಂಕೇತ ಆಗಿರಬಹುದು. ಇರುವೆಗಳು ಒಂದಕ್ಕೊಂದು ಅಂಟಿಕೊಂಡು ಸಂದೇಶ ರವಾನಿಸೋ ಹಾಗೆ ಯಾರಾದ್ರೂ ನಿಮಗೆ ಹತ್ತಿರದಲ್ಲಿ ಎಲ್ಲೋ ತಿನ್ನಲಿಕ್ಕೆ ಏನೋ ಇದೆ ಎಂದು ಹೇಳುತ್ತಿರಬಹುದು. ಇದನ್ನು ನೀವು ಅರ್ಥ ಮಾಡ್ಕೊಂಡು ಅವನ ಜೊತೆಗೆ ಒಂದು ಮೂಲೆಗೆ ಹೋಗಿ ಮಾತುಕತೆ ಶುರು ಮಾಡ್ತೀರಿ. ಸಾಮಾನ್ಯವಾಗಿ ಇಲ್ಲಿ ಬಾರ್ಟರ್ (ವಸ್ತುಗಳ ಪರಸ್ಪರ ಕೊಡುಕೊಳ್ಳುವಿಕೆ) ವ್ಯವಹಾರ ನಡೆಯುತ್ತೆ. ಇಲ್ಲಿ ಹೀಗೇ ಬೆಲೆ ಅಂತೇನೂ ಇಲ್ಲ. ವ್ಯವಹಾರ ಇಬ್ಬರ ಅಗತ್ಯಗಳಿಗೆ ತಕ್ಕ ಹಾಗೆ ನಡೆಯುತ್ತೆ. ಇದು ನ್ಯಾಯವಾದ್ದೇ. ಇಲ್ಲಿ ಇಬ್ಬರಿಗೂ ಸಮಾಧಾನ ಆಗಬೇಕಲ್ಲ....

ಉದಾಹರಣೆಗೆ ನನ್ನ ಲಾಂಗೈನ್ಸ್ ವಾಚು ಹತ್ತು ಸ್ಥಳೀಯ ಧಾನ್ಯದ ಕೂಪನ್‌ಗಳಿಗೆ ವ್ಯಾಪಾರವಾಯ್ತು. ನನ್ನ ಇಟಾಲಿಯನ್ ಬ್ರೀಫ್‌ಕೇಸ್ ಊದು ಬೋಗುಣಿ ಕಪ್ಪು ನೂಡಲ್‌ಗೆ ವ್ಯಾಪಾರವಾಯ್ತು. ಉಣ್ಣೆಯ ಸನ್ ಯಾತ್ ಸೇನ್ ಜಾಕೆಟ್ಟು , ಮರದ ಹೊಟ್ಟು ಲೇಪಿತ ತಂಬಾಕಿನ ಒಂದು ಕಟ್ಟಿಗೆ ಹೋಯ್ತು. ಒಂದು ಮೂಲಂಗಿಗೆ ಒಂದು ಟೈ ವ್ಯಾಪಾರವಾಯ್ತು. ಆ ವೃದ್ಧ ಖೈದಿಗೆ ನನ್ನ ಟೈ ನಿಜಕ್ಕೂ ಖುಷಿ ಕೊಡ್ತು. ಅದನ್ನು ಆತ ತನ್ನ ಪ್ಯಾಂಟು ಜಾರದ ಹಾಗೆ ಬೆಲ್ಟಿನ ಥರ ಬಳಸೋದಕ್ಕೆ ಯೋಚಿಸಿದ್ದ. ಎಷ್ಟೋ ಸಲ ಆತ ಎಂಥ ಉಪಕಾರ ಆಯ್ತು ಮಾರಾಯ ಅಂತ ನನ್ನ ಹತ್ರ ಹೇಳ್ತಾನೇ ಇದ್ದ. ಈ ವ್ಯಾಪಾರಕ್ಕೆ ಯಾರೂ ನನ್ನನ್ನು ಬಲವಂತ ಮಾಡಲಿಲ್ಲ. ಎಲ್ಲರೂ ನ್ಯಾಯವಾದ್ದನ್ನೇ ಮಾಡ್ತಾ

ಇದ್ದಾರೆ ಅಂತಾನೇ ನನಗನ್ನಿಸಿತ್ತು.

ಯಾವುದೇ ಮಾರುಕಟ್ಟೆ ಥರ ಖೈದಿಗಳ ಮಾರುಕಟ್ಟೆಯಲ್ಲೂ ಒಂದು ಬಗೆಯ ನಿಯಮಾವಳಿ ಇತ್ತು. ನೀವು ಇಬ್ಬರು ಖೈದಿಗಳು ಗೋಡೆ ಬದಿ ಕುಳಿತು ಸಣ್ಣ ದನಿಯಲ್ಲಿ ಮಾತಾಡ್ತಾ ಇರೋದನ್ನು ನೋಡಿದ್ರೆ, ಒಬ್ಬ ಗೌರವಾನ್ವಿತ ವ್ಯಕ್ತಿಯ ಹಾಗೆ ನೀವು ವರ್ತಿಸ್ತೀರ ; ಅವರ ಹತ್ತಿರ ಹೋಗಿ ಮಧ್ಯಪ್ರವೇಶ ಮಾಡಲ್ಲ. ಅಲ್ಲಿ ವ್ಯವಹಾರ ನಡೀತಿದೆ. ನೀವು ಅಲ್ಲೇ ಪಕ್ಕದಲ್ಲಿ ನಿಂತಿರಬಹುದು. ಅವರ ಮಾತುಕತೆ ವಿಫಲವಾಗಿ ಅವರಲ್ಲೊಬ್ಬರು ನಿಮ್ಮ ಜೊತೆ ವ್ಯಾಪಾರ ಮಾಡೋದಕ್ಕೆ ಬರಬಹುದು. ಕೆಲವು ಕ್ರಿಯಾಶೀಲ ಖೈದಿಗಳಂತೂ ಇಂಥ ವ್ಯವಹಾರದಲ್ಲಿ ಪಕ್ಕಾ ಪರಿಣತರು. ಅವರಿಗೆ ಹತ್ತಿರದ ಕುಟುಂಬಗಳ ಬೆಂಬಲ ಇರುತ್ತಿತ್ತು. ಅವರು ನಿಯಮಿತವಾಗಿ ವಸ್ತುಗಳನ್ನು ಒಳಗೆ ಕಳಿಸ್ತಾ ಇದ್ದರು. ಅಥವಾ ಅಲ್ಲಿ ಸ್ವತಂತ್ರ ಖೈದಿಗಳು ಇರ್ತಾ ಇದ್ರು. ಉದಾಹರಣೆಗೆ ಅಡುಗೆಯವರು ಅಥವಾ ಟ್ರಕ್ ಚಾಲಕರು ಅಥವಾ ರಾಸುಗಳ ಮೇವನ್ನು ಬೆಳೆಸೋವವರು. ಅಥವಾ ಅವರು ಶಿಬಿರ ನಡೆಸುವ ಸರ್ಕಾರದ ಸಿಬ್ಬಂದಿಯೇ ಆಗಿರಲೂಬಹುದು. ಅಂತವರೆಲ್ಲ ಸೇರಿ ಮಾರುಕಟ್ಟೆ ಮಾಡಿರೋವಾಗ, ನಿಮ್ಮ ಬಳಿ ವ್ಯಾಪಾರ ಮಾಡೋದಕ್ಕೆ ವಸ್ತುಗಳು ಇರೋವರೆಗೂ ಪರವಾ ಇಲ್ಲ. ನೀವು ತಿನ್ನೋದಕ್ಕೆ ಸಿಗುವ ಯಾವುದಾದರೂ ವಸ್ತುವಿಗೆ ಅದನ್ನು ವ್ಯಾಪಾರ ಮಾಡುವ ಬಗ್ಗೆ ವಿಶ್ವಾಸ ಇಟ್ಟುಕೋಬಹುದು.

ಪ್ರತೀ ಬುದ್ಧಿಜೀವಿಯ ಹತ್ತಿರ ಒಂದು ವಾಚ್ ಇರುತ್ತೆ. ಕ್ಯಾಂಪಿಗೆ ಖೈದಿಗಳ ಮೊದಲ ತಂಡ ಬಂದಾಗ ಅವರು ಅಧಿಕಾರಿಗಳಿಗೆ ಈ ವಾಚುಗಳನ್ನು ಒಪ್ಪಿಸಬೇಕಾಗಿತ್ತು. ಇನ್ನು ಮುಂದೆ ಸಮಯವನ್ನು ನೋಡುವ ಯಾವ ಸಂದರ್ಭವೂ ಬರಲ್ಲ ಎಂದು ನಾಯಕರು ಹೇಳುತ್ತಿದ್ದರು. ಮುಟ್ಟುಗೋಲು ಹಾಕಿಕೊಳ್ಳೋದಕ್ಕೆ ಇದಕ್ಕಿಂತ ಸಮಂಜಸ ಕಾರಣ ಇಲ್ಲ. ಆದರೂ, ಒಂದಷ್ಟು ಕಾಲಾನಂತರ ಈ ನಿಯಮವನ್ನು ಅಷ್ಟಾಗಿ ಪಾಲಿಸ್ತಿರ್ಲಿಲ್ಲ. ಯಾಕಂದ್ರೆ ಕ್ಯಾಂಪಿಗೆ ಬರುವವರ ಸಂಖ್ಯೆ ಹೆಚ್ಚಾಗ್ತಿತ್ತು. ಗಾದೆ ಗೊತ್ತ? 'ತುಂಬಾ ಮೂಲಂಗಿ ಇರೋವಾಗ ನೀವು ಅದರ ಮೇಲಿನ ಕೊಳಕನ್ನು ತೆಗೆಯಲ್ಲ.' ಪ್ರವಾಸದ ಋತುವಿನಲ್ಲಿ ಸುಂಕದ ಅಧಿಕಾರಿಗಳು ವಿದೇಶಿಯರನ್ನು ಪರಿಶೋಧಿಸಿದ ಹಾಗೆ. ಗುಂಪು ಮುನ್ನುಗ್ಗುತ್ತಾ ಇರೋವಾಗ ಪರಿಶೀಲನೆ ಮಾಡೋದಾದ್ರೂ ಹೇಗೆ ಸಾಧ್ಯ?

ಪರಿಣಾಮವಾಗಿ ಕಾರ್ಮಿಕ ಸುಧಾರಣಾ ಶಿಬಿರವು ಆ ಪ್ರದೇಶದ ಏಕೈಕ ವಾಚ್ ಸರಬರಾಜು ಕೇಂದ್ರವಾಯ್ತು. ಬರೀ ವಾಚುಗಳಷ್ಟೇ ಅಲ್ಲ, ಅಲ್ಲಿನ ಜನ ನೋಡದೇ ಇದ್ದ ಇನ್ನೂ ಬೇಕಾದಷ್ಟು ವಸ್ತುಗಳು ಅಲ್ಲಿದ್ದವು. ಬೆಲೆಯೂ ಅಗ್ಗ. ಸಾವಿನ ದವಡೆಯಲ್ಲಿದ್ದ ಜನರಿಗೆ ಜೀವಕ್ಕಿಂತ ಹೆಚ್ಚಿನ ಬೆಲೆಯ ವಸ್ತು ಯಾವುದೂ ಇಲ್ಲ. ಆದ್ದರಿಂದಲೇ ನಾವು 'ಕೆಲಸಕ್ಕೆ ಹೋಗದ' ಸಮಯದಲ್ಲಿಯೂ ಅಷ್ಟು ಗಡಿಬಿಡಿಯಿಂದ ಓಡಾಡುತ್ತಿದ್ದೆವು. ನೆರೆಯ ಹಳ್ಳಿಯ ಜನ, ಸ್ಥಳೀಯ ಹೊಲಗಳ ಕೆಲಸಗಾರರು, ಕಾರ್ಮಿಕ ಶಿಬಿರದಲ್ಲಿದ್ದ ಅಧಿಕಾರಿಗಳು ಮತ್ತು ಅವರ ಸಂಬಂಧಿಕರು ತಮ್ಮ ಕೆಲಸಗಳನ್ನು ಮಾಡಲು ಯಾವಾಗಲೂ ಏಜೆಂಟರನ್ನು ಹುಡುಕುತ್ತಿದ್ದರು. ಖೈದಿಗಳ ಜೊತೆ ಒಳ್ಳೆಯ ವ್ಯಾಪಾರ ಮಾಡುವ ಜನ ಅವರಿಗೆ ಬೇಕು.

ನನ್ನನ್ನು 'ನೋಡಿಕೊಳ್ಳುತ್ತಿದ್ದ' ಕೆಲವು ದಿನಗಳಲ್ಲಿ ನಾನು ನನಗಿಷ್ಟ ಬಂದ ಹೊತ್ತಿನಲ್ಲಿ

ಹುಲ್ಲು ತಿನ್ನಬಹುದಾಗಿತ್ತು. ನಾನು ಆಹಾರಕ್ಕಾಗಿ ಹುಡುಕಬೇಕಾಗಿರ್ಲಿಲ್ಲ. ಹಾಗೇ ನಾನು ನನ್ನ ಮನೆಯಲ್ಲಿ ಹಾಡಿನ ಬಗ್ಗೆ ಕನಸು ಕಾಣಬಹುದಿತ್ತು. ದೇಶಭ್ರಷ್ಟನಾದ ಪುಷ್ಕಿನ್ ಥರ, ಒಡೆಸ್ಸಾದ ಕಲ್ಲುಬಂಡೆಗಳಿಗೆ ಒರಗಿಕೊಂಡಂತೆ, ನಾನೂ ಹಾಸಿಗೆಯ ಮೇಲೆ ನನ್ನ ಹೊಟ್ಟೆಯನ್ನು ಕವುಚಿ ಮಲಗುತ್ತಿದ್ದೆ. ಬಹುಶಃ ಆತ ಅನ್ಯಮನಸ್ಕನಾಗಿ ಅಲ್ಲಿ ಹಾರುತ್ತಿದ್ದ ಕಡಲಿನ ಹಕ್ಕಿಗಳನ್ನು ಗಮನಿಸಿರ್ಬೇಕು. ನಾನು ಇಲ್ಲಿ ವಿವಿಧ ವಸ್ತುಗಳನ್ನು ಹಿಡಿದುಕೊಂಡು ಹಿಂದೆ ಮುಂದೆ ತಿರುಗುತ್ತಿದ್ದ ಖೈದಿಗಳನ್ನು ಮಾತಿಲ್ಲದೆ ನೋಡುತ್ತಿದ್ದೆ. ಕೆಲವರಿಗೆ ಉತ್ಸಾಹ. ಕೆಲವರು ಖಿನ್ನರಾಗಿದಾರೆ. ಈ ವಿನಿಮಯದ ವ್ಯಾಪಾರ ಅಷ್ಟು ಸುಲಭವಲ್ಲ ನೋಡಿ. ಜಾಣ ಖೈದಿಗಳು ಸಾಮಾನ್ಯವಾಗಿ ಒಂದು ಒಪ್ಪಂದಕ್ಕೆ ಬರೋ ಮುನ್ನ ಸಾಕಷ್ಟು ಸಭೆಗಳನ್ನು ನಡೆಸ್ತಾರೆ.

ಜನ ಇಲ್ಲಿ ಗಡಿಬಿಡಿಯಿಂದ ತಮಗೆ ಬೇಕಾದ ವ್ಯಾಪಾರ ಮಾಡ್ತಿದಾರೆ. ಪಾವತಿ ಇನ್ನೂ ಹೊಟ್ಟೆ ಸೇರಿಲ್ಲ. ಅದಾಗಲೇ ಕಿವಿ ಸೀಳಿದಂತೆ ಸೀಟಿಯ ಸದ್ದು.

'ಎಲ್ಲರೂ ಈ ಕೂಡಲೇ ಕಣಕ್ಕೆ ಬಂದು ಸೇರಿ!'

ಈ ಕಣವನ್ನು ಬೇರೆ ಬೇರೆ ಕೆಲಸಗಳಿಗೆ ಬಳಸ್ತಾರೆ. ಇದು ಅಥ್ಲೆಟಿಕ್ ಮೈದಾನವೂ ಹೌದು. ಅಧಿಕಾರಿ ಸಿಬ್ಬಂದಿಗಳು ಇಲ್ಲಿ ಬ್ಯಾಡ್ಮಿಂಟನ್ ಅಥವಾ ಬ್ಯಾಸ್ಕೆಟ್ ಬಾಲ್ಆಡ್ತಾರೆ. ಅಥವಾ ಲೌಡ್ ಸ್ಪೀಕರ್ ಏರಿಸ್ತಾರೆ. ಅಂದು ಅದು ಸಿನಿಮಾ ತೋರಿಸ್ಲಿಕ್ಕೆ ಒಂದು ಬಯಲು ಮೈದಾನ. ಸಿಬ್ಬಂದಿಗಳ ಕುಟುಂಬ ಸದಸ್ಯರು ಅಲ್ಲಿ ಕಸೂತಿ ಮಾಡುತ್ತ ವದಂತಿಗಳನ್ನು ಹಂಚಿಕೊಳ್ತಾರೆ. ಹಾಗೇ ಇಲ್ಲಿ ಖೈದಿಗಳು ಸಾಮಾನ್ಯ ಸಭೆಗಳಿಗೆ ಸೇರುವುದೂ ಇದೆ. ಫಸಲು ಇದ್ದಾಗ ಮಾತ್ರ ಇದು ನಿಜವಾದ ಕಣವೇ.

ಖೈದಿಗಳು ದಡಬಡ ಬಂದು ಸೇರಿದರು. ಅವರು ತಂತಮ್ಮ ಗುಂಪುಗಳ ಪ್ರಕಾರ ಸಾಲಾಗಿ ಕೂತರು. ಮೇಲೆ ಸೂರ್ಯ ಉರೀತಿದಾನೆ. ನಾಯಕರು ಬರುವವರೆಗೆ ಯಾರಾದರೂ ಬಟ್ಟೆ ಹೊಲೀತಿರೋದನ್ನು ಕಾಣಬಹುದು. ಕೆಲವು ಖೈದಿಗಳು ಖಾಯಮ್ಮಾಗಿ ಹೊಲಿಗೆ ಹಾಕಲೇಬೇಕಾದ ಬಟ್ಟೆಯನ್ನು ಅಲ್ಲಿಗೆ ತಂದಿರ್ತಾರೆ. ಪ್ರತಿಯೊಬ್ಬರೂ ತೇಪೆ ಹಾಕುವುದರಲ್ಲಿ ನಿಷ್ಣಾತರು. ಚೆನ್ನಾಗಿ ತಿನ್ನುತ್ತಿದ್ದ ಖೈದಿಗಳು, ಅಂದ್ರೆ ಉಚ್ಚಮಟ್ಟದ ಖೈದಿಗಳು ಈ ಅವಕಾಶವನ್ನು ಮಹಿಳಾ ಖೈದಿಗಳ ಪೈಕಿ ಚೆನ್ನಾಗಿ ಇರೋ ದೇಹಗಳನ್ನು ಆರಿಸಲಿಕ್ಕೆ ಬಳಸಿಕೊಳ್ತಾರೆ.

ಆದರೆ, ಹಾ ಈಗ ನೆನಪಾಗ್ತಿದೆ... ನಾನು ಅಲ್ಲಿ ಒಂದು ಸದ್ದನ್ನು ಮಾತ್ರ ಮರೆಯೋ ಹಾಗೇ ಇಲ್ಲ. ಅದೇ, ಕೆಮ್ಮಿನ ನಿರಂತರ ಅಲೆ.

ನೀವು ಯಾವಾಗಲಾದರೂ ಒಂದು ಸಾವಿರ ಜನ ಒಂದೇ ಸಲ ಜೋರಾಗಿ ಕೆಮ್ಮೋದನ್ನ ಕೇಳಿದೀರಾ? ಅನಿಯಂತ್ರಿತ, ನಿರಂತರ ಕೆಮ್ಮು. ಅನಾರೋಗ್ಯಕರ ಶ್ವಾಸಕೋಶಗಳು ಸದಾ ಹುಟ್ಟಿಸುವ ತೀವ್ರ ಸದ್ದು. ಸಮುದ್ರದಲ್ಲಿ ಒಂದು ಅಲೆ ಇನ್ನೊಂದನ್ನು ಮೆಟ್ಟಿ ಹಾಕಿದ ಹಾಗೆ ಕೆಮ್ಮಿನ ಸದ್ದಿನ ಅಲೆ ಕೇಳಿಬರುತ್ತೆ. ಮೊದಲ ಅಲೆಗಿಂತ ಹಿಂದಿನ ಅಲೆಯ ಭೋರ್ಗರೆತ ಹೆಚ್ಚಿರೋ ಹಾಗೆ ಇಲ್ಲೂ ಕೆಮ್ಮು ಕ್ರಮೇಣ ಹೆಚ್ಚುತ್ತ ಹೋಗುತ್ತೆ. ಅದರಲ್ಲೂ ಚಳಿಗಾಲದಲ್ಲಿ

ಹಾಜರಿ ಹಾಕುವಾಗಲಂತೂ ಕೇಳಲೇಬೇಡಿ.

ಆ ಕೆಮ್ಮಿನ ಸದ್ದಿಗೆ ಅಲ್ಲಿ ಬೀಸುತ್ತಿರೋ ತಣ್ಣಗಿನ ಗಾಳಿಯೂ ನಡುಗಿಬಿಡುತ್ತೆ!

ಈ ಥರದ ಕಿವಿಯನ್ನೇ ಸೀಳುವ ಸದ್ದು ಹೀಗೆ ಮಾನವನ ಶ್ವಾಸವ್ಯವಸ್ಥೆಯಿಂದಲೇ ಬರುತ್ತಿದೆ ಅಂತ ನಿಮಗೆ ನಂಬೋದಕ್ಕೇ ಆಗಲ್ಲ. ಗಾಜು ಒಡೆದ ಸದ್ದನ್ನೂ ಇಲ್ಲಿ ಹೋಲಿಸಬಹುದು. ಕೆಲವರ ಕೆಮ್ಮು ತಳಸ್ತರದ್ದು, ಮೆಟ್ಟಿ ಹಾಕಿದ ಹಾಗೆ. ಕೆಲವರದ್ದು ಪ್ರತಿಧ್ವನಿ ಹುಟ್ಟಿಸುತ್ತೆ. ಇನ್ನೂ ಕೆಲವರದ್ದು ತುಂಬಾ ದೀರ್ಘ ಕೆಮ್ಮಾದರೆ, ಕೆಲವರದು ನಾಯಿ ಬೊಗಳಿದ ಹಾಗೆ. ಕೆಲವರ ಕೆಮ್ಮಿನ ಜೊತೆಗೆ ಕಫವೂ ಹೊರಗೆ ಹಾರುತ್ತೆ. ಆದರೆ ಹಲವರ ಕೆಮ್ಮಿನಲ್ಲಿ ಬರೀ ಒಣ ಸದ್ದು.

ಕಾಡಿನಲ್ಲಿ ಎಲ್ಲಾ ಪ್ರಾಣಿಗಳೂ ಒಟ್ಟಾಗಿ ಕಿರುಚೋದಕ್ಕೆ ಆರಂಭಿಸಿದ ಹಾಗೆ.

ಯಾವುದೇ ಯಾತನಾ ಶಿಬಿರಗಳಲ್ಲಿ ಅಥವಾ ಸೆರೆಮನೆಗಳ ಬಗ್ಗೆ ಬರೆದ ಯಾವುದೇ ಪುಸ್ತಕದಲ್ಲಿ ನಾನು ಈ ಸಮೂಹ ಕೆಮ್ಮಿನ ಬಗ್ಗೆ, ನಿಮ್ಮ ಮೂಳೆಯನ್ನೇ ನಡುಗಿಸುವ ಸದ್ದಿನ ಬಗ್ಗೆ ಉಲ್ಲೇಖವನ್ನು ನೋಡಿಲ್ಲ. ಒಂದೋ, ಈ ವಿದ್ಯಮಾನ ಹಿಂದೆಂದೂ ಘಟಿಸಿಲ್ಲ. ಅಥವಾ ಲೇಖಕರು ಇದನ್ನು ಅಲಕ್ಷಿಸಿದ್ದಾರೆ. ನಾನು ಇದನ್ನು ಚೆನ್ನಾಗಿ ನೆನಪಿಟ್ಟಿರೋದಕ್ಕೆ ಕಾರಣ ಇಷ್ಟೇ: ನಾನೂ ಈ ಸಮೂಹ ಕೆಮ್ಮಿನ ಭಾಗವಾಗಿದ್ದೆ.

ಜುಲೈ 1960ರ ಬೇಸಗೆ ಎಂದರೆ ಒಣ ಹವಾಮಾನ. ನನ್ನ ಶ್ವಾಸಕೋಶಗಳ ಹೊರಗವಚ ಕೇವಲ ಒಂದು ಕಾಗದದ ಚೂರಾಗಿಹೋಗಿದೆ ಎಂದು ನನಗನ್ನಿಸ್ತಿದೆ. ಒಳ–ಹೊರಗೆ ಗಾಳಿ ಓಡಾಡೋದನ್ನು ಅವು ಸಹಿಸಿಕೊಳ್ಳಲಾರವು ಅನ್ನಿಸುತ್ತೆ. ಪ್ರತಿಯೊಂದು ಉಸಿರಾಟವೂ ಅದನ್ನು ಇನ್ನಷ್ಟು ದುರ್ಬಲಗೊಳಿಸುತ್ತೆ. ಸಹಜವಾಗಿಯೇ ನಾನೂ ಈ ಸಮೂಹಗಾನದ ಕ್ರಿಯಾಶೀಲ ಭಾಗೀದಾರ.

ವಿಚಿತ್ರ ಅಂದ್ರೆ ನಾಯಕರು ವೇದಿಕೆಯ ಮೇಲೆ ಭವ್ಯವಾಗಿ ಕಾಣುತ್ತಲೇ ಈ ಕೆಮ್ಮು ಹಠಾತ್ತಾಗಿ ನಿಂತುಹೋಗುತ್ತೆ!ಯಾರೋ ಒಂದು ಆಜ್ಞೆ ಹೊರಡಿಸಿದ ಕೂಡಲೇ ಎಲ್ಲಾ ಸಮುದ್ರದಲೆಗಳೂ ಒಂದು ದಂಡೆಗೆ ಅಪ್ಪಳಿಸಿ ಶಾಂತವಾದಂತೆ.

ವ್ಯಕ್ತಿಯೊಬ್ಬನ ದೇಹವನ್ನು ನಿಯಂತ್ರಿಸುವಲ್ಲಿ ಅವನ ಪ್ರಜ್ಞಾವಂತ ಮನಸ್ಸು ಪ್ರಮುಖ ಪಾತ್ರ ವಹಿಸುತ್ತೆ ಅನ್ನೋದು ನಿಜ. ನಾಯಕರು ಕಾಣಿಸಿಕೊಂಡ ಕೂಡಲೇ ನರಗಳು ಬಲವಾದಂತೆ, ಕಾಯಿಲೆ ಕಣ್ಮರೆಯಾದಂತೆ ಕಾಣುತ್ತೆ.

ಕಾರ್ಮಿಕ ಸುಧಾರಣಾ ಶಿಬಿರದ ಅಧಿಕಾರಿಗಳು ಒಬ್ಬರಾದ ಮೇಲೆ ಇನ್ನೊಬ್ಬರಂತೆ ಉಪನ್ಯಾಸ ನೀಡಿದರು. ಎಲ್ಲಾ ನಾಯಕರ ಮಾತುಗಳೂ ಸಾಮಾನ್ಯವಾಗಿ ಒಂದೇ ಥರ. ಇವತ್ತು ನಮ್ಮ ಎಲ್ಲಾ ನಾಯಕರೂ ನಾವು ಈಗ 'ಡಬಲ್ ಕೌಂಟರ್ ಆಂದೋಳನ' ಆರಂಭಿಸಬೇಕು ಎಂದು ಹೇಳಿದರು.

'ಡಬಲ್ ಕೌಂಟರ್' ಎಂದರೆ ಕೆಟ್ಟ ಜನರು, ಕೆಟ್ಟ ಸಂಗತಿಗಳ ವಿರುದ್ಧ ನಡೆಯುವುದು. ನಿರ್ದಿಷ್ಟವಾಗಿ ಹೇಳದೇ ಇದ್ರೂ ಗೊತ್ತು ನಮಗೆ: ಈ ಆಂದೋಳನ ನಮ್ಮ ವಿರುದ್ಧವೇ

ನಡೆಯುತ್ತೆ ಬಿಡಿ. ಇದರ ಗುರಿ ನಾವೇ . ಹೊರಗಣ ಜಗತ್ತಿನಲ್ಲೂ ಇದೇ ಬಗೆಯ ಡಬಲ್ ಕೌಂಟರಿಂಗ್ ನಡೀತಿದೆ. ಈಗ ನನಗೆ ಈ ಕಾರ್ಮಿಕ ಸುಧಾರಣಾ ಶಿಬಿರದಲ್ಲಿ ಹೊಸ ಕಟ್ಟಡಗಳು ಯಾಕೆ ಮೇಲೇಳ್ತಾ ಇವೆ ಅಂತ ಅರ್ಥವಾಯ್ತು.

ಹೊಸ ಅತಿಥಿಗಳನ್ನು ಸ್ವಾಗತಿಸೋದಕ್ಕೆ ಅವು ಸಿದ್ಧವಾಗ್ತಿವೆ.

ಠಾಣೆ ನಾಯಕ ವಾಂಗ್ ಬುದ್ಧಿಜೀವಿ ಥರ ಕಾಣ್ತಾನೆ. 'ಕಾಮ್ರೇಡ್ ಬೋದಾ ಹೇಳ್ತಾನೆ, 'ಪ್ರೋಲೇಟರಿಯೇಟ್‌ಗಳ ಸರ್ವಾಧಿಕಾರವೇ ವರ್ಗಸಂಘರ್ಷದ ಅಂತ್ಯವಲ್ಲ ಎಂದು ನಮಗೆ ಮಾರ್ಕ್ಸಿಸಂ – ಲೆನಿನಿಸಮ್ ಹೇಳುತ್ತವೆ. ಅದು ವರ್ಗಸಂಘರ್ಷದ ಮುಂದುವರಿಕೆಯ ಇನ್ನೊಂದು ರೂಪ ಅಷ್ಟೆ. ಈ ಜಗತ್ತಿನಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಇನ್ನೂ ಸಂಪೂರ್ಣವಾಗಿ ನಿವಾರಿಸಿರದಿದ್ದರೆ , ವರ್ಗಗಳನ್ನು ಇನ್ನೂ ನಿವಾರಿಸಲಾಗದಿದ್ದರೆ ಮತ್ತು ಬಂಡವಾಳಶಾಹಿ ಚಿಂತನೆಯ ಪ್ರಭಾವ ಇನ್ನೂ ಇದ್ದರೆ ವರ್ಗಸಂಘರ್ಷ ಇದ್ದೆ ಇರುತ್ತೆ. ಬಂಡವಾಳಶಾಹಿ ವರ್ಗವು ಈ ವರ್ಗಸಂಘರ್ಷವನ್ನು ನಮ್ಮ ಸಮಾಜವಾದಿ ಕ್ರಾಂತಿಯ ವಿರುದ್ಧವಾಗಿ ಬಳಸಿಕೊಳ್ಳುತ್ತೆ. ಅದು ಸಮಾಜವಾದಿ ನಿರ್ಮಾಣವನ್ನು ಹಾಳು ಮಾಡಲಿಕ್ಕೆ ಎಲ್ಲಾ ಶಸ್ತ್ರಗಳನ್ನೂ ಬಳಸುತ್ತೆ.'

ವಾಂಗ್ ಈ ಭಾಷಣಕ್ಕೆ ಪೂರ್ವ ತಯಾರಿ ನಡೆಸಿದ್ದಾನೆ. ಅವನ ಭಾಷಣ ದೋಷಮುಕ್ತ. ಅಷ್ಟು ಚೆನ್ನಾಗಿ ಮಾತನಾಡಿದಾನೆ. ದನಿಯ ಎಲ್ಲಾ ಏರಿಳಿತಗಳೂ ಪೂರ್ವನಿಯೋಜಿತ.

ಕ್ರಿಮಿನಲ್ ಖೈದಿಗಳು ಮತ್ತು ಐತಿಹಾಸಿಕ ಪ್ರತಿಕ್ರಾಂತಿಕಾರಿಗಳ ಮೇಲೆ ಈ ಭಾಷಣ ಹೆಚ್ಚಿನ ಪರಿಣಾಮ ಬೀರಲ್ಲ. ತೇಪೆ ಹಾಕ್ತಿರೋರು ಹಾಗೆ ತೇಪೆ ಹಾಕ್ತಾನೇ ಇರ್ತಾರೆ. ಮಹಿಳಾ ಖೈದಿಗಳನ್ನು ಚುಡಾಯಿಸ್ತಾ ಇರೋರು ಹಾಗೆ ಚುಡಾಯಿಸ್ತಾನೇ ಇರ್ತಾರೆ. ಆದರೆ ಬಲಪಂಥೀಯರು ಮತ್ತು ಇತರೆ ಚಿಂತನಾ ಅಪರಾಧಿಗಳು ಮಾತ್ರ ಇದರಲ್ಲಿ ತಮಗೆ ಸಂಬಂಧಿಸಿದ್ದು ಏನೋ ಇದೆ ಎಂದು ಅನುಮಾನಿಸಲಿಕ್ಕೆ ಶುರು ಮಾಡ್ತಾರೆ.

ಆದರೆ ನಮ್ಮಲ್ಲಿ ತಾರ್ಕಿಕ ಚಿಂತನಾ ಸರಣಿಯೇ ಕಡಿದುಹೋಗಿತ್ತು ಬಿಡಿ. ಭಾಷಣದ ಪ್ರತಿಯೊಂದೂ ಪದವನ್ನು ಅಂಗೀಕರಿಸಿದ ನಾವು ಈಗ ನಮ್ಮನ್ನು ನಾವೇ ಪ್ರತಿರೋಧಿಸಬೇಕಾಗಿದೆ ಎಂದು ನಿರ್ಧರಿಸಿದೆವು. ಹಾಗೇ ಹೊರಗೆ ಇರೋ ಕೆಟ್ಟವರನ್ನೂ ಬೈಯ್ಯಬೇಕು. ಸಮಾಜವಾದಿ ಕ್ರಾಂತಿಯನ್ನು ವಿರೋಧಿಸಿದ ಮತ್ತು ಸಮಾಜವಾದಿ ನಿರ್ಮಾಣವನ್ನು ನಾಶ ಮಾಡಿದ ಎಲ್ಲರ ವಿರುದ್ಧವೂ ನಾವು ಹೋರಾಟ ಮಾಡಬೇಕು.

ಆದರೆ ವಿಭಾಗ ನಾಯಕ ಹೌ ಹೇಳಿದ :'ಪೂರ್ವದ ಗಾಳಿ ಈಗ ಪಶ್ಚಿಮದ ಗಾಳಿಯನ್ನು ಮೆಟ್ಟಿಹಾಕಿದೆ.ವಾತಾವರಣ ಅದ್ಭುತವಾಗಿದೆ!' 'ಪೂರ್ವದ ಗಾಳಿ ಪಶ್ಚಿಮದ ಗಾಳಿಯನ್ನು ನೆಲಸಮ ಮಾಡಿದೆ' ಎನ್ನುವುದು ಮಹಾ ಅಧ್ಯಕ್ಷ ಮಾವೋ ಹಿಂದಿನ ವರ್ಷ ಮಾಸ್ಕೋದಲ್ಲಿ ಹುಟ್ಟುಹಾಕಿದ ಪದಗುಚ್ಛ. ಅದು ನಮ್ಮ ಕಿವಿಗಳಲ್ಲಿ ಈಗಲೂ ತಾಜಾ.

'ಪರಿಸ್ಥಿತಿ ಅದ್ಭುತವಾಗಿದೆ! ಆದರೂ ಇಲ್ಲಿ ಇನ್ನೂ ಕೆಟ್ಟ ಜನ ಇದ್ದಾರೆ!ಹಳದಿ ನದಿಗೆ ತಳ ಇದೆ. ಆದರೆ ಜನರ ಹೃದಯಗಳು ಮಾತ್ರ ನೆಲಗಾಣದ್ದು! ಮರಗಳು ಬೆಳೆದಾಗ ಎಲ್ಲಾ ಹಕ್ಕಿಗಳನ್ನೂ ಆಕರ್ಷಿಸ್ತವೆ! ಸೋರೆಕಾಯಿ ತಿನ್ನೋರು ಕ್ಷುಲ್ಲಕ ಹುಳಗಳನ್ನೂ ತಿನ್ನಬಹುದು!'

ಹಳೆ ಜಾನಪದ ಗಾದೆಗಳಿಂದ ಆತ ಈ ಮಾತುಗಳನ್ನು ಆರಿಸಿದ್ದ. ಅವು ರೈತರ ಸಾವಿರಾರು ವರ್ಷಗಳ ಅನುಭವದ ಮೂಸೆಯಿಂದ ಬಂದ ಮಾತುಗಳು. ನಾವೆಲ್ಲ ಒಪ್ಪಿಗೆ ಸೂಚಿಸಿ ತಲೆ ಆಡಿಸಿದೆವು – ಎಷ್ಟು ನಿಜ! ಸಮಾಜವೇ ಸಂಕೀರ್ಣ: ಜಗತ್ತಿನಲ್ಲೇ ಅತ್ಯುತ್ತಮವಾದ ಸರ್ಕಾರವೇ ಇರಬೇಕಾದರೆ ಅಲ್ಲಿ ಅತೃಪ್ತ ಆತ್ಮಗಳು ಇಲ್ಲ ಎಂದಾದೀತೆ? ಇಂಥ ಕೆಟ್ಟ ವಸ್ತುಗಳು ಮತ್ತು ವ್ಯಕ್ತಿಗಳ ವಿರುದ್ಧ ಸಮರ ನಡೆಯುವುದು ನಿಜಕ್ಕೂ ತೀರಾ ಮುಖ್ಯ.

ಈ ಮಾತುಗಳನ್ನು ಕೇಳುತ್ತಿದ್ದಂತೆ ಬುದ್ಧಿಜೀವಿಗಳ ಹೊಟ್ಟೆಯಲ್ಲಿ ಸಣ್ಣಗೆ ಡಿಂಡಿಮ ಶುರು. ಅವರ ಹೃದಯಗಳ ತಳ ಎಲ್ಲಿದೆ? ಈ ತಳವು ಪ್ರೋಲೆಟರಿಯೇಟ್, ಆಸ್ತಿರಹಿತ ವರ್ಗದ ತಳಪಾಯದ ಮೇಲೆ ಭದ್ರವಾಗಿ ನಿಂತಿದೆಯೆ? ಯಾರೂ ಇಲ್ಲಿ ಶಂಕಾಸ್ಪದವಾಗಿ ಕಾಣಲಾಗುವ, ಅಪಾರದರ್ಶಕ ಹೃದಯವಿರುವ ವ್ಯಕ್ತಿಗಳಾಗಲಿಕ್ಕೆ ಬಯಸೋದಿಲ್ಲ. ಈಗ ಯಾವ ಥರದ ಹಕ್ಕಿಯನ್ನು ನಾವು ಪರಿಗಣಿಸಬೇಕು? ರೆಂಬೆ ಕೊಂಬೆಯಲ್ಲಿ ಇರೋ ಹಕ್ಕಿಯನ್ನೇ ಅಥವಾ ಒಳ್ಳೆಯ ಹಕ್ಕಿಯನ್ನೆ? ಅಥವಾ ಥತ್, ಯಾವುದನ್ನು ಈ ಥರ ಕೊಳೆತ ಹುಳ ಎಂದು ಪರಿಗಣಿಸಬೇಕು?



# 粘液

## ಉಳಿದದ್ದು ಕಫ, ಖಾಲಿ ಕ.ಬು.

### ಜುಲೈ 16

**ಹಸಿರಿನಲ್ಲಿ ಹುಡುಕಿದೆ. ತಡ ಅಂದ್ರೆ 18ರ ಹೊತ್ತಿಗೆ ಹಸ್ತಪ್ರತಿಯನ್ನು ಅಂಚೆಗೆ ಹಾಕಬೇಕು. 'ಮುನಿಸಿಪಲ್ ಪೀಪಲ್ ಕಮ್ಯೂನನ್ನು ಶ್ಲಾಘಿಸಿ' ಮತ್ತು 'ರೈಲು' – ಇವುಗಳನ್ನು 'ಸ್ಟಾರ್ಸ್'ಗೆ ಕಳಿಸಬೇಕು. 'ಹೊಳೆಯುತ್ತಿರು ಕೆಂಪು ಕಿರಣವೆ'ಯನ್ನು ನಿಂಗ್ಶಿಯಾ ನ್ಯೂಸ್‌ಗೆ ಕಳಿಸಬೇಕು. ಅಮ್ಮನಿಗೆ ಒಂದು ಪತ್ರ ಬರೆದೆ. 17ರಂದು ಅಂಚೆಗೆ ಹಾಕ್ತೇನೆ.**

ಅಷ್ಟು ಹೇಳಿದ ಮೇಲೂ ಇಲ್ಲಿ ಡಬಲ್‌ಕೌಂಟರ್ ಆಂದೋಳನ ಹೆಚ್ಚು ನಡೆಯಲಿಲ್ಲ. ಕ್ರಿಮಿನಲ್ ಖೈದಿಗಳ ವರ್ತನೆ ಹೀಗಿತ್ತು: 'ಸಾಲ ಹೆಚ್ಚಾದಷ್ಟೂ ನೀನು ಹೆದರಬೇಕಾದ್ದು ಕಡಿಮೆ. ತಿಗಣೆಗಳು ಹೆಚ್ಚಾದಷ್ಟೂ ಅವುಗಳನ್ನು ಒರೆಸಲಿಕ್ಕೆ ನೀನು ಕೊಡಬೇಕಾಗಿರೋ ಸಮಯ ತೀರಾ ಕಡಿಮೆ.'

ಆದರೆ ಬುದ್ಧಿಜೀವಿ ಖೈದಿಗಳ ಮಾನಸಿಕ ಒತ್ತಡ ಹೆಚ್ಚಾಯಿತು. ಆದರೆ ಅವರಿಗೆ ತಮ್ಮ ವಿಧಿಯನ್ನು ನಿರೀಕ್ಷಿಸೋದೊಂದೇ ದಾರಿ. ಅವರ ಭವಿಷ್ಯ ದೇವರ ಕೈಯಲ್ಲಿದೆ. ಈ

ಟಿಪ್ಪಣಿಯಿಂದ ನನಗೆ ಗೊತ್ತಾಗಿದ್ದಿಷ್ಟು: ಇವತ್ತೂ ದೊಡ್ಡ ತಂಡ ಎಂದಿನಂತೆ ಕೆಲಸಕ್ಕೆ ಹೋಗಿತ್ತು. ನಾನು ಇನ್ನೂ ನೋಡಿಕೊಳ್ಳಲ್ಪಟ್ಟವರ ಗುಂಪಿಗೆ ಸೇರಿದ್ದೆ. ಹಸಿರಿನಲ್ಲಿ ಹುಡುಕುತ್ತಿದ್ದೆ.

ನಾಯಕರ ಭಾಷಣಗಳು ಎಷ್ಟು ಉದ್ದ ಇತ್ತೆಂದರೆ ಸಂಜೆಯ ಊಟ ವಿತರಕರು ಬಂದು ವಾಪಸು ಹೋದರು. ಅಡುಗೆ ಸಿಬ್ಬಂದಿಗಳು ಮುಖ್ಯಾಧಿಕಾರಿಗೆ 'ನಿನ್ನ ಸಮಯ ಆಯ್ತು ಮಾರಾಯ, ಊಟ ಹಾಕಬೇಕು' ಆಂತ ಹೇಳಕ್ಕಾಗುತ್ತ? ಬದಲಿಗೆ ಅವರು ಇಡೀ ಉಪನ್ಯಾಸ ಮುಗಿಯೋವರೆಗೂ ಕಾದರು. ಪರಿಣಾಮ ಇಷ್ಟೆ: ನಮ್ಮ ಹೊಟ್ಟೆಗಳು ಹಸಿವಿನಿಂದಾಚೆಗೆ ನಡೆದವು. ನಮಗೆ ಹಸಿವೇ ಆಗಲಿಲ್ಲ. ಎಲ್ಲಾ ತಂಡನಾಯಕರೂ ಸಭೆ ಸೇರಿದಾಗ ನಮ್ಮ ತಂಡನಾಯಕ ಹೇಳ್ತಿದ್ದನ್ನು ನಾನು ಕೇಳಿಸಿಕೊಂಡೆ :'ನಮ್ಮ ನಾಯಕರ ಭಾಷಣಗಳನ್ನು ಕೇಳಿದ ಮೇಲೆ ಎಲ್ಲರೂ ತುಂಬಾ ಉತ್ಸುಕರಾಗಿದ್ದರು. ಅವರು ಈ ಭಾಷಣದಲ್ಲಿ ಎಷ್ಟು ತಲ್ಲೀನರಾಗಿದ್ದರು ಅಂದ್ರೆ ಆವರು ಊಟವನ್ನೇ ಮರೆತುಬಿಟ್ಟಿದ್ರು ! ಇವತ್ತಿನಿಂದ ನಾವು ಇವರಿಗೆಲ್ಲ ಈ ಥರಾನೇ ಅಮೂರ್ತ ಆಹಾರಾನೇ ಕೊಡಬೇಕು.' ತಂಡ ನಾಯಕ ಆಗೋದೆಂದರೆ ಹೀಗೇ.

ಕೊಂಚ ಹೊತ್ತಿಗೆ ಮುಂಚೆಯಷ್ಟೇ ಕಳೆಗಿಡಗಳಿಂದ ನನ್ನ ಹೊಟ್ಟೆಯನ್ನು ತುಂಬಿಸಿಕೊಂಡಿದ್ದ ನಾನು ಈಗ ಕೊಂಚ ಹೆಚ್ಚಿನ ಸ್ಫೂರ್ತಿಯನ್ನೇ ಗಳಿಸಿಕೊಂಡೆ. ಇದರ ಲಾಭ ಪಡೆದುಕೊಂಡು ನಾನು ಎರಡು ಕವನಗಳನ್ನು ಬರೆದೆ. ಮುಖ್ಯಾಧಿಕಾರಿ ದಿನಾಲೂ ಎರಡು ಬಾತು ತಿಂತಾನೆ ಎಂದು ಕೆ ಎಂ ಟಿ ಮನುಷ್ಯ ಅಲ್ಲಿ ಬಾತುಹಟ್ಟಿಯಲ್ಲಿ ಹೇಳಿದ್ದರೂ (ಅದಕ್ಕೇ ಇರಬೇಕು, ಆತ ಮಾತಾಡುತ್ತಿದ್ದಂತೆ ನನಗೆ ಕೆಳಗಿನಿಂದ ಕ್ವಾಕ್ ಕ್ವಾಕ್ ಅಂತ ಕೇಳಿಸ್ತಿತ್ತು) ನಾನು ಮಾತ್ರ 'ಹೊಳೆಯುತ್ತಿರು ಕೆಂಪು ಕಿರಣವೆ'ಯನ್ನು ಸಲ್ಲಿಸಲು ಮುಂದಾಗಿದ್ದೆ.

ಕ್ಯಾಂಪಿನಲ್ಲಿ 'ವೃತ್ತಿಪರ ಕುಶಲತೆ 'ಇದ್ದವರು ಕಾಲಕಾಲಕ್ಕೆ ವಿಶೇಷ ಆತಿಥ್ಯ ಪಡೀತಾ ಇದ್ರು. ಸಿನಿಮಾ ಮಾಡುವವರು, ಚಿತ್ರಕಾರರು, ಬಣ್ಣ ಬಳಿಯುವವರು, ಸಂಗೀತಕಾರರು, ನಟರು, ಹಾಡುಗಾರರು, ಇತ್ಯಾದಿ. ಬರೀತೇನೆ ಅನ್ನೋ ಕಾರಣಕ್ಕಾಗಿ ಚೆನ್ನಾಗಿ 'ನೋಡಿಕೊಳ್ಳಲ್ಪಡುತ್ತಿದ್ದ' ವ್ಯಕ್ತಿ ನಾನೊಬ್ಬನೇ ಆಗಿರಲಿಲ್ಲ. ಕ್ಯಾಂಪಿನ ಸಿಬ್ಬಂದಿಗಳಲ್ಲಿ ಹಲವು ಪೆನ್ನುಗಳಿದ್ದವು. ಅವರು ಯಾವಾಗಲಾದರೂ 'ದಾಳಿ ವಸ್ತುಗಳನ್ನು' ರೂಪಿಸಬಹುದಾಗಿತ್ತು. ಆದರೆ ಈ ಸಲ ನನ್ನನ್ನೇ ಯಾಕೆ ಕರೆದರು ಎಂದು ಅರ್ಥವಾಗಲಿಲ್ಲ. ಬಹುಶಃ ಸಿಬ್ಬಂದಿಗಳಿಗೆ ಬದಲಿಗೆ ಖೈದಿಯೊಬ್ಬ ತನ್ನ ಬಗ್ಗೆ ಒಳ್ಳೆಯ ಸಂಗತಿಗಳನ್ನು ಬರೆಯಲಿ ಎಂದು ಮುಖ್ಯಾಧಿಕಾರಿ ಅಶಿಸಿರಬಹುದು. ನಾನು ಯಾಕೆ ಖೈದಿಯಾದೆ ಎಂದು ತಿಳಿದುಕೊಳ್ಳಲು ಆತ ನನ್ನನ್ನು ಈ ಥರ ಪರೀಕ್ಷೆ ಮಾಡುತ್ತಿರಬಹುದು. ಕೊನೆಯ ಕಾರಣವೇ ಇರಬಹುದು ಎಂದುಕೊಂಡರೆ ನಾನು ನನ್ನ ಲೇಖನವು ಚೆನ್ನಾಗಿರೋಹಾಗೆ ನೋಡಿಕೊಳ್ಳಲೇಬೇಕಾಗಿತ್ತು.

ಒಂದು ಸಲ ನೀವು ಪೆನ್ನನ್ನು ಕಾಗದದ ಮೇಲೆ ಇಟ್ಟರೆ ನಿಲ್ಲಿಸಲಿಕ್ಕೆ ಸಾಧ್ಯವೇ ಇಲ್ಲ. ಇದು ಲೇಖಕರ ಒಂದು ಕೆಟ್ಟ ಚಾಳಿ!

'ಮುನಿಸಿಪಲ್ ಪೀಪಲ್ಸ್ ಕಮ್ಯೂನ್‌ನನ್ನು ಶ್ಲಾಘಿಸಿ' ಮತ್ತು 'ರೈಲು' ಕವನಗಳನ್ನು 'ಹೊಳೆಯುತ್ತಿರು ಕೆಂಪು ಕಿರಣವೆ' ಕವನದ ಉಪ ಉತ್ಪನ್ನಗಳು ಎಂದು ಕರೆಯಬಹುದು. ಅವು ಕವನ ಎಂಬ ಹೆಮ್ಮೆಯೇನೂ ನನಗಿಲ್ಲ. ಆದರೆ ಆನನು ಹಾಗೇ ಬರೀತಿರೋವಾಗ ಚೀನಾದ ಆ ದಿನಗಳಲ್ಲಿ ಕಾವ್ಯರಚನೆ ಮಾಡೋದು ಹೇಗೆ ಎಂಬ ತಂತ್ರವನ್ನು ಅಕಸ್ಮಾತ್ತಾಗಿ ಕಲಿತೆ. ಈ ಕವಿಗಳು ತಮ್ಮ ನಾಯಕರು ಹೊಗಳುವ ಕವನಗಳನ್ನು ಹೇಗೆ ಬರೆದರು ಅನ್ನೋದನ್ನೂ ತಿಳ್ಕೊಂಡೆ.

ಈ ತಂತ್ರವನ್ನು 'ನಿಮ್ಮ ಆತ್ಮವನ್ನು ಸ್ಥಾಪಿಸಲು ಒಂದು ದೇಹವನ್ನು ಕಡ ತರುವುದು' ಎಂಬ ಮಾತಿಗೆ ಹೋಲಿಸಬಹುದು. ಪ್ರಕೃತಿ, ಜೀವ, ಪ್ರೀತಿ, ಹೀಗೆ ಭಾವುಕತೆಯನ್ನು ಬಿಂಬಿಸುವ ಯಾವುದೇ ಮೂಲದಿಂದ ಕವಿ ಸ್ಫೂರ್ತಿಯನ್ನು ಪಡೆದಿರಬಹುದು, ಫಲಿತಾಂಶವನ್ನು ಮಾತ್ರ ಹೊಗಳಬೇಕಾದ ನಾಯಕನತ್ತ ತಿರುಗಿಸಬೇಕು. ಕಲಾತ್ಮಕ ಭಾವತೀವ್ರತೆಯನ್ನು ಖಂಡಿತ ವ್ಯಕ್ತಪಡಿಸಬಹುದು. ಆದರೆ ಆವೆಲ್ಲ ಹೊಗಳಿಕೆಗೆ ಅನುಮತಿ ಇರುವ ವ್ಯಕ್ತಿಯ ಕುರಿತಾಗಿ ಇರಬೇಕು. ಉದಾಹರಣೆಗೆ ತಾಯಿಯ ಬಗ್ಗೆ ಇರುವ ಪ್ರೀತಿಯನ್ನು ಪಕ್ಷದ ಬಗ್ಗೆ ಇರುವ ಪ್ರೀತಿ ಎಂದು ಬಣ್ಣಿಸಬೇಕು. ಸೂರ್ಯ, ಚಂದ್ರ, ಭವ್ಯ ಸೂರ್ಯೋದಯ, ಹಾಗೆ ನೋಡಿದರೆ ಪ್ರಕೃತಿಯಲ್ಲಿ ಹರೀತಿರೋ ಎಲ್ಲಾ ಬೆಳಕಿನ ಕಿರಣಗಳನ್ನು ಮಹಾಧ್ಯಕ್ಷ ಮಾವೋನಿಗೆ ಜೋಡಿಸಬೇಕು. ಬೆಳಕನ್ನು ಅವನಿಗೆ ಮಾತ್ರ ಹೋಲಿಸಬಹುದು. ಯುವತಿಯ ಬಗ್ಗೆ ಮೂಡುವ ಭಾವನೆಗಳನ್ನು ಜವುಳಿ ಕಾರ್ಮಿಕರ ಅಥವಾ ಟ್ರಾಕ್ಟರ್ ಚಾಲಕಿಯರನ್ನು ಹೊಗಳಲು ಬಳಸಬಹುದು. ಕಾವ್ಯದ ಸಂವೇದನೆಗಳು ಅತ್ಯಂತ ಬಣ್ಣನೆಯ ಆಧ್ಯಾತ್ಮಿಕ ಸ್ಫೂರ್ತಿಯವೂ ಆಗಿರಬಹುದು. ಆದರೆ ಕವಿ ಮಾತ್ರ ಅದನ್ನು ಜಲವಿದ್ಯುತ್ ಯೋಜನೆಯ ಮೇಲೆ ಅನ್ವಯಿಸಲಿಕ್ಕೆ ಮಾತ್ರ ಮರೆಯಬಾರದು. ಅಥವಾ ಆಧುನಿಕ ಕೃಷಿ ಸಾಧನ, ಉಕ್ಕಿನ ಒಲೆ, ಲೇಥ್ ಕೂಡಾ ಆಗಬಹುದು. ನನ್ನ ಕವನ 'ರೈಲು' ಇದಕ್ಕೆ ಒಂದು ಉದಾಹರಣೆ. ಇವೆಲ್ಲವೂ 'ಸಮಾಜವಾದವು ಉತ್ಪಾದಿಸಿದ ಹೊಸ ವಸ್ತುಗಳು' ಎಂಬ ವಿಷಯದ ಕೆಳಗೆ ಬರುತ್ತವೆ.

ಈ ತಂತ್ರವಿಲ್ಲದೆ ನೀವು ನಿಮ್ಮ ಕಾವ್ಯಸಂವೇದನೆಯನ್ನು ವ್ಯಕ್ತಪಡಿಸಲಿಕ್ಕೆ ಆಗಲ್ಲ. ಹಾಗೇನಾದ್ರೂ ಆದರೆ ಆ ಗುಣ ನಿಮ್ಮ ಮನಸ್ಸಿನಲ್ಲೇ ಕ್ರಮೇಣ ಆವಿಯಾಗುತ್ತೆ. ನೀವು ಪಕ್ಷವನ್ನು ಹೊಗಳಬೇಕು ಅಂತಿರಬಹುದು, ಮಹಾಧ್ಯಕ್ಷ ಮಾವೋನನ್ನು ಹೊಗಳಬೇಕು ಅಂತಿರಬಹುದು, ಜವುಳಿ ಕಾರ್ಮಿಕರನ್ನು, ಟ್ರಾಕ್ಟರ್ ಚಾಲಕಿಯರನ್ನು, ಜಲವಿದ್ಯುತ್ ಯೋಜನೆಗಳನ್ನು, ಉಕ್ಕಿನ ಒಲೆಗಳನ್ನು, ಲೇಥ್‌ಗಳನ್ನು ಹೊಗಳುವ ಆಶಯ ಇಟ್ಟುಕೊಂಡಿರಬಹುದು. ಅಂಥ ರಾಜಕೀಯ ಭಾವನೆಯನ್ನು ಇಟ್ಟುಕೊಂಡೇ ಹಲವು ಕವಿಗಳು ಈ ಹೊಸ ಸಮಾಜದಲ್ಲಿ ಬೆಳೆದಿದಾರೆ ಅನ್ನೋದೂ ನಿಜ. ಆದ್ರೆ ಹುಷಾರ್! ಮೂರ್ಖರ ಥರ ವರ್ತಿಸಬೇಡಿ: ಕೇವಲ ಈ ವಸ್ತುಗಳಿಂದ ನೀವು ಕಾವ್ಯಭಾವವನ್ನು ಹೊಂದೋದಕ್ಕೆ ಆಗಲ್ಲ. ನೀವು ನಿಮ್ಮ ಬದುಕಿನ ಜೊತೆಗೆ ನಿಕಟವಾದ ಸಂಬಂಧ ಇರುವ ವ್ಯಕ್ತಿಗಳು ಮತ್ತು ಸಂಗತಿಗಳಿಂದಲೂ ಪ್ರೇರೇಪಿತರಾಗಬೇಕು. ಇವೆಲ್ಲವನ್ನೂ ನೀವು ಜೋಡಿಸಿ. ರಾಜಕೀಯ ಚಹರೆ ಇರುವ ಒಂದು ವಸ್ತುವನ್ನು ಹೊಗಳಲು ಇವುಗಳನ್ನು ಬಳಸಿ.

ಹಾಗೆ ಮಾಡಿದಾಗಲೇ ನಿಮ್ಮ ಕವನಕ್ಕೆ 'ಸಾಹಿತ್ಯವು ರಾಜಕೀಯದ ಅಗತ್ಯವನ್ನು ಪೂರೈಸಬೇಕು' ಎಂಬ ಮಾರ್ಗದರ್ಶಕ ಸೂತ್ರದಿಂದ ಹುಟ್ಟಿದ ಒಂದು ರಾಜಕೀಯ ಗುಣಮಟ್ಟ ಬರುತ್ತೆ. ಜೊತೆಗೇ ಅದರಲ್ಲಿ ಕೊಂಚ ಪ್ರಮಾಣದಲ್ಲಿ ಕಾವ್ಯವೂ ಇರುತ್ತೆ! ಅದಿಲ್ಲವಾದರೆ ಆದು ಬರೀ ಘೋಷಣೆಗಳ ಕಂತೆಯಾಗುತ್ತೆ. ಮಹಾ ಪ್ರೋಲೆಟರಿಯನ್ ಕವಿ ಮಯಾಕೋವ್‌ಸ್ಕಿಯಿಂದ ಆರಂಭಿಸಿ ಸಮಾಜವಾದಿ ಕಾವ್ಯವನ್ನು ಹೀಗೆಯೇ ಬರೆಯಲಾಗಿದೆ ಅಂತ ನಾನು ನಂಬಿದೇನೆ.

ಈ ವಾಸ್ತವಿಕ ಅರಿವಿನೊಂದಿಗೆ ನಾನು ನಮ್ಮ ಚೀನೀ ಕವಿಗಳು ತಮ್ಮ ಭಾವನೆಗಳನ್ನು ನಾಯಕರನ್ನು ಹೊಗಳಲು ಬಳಸಿದ್ದನ್ನು ಶ್ಲಾಘಿಸ್ತೇನೆ. ಅವರು ಹೊಗಳಿಕೆಗೆಂದೇ ಕಾವ್ಯವನ್ನು ಬರೀಲಿಲ್ಲ.

ಇದೆಲ್ಲ ಹೇಗಪ್ಪಾ ಅಂದ್ರೆ ...

ಉಚ್ಚೆ ಹೊಯ್ಯೋವಾಗ ಎಂಥ ಪಾತ್ರೆ ಬಳಸ್ತಿದೀರಿ ಎಂದು ನೀವು ಚಿಂತೆ ಮಾಡೋದಿಲ್ಲವೋ, ಹಾಗೆ.

ಮುನಿಸಿಪಲ್ ಪೀಪಲ್ಸ್ ಕಮ್ಯೂನ್ ಯಾಕೆ ಮಹತ್ವದ್ದು ಎಂದು ಯಾರಿಗೆ ಗೊತ್ತು ಹೇಳಿ? ಆದ್ರೂ ನಾನು ಅದನ್ನು ಹೊಗಳಿ ಒಂದು ಕವನ ಬರೆದಿದೇನೆ. ಬಹುಶಃ ಯಾವುದೋ ಪತ್ರಿಕೆಯಲ್ಲಿ ನಾನು ಈ ಪದಗುಚ್ಛವನ್ನು ನೋಡಿರಬೇಕು. ಹಳ್ಳಿಗಳನ್ನು ಅನುಸರಿಸುತ್ತಿರೋ ನಗರಗಳ ಫಲಿತಾಂಶದ ಬಗ್ಗೆ ಇರಬೇಕು. ಹಳ್ಳಿಗಳು ಕ್ಷಿಪ್ರವಾಗಿ ಕಮ್ಯೂನೀಕರಣಗೊಳ್ಳುತ್ತಿದ್ದವು. ಹಳ್ಳಿಯವರು ಹೊಂದಿದ್ದ ಎಲ್ಲಾ ಆಸ್ತಿಯೂ ಸಾರ್ವಜನಿಕರಿಗೆ ನೀಡಿಕೆಯಾಗುತ್ತಿತ್ತು. ಎಲ್ಲರೂ ಒಂದೇ ಸರ್ವಬಳಕೆ ಭೋಜನಕೊಠಡಿಗೆ ಹೋಗುತ್ತಿದ್ದ ಹಾಗೆ ಕುಟುಂಬಗಳು ಕರಗಿಹೋಗುತ್ತಿದ್ದವು. ಎಲ್ಲವನ್ನೂ ಎಲ್ಲರಿಗೂ ಸಮಾನವಾಗಿ ಹಂಚುವ ನೀತಿ ಜಾರಿಗೆ ಬಂತು. ಈ ನೀತಿ ಜಾರಿಯನ್ನು ಕಂಡ ನಗರದ ಜನ ತಾವು ಹಿಂದೆ ಬಿದ್ದ ಬಗ್ಗೆ ಅಸಂತೋಷ ವ್ಯಕ್ತಪಡಿಸಿದರು. ಅವರೂ ಈ ' ಕಮ್ಯೂನಲ್ ಆಸ್ತಿಯ ತತ್ವ' ಅಂದರೆ ಕಮ್ಯುನಿಸಮ್‌ನ್ನು ಕೂಡಲೇ ಸೇರಿಬಿಡಲು ಹವಣಿಸಿದ್ದರು.

ಚೀನಾವು ಒಂದು ಬೃಹತ್ ಕಮ್ಯೂನ್ ಆದಾಗ ಭವಿತವ್ಯ ಭವ್ಯವಾಗುತ್ತದೆ ಎಂಬ ಹೇಳಿಕೆ ಆಗ ಜಾರಿಯಲ್ಲಿತ್ತು. ನೀವು ತಿನ್ನಲು ಎಲ್ಲಿಗೆ ಬೇಕಾದರೂ ಹೋಗಬಹುದು. ಆದರೆ ದುಡ್ಡು ಕೊಡಬೇಕಲ್ಲ ಎಂದು ನೀವು ದುಃಖಿಸಬೇಕಿಲ್ಲ. ಹಣವನ್ನೇ, ಅದು ಇನ್ನು ಇರದಂತೆ 'ನಿವಾರಿಸ'ಲಾಗುತ್ತೆ. ಇದು ನಾನು ಬಾಲ್ಯದಲ್ಲಿ ಪ್ರಭಾವಿತನಾಗಿದ್ದ ಕನ್‌ಫ್ಯೂಶಿಯಸ್‌ನ ಚಿಂತನೆಯನ್ನೇ ಬಹುತೇಕ ಹೋಲುತ್ತೆ. ಕನ್‌ಫ್ಯೂಶಿಯಸ್ ದಾತಾಂಗ್‌ನ ಆದರ್ಶವನ್ನು ಮಂಡಿಸಿದ್ದ. ಅಂದರೆ ದೊಡ್ಡಣ್ಣ. ಕಾವ್ಯಮಯವಾಗಿ ಹೇಳಬೇಕೆಂದರೆ 'ಮಹಾ ಸೌಹಾರ್ದ.'

ಹೌದು ಬಿಡಿ: ಭಾರೀ ಆದರ್ಶಗಳು ಯಾವಾಗಲೂ ತುಂಬಾ ಅಮೂರ್ತ.

ಆದರೆ ಅವು ಈಗ ನಾನು ತೀರಾ ಭಾವುಕನಾಗಿ ಆಸಕ್ತಿ ಹೊಂದಿದ್ದ ವಿಷಯಗಳಿಗೆ ಜೋಡಣೆಯಾಗಿದ್ದವು. ಅವುಗಳು ಅತ್ಯಂತ ಮೂಲ ಆಸೆಗಳಿಗೆ ಸಂಬಂಧಿಸಿದ್ದವು. ಅಂದರೆ ತಿನ್ನಲು ಎಲ್ಲಿಗಾದರೂ ಹೋಗುವುದು ಮತ್ತು ದುಡ್ಡಿಗಾಗಿ ಯೋಚನೆ ಮಾಡದಿರುವುದು.

ಇಂಥ ಆದರ್ಶಗಳ ಬಗ್ಗೆ ಹೊಗಳಿ ಹಾಡು ಬರೆಯದೇ ಇರೋದಕ್ಕೆ ನನಗೆ ಸಾಧ್ಯವೇ ಆಗ್ಲಿಲ್ಲ. ವಾಸ್ತವವಾಗಿ ನನ್ನ ಕಾವ್ಯದಲ್ಲಿ ಕೆಲವು ಒಳ್ಳೆಯ ಸಾಲುಗಳೂ ಇದ್ದವು. ಅವೆಲ್ಲ ನಾನು ಹುಲ್ಲು ಕೀಳ್ತಿದ್ದಾಗ ಅಥವಾ ಹಸಿರಿನಲ್ಲಿ ಹುಡುಕ್ತಿದ್ದಾಗ ಮೂಡಿದ ಸ್ಫೂರ್ತಿಯಿಂದ ಹುಟ್ಟಿದ ಸಾಲುಗಳು.

ಹೀಗಿದ್ದೂ ನಾನು ಕಾವ್ಯ ಬರೆದೇಬಿಟ್ಟೆನಲ್ಲ ಎಂದು ನನಗೇ ಅಚ್ಚರಿಯಾಯ್ತು.

ನನ್ನ ಕಣ್ಣೆದುರೇ, ನನ್ನ ಪಕ್ಕದಲ್ಲೇ ಜನ ಒಬ್ಬರಾದ ಮೇಲೆ ಒಬ್ಬರಂತೆ ಸಾಯ್ತಿದಾರೆ.


ಆದರೂ ನಾನು ಕಾವ್ಯದಲ್ಲಿ ದನಿ ಏರಿಸಿದೆ.

ಬರಗಾಲವು ಅಸಂಖ್ಯ ಜೀವಿಗಳನ್ನು ಮಾತ್ರ ಬಲಿ ತೆಗೆದುಕೊಂಡಿದ್ದು ಮಾತ್ರವಲ್ಲ, ಅಸಂಖ್ಯ ಹಾಡುಗಳನ್ನೂ ಹೊಸಕಿಹಾಕಿತು. ನಾನು ಹೊಟ್ಟೆ ತುಂಬಾ ತಿನ್ನುವುದಕ್ಕೆ ಸಾಧ್ಯವಾಗಿದ್ರೆ ಖಂಡಿತ ಸಾವಿರಾರು ಸ್ತುತಿಪದ್ಯಗಳನ್ನು ಬರೀತಿದ್ದೆ.

ನಾನು ನನ್ನ ಖಾಸಗಿ ಭಾವನೆಗಳನ್ನು ಬಿಂಬಿಸಿದ್ದು ಅಂದ್ರೆ ತಾಯಿಗೆ ಬರೆದ ಪತ್ರದಲ್ಲಿ ಮಾತ್ರ. ನಾನು ಒಂದು ಎಳೆ ಹಸಿರು ಮೊಳಕೆಯೂ ಆಗಿರಲಿಲ್ಲ. ತಾಯಿಯ ವಿಷಯಕ್ಕೆ ಬಂದಾಗ ನಾನು ಬೆಳೆಯುವುದೇ ಇಲ್ಲ. ಆದ್ದರಿಂದಲೇ ಇಂಥ ಎಚ್ಚರಿಕೆಯ ದಿನಚರಿಯಲ್ಲೂ ನಾನು ಅವಳನ್ನು 'ಮಾಮಾ' ಎಂದೇ ಕರೆದಿದ್ದೇನೆ!

ಉಳಿದದ್ದು ಕಫ, ಖಾಲಿ ಕಸದ ಬುಟ್ಟಿ.





# ಎಡಿಮಾ ಎಂಬ ಸಾವಿನ ಮುಖವಾಡ

## ಜುಲೈ 17–20

**ಹಸಿರಿನಲ್ಲಿ ಹುಡುಕಿದೆ. ಎರಡೂ ಹಸ್ತಪ್ರತಿಗಳನ್ನು ಮತ್ತು ಅಮ್ಮನಿಗೆ ಬರೆದ ಪತ್ರವನ್ನು ಠಾಣೆ ಸಂಖ್ಯೆ 3ರಿಂದ ಅಂಚೆಗೆ ಹಾಕಲು ಲಈ ಗೌಲಿಯಾಂಗ್‌ಗೆ ಕೊಟ್ಟೆ. ಹಸಿರಿನಲ್ಲಿ ಹುಡುಕಿದೆ. ಬೆಳಗ್ಗೆ ಹುಲ್ಲು ಕಿತ್ತೆ. ಹದಿನೆಂಟು ಜಿನ್. ಮುಖ್ಯ ಕ್ಯಾಂಪಿಗೆ ಬಂದೆ. ಮಧ್ಯಾಹ್ನ ಮಣ್ಣಿನ ಮುದ್ದೆ ಎಳೆದೆ.**

ಭವಿಷ್ಯ ಯಾವತ್ತೂ ಅಪಾರದರ್ಶಕ. ಯಾರಿಗಾದರೂ ಭವಿಷ್ಯವನ್ನು ಊಹಿಸೋದು ತುಂಬಾ ಕಷ್ಟ. ಅದರಲ್ಲೂ ಖೈದಿಗಳ ಕುರಿತಂತೂ ಈ ಮಾತು ನೂರಕ್ಕೆ ನೂರು ನಿಜವೇ. ನೀವು ಯಾವುದೋ ಕೆಲಸ ಮಾಡ್ತಾ ಇರ್ತೀರ. ಹಠಾತ್ತಾಗಿ ನಿಮ್ಮನ್ನು ಬೇರೆ ಕಡೆಗೆ ವರ್ಗ ಮಾಡ್ತಾರೆ. ಭವಿಷ್ಯದ ತರ್ಕಗಳೆಲ್ಲ ವಿಫಲ!

ನಾನು 'ನೋಡಿಕೊಳ್ಳುತ್ತಿರುವವರ' ಗುಂಪಿಗೆ ಸೇರಿ ಆರಾಮಾಗಿದ್ದೆ. ನನ್ನ ಬರೆಹಗಳು ಮತ್ತು

ಪತ್ರವನ್ನು ನನಗಾಗಿ ಅಂಚೆಗೆ ಹಾಕೋವವನಿಗೆ ಕೊಟ್ಟಿದ್ದೆ. ಅಷ್ಟು ಹೊತ್ತಿಗೆ ನಾನು ಮುಖ್ಯ ಕ್ಯಾಂಪಿಗೆ ಹೋಗಬೇಕೆಂಬ ಆದೇಶ ಬಂತು.

ನಾನು ಆ ಬಟ್ಟೆಯ ಚಿಕ್ಕ ಚಿಂದಿ ಮತ್ತು ಸಣ್ಣ ಗಾಜಿನ ಬಾಟಲಿಯನ್ನು ತೆಗೆದುಕೊಂಡೆ. ಹಾಗೇ ಒಂದು ದಾರ. ಯಾರಿಗ್ಗೊತ್ತು, ಅದು ನನಗೆ ಬೇಕಾಗುವ ಸಂದರ್ಭ ಬರಬಹುದು. ಕಾರ್ಮಿಕ ಸುಧಾರಣಾ ಶಿಬಿರದಲ್ಲಿ ಖೈದಿಗಳು ಸಿಂಬಳ ಮತ್ತು ಕಫವನ್ನು ಹೊರತುಪಡಿಸಿ ಬೇರೆ ಯಾವ ವಸ್ತುವನ್ನೂ ಬಿಟ್ಟುಹೋಗಲಿಕ್ಕೆ ತಯಾರಿರಲ್ಲ. ಇಡೀ ಕಾರ್ಮಿಕ ಸುಧಾರಣಾ ಶಿಬಿರದಲ್ಲಿ ಅತ್ಯಂತ ಶುದ್ಧವಾಗಿರೋದಂದ್ರೆ ಕಸ ಹಾಕುವ ಸ್ಥಳ. ಅಲ್ಲಿ ನಿಮಗೆ ಬೇರೆ ಕಡೆ ಬಳಸಬಹುದಾದ ಯಾವೊಂದು ಚಿಕ್ಕ ವಸ್ತುವೂ ಕಾಣಿಸುವುದಿಲ್ಲ. ನಾವು ಸಿದ್ಧರಾದೆವು ಎಂದರೆ ನಮ್ಮೆಲ್ಲ ವಸ್ತುಗಳನ್ನೂ ಹೆಗಲಿಗೇರಿಸಿಕೊಂಡಿರ್ತೇವೆ. ಬ್ಯಾರಕ್ಕಿನಲ್ಲಿ ನಾವು ಬಿಟ್ಟುಹೋಗುವುದು ಯಾರಿಗೂ ಬೇಡದ ಒಂದು ದರಿದ್ರನಾತ ಮಾತ್ರ.

ದಿನಚರಿಯ ಮೊದಲ ಟಿಪ್ಪಣಿಗಳನ್ನು ನಾನು ನಾಲ್ಕು ಸಂಖ್ಯೆಯ ಠಾಣೆಯಲ್ಲಿ ಬರೆದೆ. ಎಲ್ಲಾ ಠಾಣೆಗಲೂ ಒಂದೇ ಥರ. ಕೆಲವು ತೀರಾ ಹಳೆಯವು. ಕೆಲವು ಇನ್ನೂ ಪ್ರಾಚೀನ, ಅಷ್ಟೆ. ನಾಲ್ಕರ ಠಾಣೆ ತೀರಾ ಪ್ರಾಚೀನ ಅನ್ನೋದಷ್ಟೇ ಇಲ್ಲಿ ಹೇಳಬಹುದಾದ ಮಾಹಿತಿ. ಮುಖ್ಯ ಕ್ಯಾಂಪಿನಲ್ಲಿ ಸಾಲುಸಾಲಾಗಿ ಕಟ್ಟಡಗಳಿದ್ದವು. ಸುತ್ತಲೂ ಒಂದು ದೊಡ್ಡ ಕಾಂಪೌಂಡ್ ಇತ್ತು. ಆಮೇಲೆ ಸುತ್ತಲೂ ಮಣ್ಣಿನ ಗೋಡೆ. ಅದಕ್ಕೆ ಒಂದು ದೊಡ್ಡ ಮರದ ಗೇಟು. ಪ್ರತೀ ಕಟ್ಟಡದಲ್ಲೂ ಬ್ಯಾರಕ್‌ಗಳು. ಇವಕ್ಕೆ ಸಂಖ್ಯೆ ಕೊಟ್ಟಿರ್ತಾರೆ.

ಸಮಸ್ಯೆ ಇಷ್ಟೆ. ನಾನು ವರ್ಗವಾದ ಮೇಲೆ ನನ್ನ 'ನೋಡಿಕೊಳ್ಳುತ್ತಿರುವ ವ್ಯಕ್ತಿ' ಸ್ಥಾನಮಾನವನ್ನು ನಾನು ಕಳೆದುಕೊಂಡೆ. ಮುಖ್ಯಾಧಿಕಾರಿ ನನ್ನ ಬಗ್ಗೆ ಇಲ್ಲಿ ಯಾರಿಗಾದರೂ ಆದೇಶ ರವಾನಿಸಿರ್ತಾನಾ ಎಂದು ನಾನು ಕಲ್ಪಿಸಿಕೊಂಡೆ. ಅದೇ ಮಧ್ಯಾಹ್ನ ನಾನು ಮತ್ತೆ ಮಣ್ಣಿನ ಮುದ್ದೆಗಳನ್ನು ಎಳೆದೊಯ್ಯಬೇಕಾದ ಕೆಲಸಕ್ಕೆ ಬಿದ್ದೆ. ಮುಖ್ಯಾಧಿಕಾರಿ ಯಾರಿಗೂ ಹೇಳಿಲ್ಲ.

ಅಷ್ಟು ಹೊತ್ತಿಗೆ 'ಕಡಿಮೆ ಪಡಿತರದ ಬದಲಿಗೆ ಸೋರೆ ಹಾಗೂ ಹಸಿರು' ನೀತಿ ಜಾರಿಗೆ ಬಂದು ಒಂದು ವರ್ಷವೇ ಆಗಿತ್ತು. ಸಾಯೋ ಹಾಗಿದ್ದವರು ಸತ್ತೇ ಹೋಗಿದ್ದರು. ಸಾಯದವರು ಸಾಯೋ ಹಾದಿಯಲ್ಲಿದ್ದರು. ಜನ ಒಬ್ಬರಾದ ಮೇಲೆ ಒಬ್ಬರಂತೆ ಸಾಯ್ತಿದ್ದರು. ಕೊನೆಗೆ ಸಾಯೋದು ಉಳಿಯೋದು ಎಲ್ಲ ವಿಧಿಯಾಟ ಆಗಿಹೋಗಿತ್ತು. ನಾನೂ ಸಾಯ್ತೇನಾ? ನನಗೆ ಗೊತ್ತಾಗೋ ಸಂದರ್ಭವೇ ಇರ್ಲಿಲ್ಲ. ನನ್ನೊಳಗಿದ್ದ ನಿಶ್ಶಕ್ತಿ ಮತ್ತು ಸುಸ್ತು ಸಾಹಿತ್ಯದ ಯಾವ ಕೃತಿಯಲ್ಲೂ ನನಗೆ ಕಂಡಿರಲಿಲ್ಲ. ಖು ಯುವಾನ್‌ನಿಂದ (ಕ್ರಿ.ಪೂ. 4ನೇ ಶತಮಾನದ ಚೀನೀ ಕವಿ) ಹಿಡಿದು ಹೋಮರ್‌ವರೆಗೆ ಅಂದ್ಕೊಳ್ಳಿ. ನಾನು ಮತ್ತೆ ಅವನ್ನೆಲ್ಲ ಮತ್ತೆ ಮತ್ತೆ ಹೇಳಲ್ಲ. ಒಂದೇ ಸಂಗತಿ: ಇಪ್ಪತ್ತನಾಲ್ಕು ಗಂಟೆಗಳ ಪ್ರತಿಯೊಂದೂ ಕ್ಷಣ ನಾನು ಉಸಿರಾಡೋದನ್ನು ಮರೆಯದೇ ಇರೋದೊಂದೇ ತುಂಬಾ ಮುಖ್ಯವಾದ ವಿಷಯವಾಗಿತ್ತು.

ಶ್ವಾಸವ್ಯವಸ್ಥೆಯು ಸ್ವಯಂಕಾರ್ಯದ ನರವ್ಯವಸ್ಥೆಯ ನಿಯಂತ್ರಣದಲ್ಲಿದೆ ತಾನೆ? ಎಚ್ಚರವಿರಲಿ, ಬಿಡಲಿ, ಉಸಿರಾಡೋದು ನಿಲ್ಲುತ್ತಾ ಅಂತ ನೀವು ಕೇಳಬಹುದು. ಆದರೆ

ನನ್ನ ಬದುಕಿನ ಆ ಕ್ಷಣಗಳಲ್ಲಿ ಈ ವ್ಯವಸ್ಥೆ ಚೆನ್ನಾಗಿ ಇದೆ ಅನ್ನೋದನ್ನ ನಾನು ಖಾತ್ರಿ ಮಾಡಿಕೊಳ್ಳಲೇಬೇಕಾಗಿತ್ತು. ನಾನು ಉಸಿರಾಡೋದನ್ನೇ ಮರೆತುಬಿಟ್ಟರೆ ಉಸಿರುಕಟ್ಟೋ ಅಪಾಯ ಇದೆ. ಇದು ಯಾವುದೋ ಕಾಯಿಲೆಯ ಅಥವಾ ಕೇಂದ್ರ ಶ್ವಾಸ ವ್ಯವಸ್ಥೆಯ ಸಮಸ್ಯೆ ಅಲ್ಲ. ಅಥವಾ ಶ್ವಾಸಕೋಶಕ್ಕೆ, ತಲೆಗೆ ಪೆಟ್ಟಾಗಿತ್ತು ಅಂತಲೂ ಅಲ್ಲ. ನನ್ನ ದೇಹದ ದಣಿವು ನನ್ನ ಶ್ವಾಸಕೋಶಗಳನ್ನೂ ದುರ್ಬಲಗೊಳಿಸ್ತಿತ್ತು.

ನೀವು ನಂಬ್ತೀರೋ ಇಲ್ಲವೋ ಗೊತ್ತಿಲ್ಲ. ನಿಜಕ್ಕೂ ನಾನು ಕೆಲವು ಸಲ ಉಸಿರಾಡೋದನ್ನೇ ಮರೀತಿದ್ದೆ. ಹಠಾತ್ತಾಗಿ ತಲೆ ತಿರುಗಿ, ಕಣ್ಣುಗಳ ಹಿಂದೆ ಬೆಳಕು ಮಿಂಚಿದಂತಾಗಿ.... ನಾನು ಬೀಳ್ತಾ ಇದ್ದ ಹಾಗೆ ಕತ್ತಲು ಆವರಿಸ್ತಿತ್ತು. ಅಂದಿನಿಂದ ನಾನು ಆಮ್ಲಜನಕವನ್ನು ಸ್ವೀಕರಿಸೋದನ್ನು ಮರೀಲಿಲ್ಲ.

ಕ್ರಮೇಣವಾಗಿ ನನ್ನ ಬದುಕಿನಲ್ಲಿ ಎರಡೇ ಸಂಗತಿಗಳು ಮುಖ್ಯವಾದವು: ಹುಲ್ಲಿನ ಸಾರನ್ನು ಕುಡಿಯೋದು ಮತ್ತು ಉಸಿರಾಡೋದು.

ಮಜಾ ಅಂದ್ರೆ ನಾನು ಹುಲ್ಲಿನ ಸಾರಿನ ಶಕ್ತಿಯಿಂದಲೇ ಚಲಿಸ್ತಾ ಇದ್ದೆ, ಕೆಲಸಾನೂ ಮಾಡ್ತಿದ್ದೆ ! ಹಾಗೆ ಬೇರೆಯವರಿಗೆ ಹೋಲಿಸಿದ್ರೆ ನಾನೇ ಸ್ವಲ್ಪ ಗಟ್ಟಿಮುಟ್ಟಾಗಿದ್ದೆ ಅಂತಲೂ ಹೇಳಬಹುದಿತ್ತು. ಈ ಅಂಶವೇ ನಾನು ಸಾವಿನ ಹತ್ತಿರಕ್ಕೆ ಬಂದಿಲ್ಲ ಎಂಬ ಭಾವ ಮೂಡಿಸಿತು. ಅದೇ ಮತ್ತೆ ನಾನು ಬದುಕುವ ಶಕ್ತಿಯನ್ನೂ ನೀಡಿತು. ನನಗಿಂತ ದುರ್ಬಲರಾಗಿದ್ದವರೂ ಬದುಕಿದ್ರು. ಅದೂ ನನಗೆ ಉತ್ತೇಜನ ನೀಡ್ತಿತ್ತು.

ಸತ್ತವರೆಲ್ಲ ಹಸಿವಿನಿಂದಲೇ ಸತ್ತರು ಅಂತ ಹೇಳಕ್ಕಾಗಲ್ಲ. ಪ್ರತಿ ಖೈದಿಗೂ ದಿನಾಲೂ ಮೂರು ಬೋಗುಣಿ ಹುಲ್ಲಿನ ಸಾರು ಸಿಗ್ತಿತ್ತು. ಆದರೆ ಕ್ರಮೇಣವಾಗಿ ದುರ್ಬಲರಾಗ್ತ ಖೈದಿಗಳು ಕ್ಷಯಿಸ್ತಾ ಇದ್ದರು. ಹೀಗಾಗಿ ಹಠಾತ್ ಸಾವಿನ ಬದಲಿಗೆ ನಿಧಾನ ಸಾವಿನ ಬಗೆಗೆ ಅವರೆಲ್ಲ ಚಿಂತಿಸಬಹುದಿತ್ತು. ಅವರೆಲ್ಲ ಸಸ್ಯಗಳಿಗೆ ಆವರಿಸೋ 'ಉದುರು ರೋಗ'ಕ್ಕೆ ತುತ್ತಾದವರ ಹಾಗೆ ಕಾಣುತ್ತಿದ್ದರು. ಫ್ಯುಸೇರಿಯಮ್, ವರ್ಟಿಕ್ಯುಲಮ್, ಸ್ಯೂಡೋಮೋನಾಸ್ ಮುಂತಾದ ಬ್ಯಾಕ್ಟೀರಿಯಾಗಳು ಗಿಡಗಳ ಬೇರುಗಳನ್ನು, ಕಾಂಡವನ್ನು ಪ್ರವೇಶಿಸಿ ನಾಳಗಳನ್ನು ಕಡಿಯುತ್ತಿದ್ದವು. ಈ ಗಿಡಗಳು ಕ್ರಮೇಣವಾಗಿ ಸಾಯುತ್ತವೆ. ಇಲ್ಲಿ ಹಿಂದಿನ ಆರೋಗ್ಯಕ್ಕೆ ಮರಳೋದಕ್ಕೆ ಸಾಧ್ಯವೇ ಇಲ್ಲ.

ಇದನ್ನೇ ಮನುಷ್ಯರಿಗೆ ಅನ್ವಯಿಸಿದರೆ, 'ಸಾವಿನ ಮುಖವಾಡ'ದ ಹಾಗೆ ಕಾಣುತ್ತದೆ.

ಸಾವಿನ ಮುಖವಾಡ ಹಾಕಿಕೊಂಡವರು ಅಲ್ಲಿ ಇದ್ದರು ಅಂತ ಬೇರೆ ಹೇಳಬೇಕ? ಅವರ ಮುಖದ ಚರ್ಮ ಕಳಾಹೀನ. ಕೂದಲು ಒರಟು. ಕಣ್ಣುಗಳ ದ್ರವವಲ್ಲ, ಕಣ್ಣುಗಳೇ ವಿಚಿತ್ರವಾಗಿ ಹೊಳೆಯುತ್ತವೆ. ಅವು ಒಂಥರ 'ಕಳ್ಳನೋಟ' ಬೀರುತ್ತವೆ. ಸದಾ ಅತ್ತಿತ್ತ ಚಲಿಸುವ, ಬೆದರಿದ ಕಣ್ಣುಗುಡ್ಡೆಗಳು. ವಿಷದ ಬೆಳಕು ಹಾದ ಹಾಗೆ. ಯಾರಿಗೂ ಅವನ್ನು ಕಂಡರೆ ಭಯವಿಲ್ಲ. ಯಾಕೆಂದರೆ ಅವರ ಕಣ್ಣುಗಳೂ ಹಾಗೇ ಇದ್ದವಲ್ಲ...

ಈ ಸ್ಥಿತಿ ಮನುಷ್ಯನನ್ನು ಎಷ್ಟು ದುರ್ಬಲನಾಗಿ ಮಾಡುತ್ತೆ ಅಂತ ನಿಮಗೇನಾದ್ರೂ ಅರಿವಿದೆಯ?

ನೆಲದಿಂದ ಮೇಲೆದ್ದ ಒಂದೇ ಒಂದು ಭತ್ತದ ಸಸಿಯನ್ನು ಊಹಿಸಿಕೊಳ್ಳಿ.

ಆಮೇಲೆ ಅದನ್ನು ಮೆಟ್ಟಿ ಹಾಕಲು ಕಾಲು ಎತ್ತಲಾಗದ ಸ್ಥಿತಿಯನ್ನು ಊಹಿಸಿಕೊಳ್ಳಿ.

ಕೆಲವರಂತೂ ಎಡಿಮಾದಿಂದ ಬಳಲಿದರು. ಅದು ಕಾಲಿನಿಂದ ಶುರು. ಆಮೇಲೆ ಮೀನಖಂಡಗಳು, ತೊಡೆ, ಕೊನೆಗೆ ತಲೆ. ಎಡಿಮಾಗ್ರಸ್ತ ಮನುಷ್ಯ ಒಂದು ಬಲೂನಿನಂತೆ ಕಾಣ್ತಾನೆ. ಭರ್ತಿ ಗಾಳಿ ತುಂಬಿದ ಬಲೂನು ನೋಡಿದ್ದೀರ ತಾನೆ? ಕಣ್ಣುಗಳು ಊದಿಕೊಳ್ಳುತ್ತವೆ. ಅವು ಮುಚ್ಚಿಕೊಂಡು ಸಣ್ಣ ಸೀಳು ಮಾತ್ರ ಗೋಚರವಾಗುತ್ತೆ. ಅದರೊಳಕ್ಕೆ ಬೆಳಕು ಹಾಯಲಾರದು. ಆತ ಏನನ್ನೂ ನೋಡಲಾರ. ಆದರೆ ಸರಳ, ನೇರ ಎಡಿಮಾ ಅಂದರೆ ಸಾವಿನ ಮುಖವಾಡ ಎಂದೂ ಹೇಳಬಹುದು. ಊದಿಕೊಳ್ಳುತ್ತಿರೋ ಚರ್ಮ ಸೀಳುಬಿಟ್ಟು ಹಳದಿ ಗ್ರಂಥಿ ದ್ರವ ಸೋರುತ್ತಿದ್ದಂತೆ...

ಸಾವು ಇನ್ನು ದೂರವಿಲ್ಲ ಬಿಡಿ.

ನಮ್ಮ ಗುಂಪಿನಲ್ಲಿದ್ದವರು ಸಾಯ್ತಾ ಹೋದರು. ನೀವು ಬೆಳಗ್ಗೆ ಎದ್ದಾಗ ನಿಮ್ಮ ಪಕ್ಕದಲ್ಲಿದ್ದ ವ್ಯಕ್ತಿ ಸತ್ತಿದ್ದರೆ ನೀವು ಈ ಕೆಳಗಿನಂತೆ ತಂಡನಾಯಕನಿಗೆ ವರದಿ ಮಾಡಬೇಕು: 'ತಂಡನಾಯಕರೆ, ಇಂಥ ವ್ಯಕ್ತಿ ಸತ್ತಿದ್ದಾನೆ.' ಅಷ್ಟೆ. ನೀವು 'ಓಹ್! ತಂಡನಾಯಕರೆ, ಇನ್ನೊಬ್ಬ ಸತ್ತ!' ಎಂದು ಹೇಳಕೂಡದು. 1960ರ ದಶಕದಲ್ಲಿ ಕ್ಯಾಂಪುಗಳಲ್ಲಿ ಇಲ್ಲದವರಿಗೆ ಈ ಭಾಷಾಸೂಕ್ಷ್ಮತೆ ಅರ್ಥವಾಗೋದೇ ಇಲ್ಲ ಬಿಡಿ.

ಇಂಥ ವ್ಯತ್ಯಾಸವನ್ನು ವಿವರಿಸಬಲ್ಲಂಥವರೂ ಅವರೇ, ಬುದ್ಧಿಜೀವಿಗಳು. ನೀವು 'ಇನ್ನೊಬ್ಬ' ಎಂದರೆ ಅದು ನಿಮ್ಮ ವಿರುದ್ಧ ಬಳಸಬಹುದಾದ ಭಾಷಾ ಅಸ್ತ್ರ. ಅದರ ತೀರಾ ಸರಳ ಬಳಕೆ ಅಂದ್ರೆ ತಂಡನಾಯಕನಿಗೆ ಈ ಬಗ್ಗೆ ವರದಿ ಮಾಡೋದು. ತೀವ್ರ ಬಳಕೆ ಅಂದ್ರೆ ನಿಮ್ಮ ಟೀಕೆಗೆ ಅಧಿಕಾರಿಗಳು ಸಿದ್ಧತೆ ನಡೆಸ್ತಾರೆ.

'ನೀನು "ಇನ್ನೊಬ್ಬ ಸತ್ತ!" ಅಂದ್ಯ? ಹಾಗಂದ್ರೆ ಏನಪ್ಪಾ? ಒಬ್ಬ ಸತ್ರ ಒಬ್ಬ ಸತ್ತ ಅಂತ ಅಷ್ಟೆ. ಯಾಕೆ ಇನ್ನೊಬ್ಬ ಅಂತ ಸೇರಿಸ್ತೀಯ? ಇಲ್ಲಿರೋ ಪರಿಸ್ಥಿತೀನ ನೀನು ಬಣ್ಣಿಸ್ತಾ ಇದೀಯ? ನೀನು ಸತ್ತ ಇನ್ನೊಬ್ಬನ ಬಗ್ಗೆ ಮಾತ್ರ ಯಾಕೆ ಕಾಳಜಿ ವಹಿಸ್ತೀಯ? ಸುಧಾರಣೆಯಾದ ಇನ್ನೊಬ್ಬನ ಬಗ್ಗೇನೂ ಯಾಕೆ ಕಾಳಜಿ ಹರಿಸಬಾರದು?'

'ನೀನು ಹೊರಗೆ ಗುಲಾಬಿ ವರ್ಣಲೇಪಿತ ಕನ್ನಡಕ ಹಾಕಿಕೊಂಡಿದೀಯ. ನೀನು ಸಮಾಜವಾದದ ಕಪ್ಪುಮುಖವನ್ನಷ್ಟೇ ಆರಿಸ್ಕೊಂಡಿದೀಯ. ಈಗ ಕಾರ್ಮಿಕ ಸುಧಾರಣಾ ಶಿಬಿರದಲ್ಲಿದ್ದೂ ನೀನು ಹಳೆಯ ಗುಣಗಳನ್ನು ಬದಲಿಸಿಕೊಳ್ಳಲಿಲ್ಲ. ನೀನು ಖೈದಿಗಳ ಮಧ್ಯೆ ಉದ್ವಿಗ್ನತೆ ಉಂಟು ಮಾಡೋದಕ್ಕೆ ಪ್ರಯತ್ನಿಸ್ತಿದ್ದೀಯ... ಹೇಳು! ಹಾಗಲ್ವ?'

ನೀವು ನಿಮ್ಮ ಪಕ್ಕ ಸತ್ತವನನ್ನು ಸಾರಾಸಗಟಾಗಿ ಮರೆತೇಬಿಡಬೇಕು. ಮುಂದಿನ ಸಲ 'ಇನ್ನೊಬ್ಬ' ಸತ್ತಾಗ, ಆತನೇ ಹಾಗೆ ಸತ್ತವರಲ್ಲಿ ಮೊದಲನೇಯವನು ಅಂತ ಭಾವಿಸಬೇಕು. ಕ್ಯಾಂಪಿನಲ್ಲಿ ಎಷ್ಟೇ ಜನ ಸತ್ರೂ ಅವರೆಲ್ಲ ಒಬ್ಬರೇ.

ಬುದ್ಧಿಜೀವಿ ಖೈದಿಗಳು ತಮ್ಮವರನ್ನೇ ನಡೆಸಿಕೊಳ್ತಿದ್ದ ರೀತಿ ತಂಡನಾಯಕರಿಗಿಂತ

ಕ್ರೂರವಾಗಿತ್ತು. ಖೈದಿಯೊಬ್ಬ ತನ್ನೆಲ್ಲ ಶ್ರಮ ಹಾಕಿ ಕೆಲಸ ಮಾಡ್ತಾನೋ ಇಲ್ವೋ ಅಂತ ತಂಡನಾಯಕ ನೋಡ್ತಿರ್ಲಿಲ್ಲ. ಆತ ನಿಧಾನವಾಗಿ ಅಥವಾ ವೇಗವಾಗಿ ಕೆಲಸ ಮಾಡೋದಷ್ಟೇ ಮುಖ್ಯವಾಗಿತ್ತು. ಆದರೆ ಈ ಬುದ್ಧಿಜೀವಿಗಳು ಮಾತ್ರ ಭಾಷೆಯಲ್ಲೂ ದೋಷ ಕಂಡುಹಿಡೀತಿದ್ರು. ಅತ್ಯಂತ ಕ್ರೂರ ತಂಡನಾಯಕನೂ ತಪ್ಪಿತಸ್ಥ ಖೈದಿಗೆ ಒದೀತಿದ್ದ ಅಥವಾ ಹೊಡೀತಿದ್ದ, ಅಷ್ಟೆ. ಅಥವಾ ಇನ್ನೊಬ್ಬ ಕ್ರಿಮಿನಲ್ ಖೈದಿಗೆ ಒದೀಲಿಕ್ಕೆ ಹೇಳ್ತಿದ್ದ. ಅದಕ್ಕೂ ಹೆಚ್ಚು ಅಂದ್ರೆ 'ಫೋಟೋಗ್ರಾಫ್' ಮಾಡ್ತಿದ್ದ.

ಆದರೆ ಬುದ್ಧಿಜೀವಿಗಳಿಗೆ ಒದೆತವಾಗ್ಲೀ, ಹೊಡೆತವಾಗ್ಲೀ ಅಂಥ ಹೆದರಿಕೆ ಹುಟ್ಟಿಸ್ತಿರ್ಲಿಲ್ಲ. ಅವರು ಹೆದರ್ತಿದ್ದದ್ದು ಪದಗಳಿಗೆ, ಲಿಖಿತ ದೂಷಣೆಗೆ !

ಒದೆತ ತಿಂದ ಮೇಲೆ ಬುದ್ಧಿಜೀವಿ ತನಗೇನೂ ಆಗೇ ಇಲ್ಲ ಅನ್ನೋ ಥರ ಎದ್ದು ಮೈ ಕೊಡವಿಕೊಂಡು ಹೋಗ್ತಿದ್ದ. ಅದೇ ಪದಗಳಾಗಿದ್ರೆ ತನ್ನನ್ನು ಯಾರೋ ಇರಿದೇ ಬಿಟ್ಟಿದಾರೆ ಎಂಬಂತೆ ಯಾತನೆ ಅನುಭವಿಸ್ತಿದ್ದ. ನಾಲ್ಕು ದಿನ ತಲೆ ಎತ್ತಿರ್ಲಿಲ್ಲ. ಆರು ವರ್ಷಗಳ ನಂತರ ಸಾಂಸ್ಕೃತಿಕ ಕ್ರಾಂತಿಯಲ್ಲಿ ಇವರೆಲ್ಲ ಸಾವಿಗಿಂತ ಹೆಚ್ಚಾಗಿ ಟೀಕೆಗೇ ಹೆದರ್ತಿದ್ರು ಎಂಬ ಅಂಶ ಖಚಿತವಾಯ್ತು.

ಕ್ರಿಮಿನಲ್‌ಗಳೂ ಟೀಕೆಗೆ ಹೆದರೋರೇ. ಆದರೆ ಟೀಕಿಸೋರನ್ನು ಅವರು ಸರಿಯಾಗಿ ವಿಚಾರಿಸ್ಕೋತಿದ್ರು. ಬುದ್ಧಿಜೀವಿಯೇನಾದ್ರೂ ಟೀಕೆ ಮಾಡಿದ್ರೆ, ಸರಿ! ಹೇಗೂ ಕೆಲಸ ಮಾಡೋದಕ್ಕೆ ಹೊಲಕ್ಕೆ ಬರ್ತಾನಲ್ಲ....!

'ಬಡ್ಡಿಮಗನೆ! ಕೊಳಕು ದ್ರೋಹಿ ಸೂಳೆಮಗನೆ! ನೀನು ಟೀಕೆಗೆ ಸಿಕ್ಕಾಗ ನೀನು ಸತ್ತುಹೋಗೋ ಹಾಗೆ ನೋಡ್ಕೋತೀನಿ!'

ಇವರೆಲ್ಲ ಅಸ್ಥಿಪಂಜರಗಳ ಥರಾನೇ ಇದ್ರು ಅನ್ನೋದು ನಿಜ. ಆದರೆ ಅವರು ಕೆಲಸ ಮಾಡಬೇಕೆಂದೇ ಹುಟ್ಟಿದವರು. ನೀವು ಅವರ ಜೊತೆ ಚೆನ್ನಾಗಿದ್ರೆ ನಿಮ್ಮ ಮಣ್ಣಿನ ಮುದ್ದೆಗಳನ್ನು ಎತ್ತಿ ನಿಧಾನವಾಗಿ ನಿಮ್ಮ ಹೆಗಲ ಮೇಲೆ ಇಡ್ತಾರೆ.

'ಹ್ಯಾಗಿದೆ? ಸಣ್ಣ ಕಜ್ಜಿ ತುರಿಸಿಕೊಂಡ ಹಾಗೆ ಇದೆ ಅಲ್ವ?'

ಅಕಸ್ಮಾತ್ ನೀವೇನಾದ್ರೂ ಅವನಿಗೆ ಸಿಟ್ಟಿ ತರಿಸಿದ್ರೋ, ಟೀಕೆ ಮಾಡಿದ್ರೋ.... ಕ್ಷಮಿಸಿ! ಮುದ್ದೇನ ಎತ್ತಿ ಕೆಳಗೆ ಒಗೀತಾನೆ. ಇನ್ನೂ ಹೆಚ್ಚಿನ ಶಿಕ್ಷೆ ಅಂದ್ರೆ ನಿಮ್ಮ ಬೆನ್ನುಮೂಳೆಗಳು ದೇಹದಿಂದ ಹೊರಗೆ ಚಾಚೋ ಹಾಗೆ ಮಾಡ್ತಾರೆ.

ಇನ್ನೂ ಕೆಲವು ಕ್ರಿಮಿನಲ್‌ಗಳು ನಿಮ್ಮ ಕುಟುಂಬ ಕಳಿಸಿದ ಆಹಾರ ನಿಮಗೆ ಸಿಗದೇ ಇರೋ ಹಾಗೆ ನೋಡ್ಕೋತಾರೆ. ಕೆಲವೊಮ್ಮೆ ಅವು ಕಳವಾಗುತ್ವೆ. ಅದನ್ನು ಪ್ರಶ್ನೆ ಮಾಡಿದ್ರೆ ಕ್ರಿಮಿನಲ್ ಬಾಯಿ ತೆರೀತಾನೆ. ಅವನ ಬಾಯಲ್ಲಿ ನಿಮ್ಮ ಆಹಾರದ ಚೂರುಗಳು ಮಂದಹಾಸ ಬೀರುತ್ತವೆ.

ಬುದ್ಧಿಜೀವಿಗಳು ಸಾವಿಗೆ ಹೆದರದೇ ಇದ್ದಿದ್ರಿಂದ ಅವರೇ ಹೆಚ್ಚು ಸಂಖ್ಯೆಯಲ್ಲಿ ಸತ್ತರು. ಕ್ರಿಮಿನಲ್ ಹಾಗಲ್ಲ. ಸಾಯ್ತಿದೇನೆ ಎಂದು ಅನ್ನಿಸಿದ್ರೆ ಮಲಗೇಬಿಡ್ತಾನೆ. ಕೆಲಸಕ್ಕೆ ಹೋಗಲ್ಲ.

ಹೀಗೆ ನಾಯಿ ಥರ ನಟಿಸೋರ ಬಗ್ಗೆ ಏನೂ ಮಾಡಕ್ಕಾಗಲ್ಲ. 'ಒಳ್ಳೆಯವನು ಸೋಮಾರಿಗೆ ಹೆದರ್ತಾನೆ. ಸೋಮಾರಿ ಭಿಕಾರಿಗೆ ಹೆದರ್ತಾನೆ. ಭಿಕಾರಿ ಮಾತ್ರ ಮುಖದ ಬಗ್ಗೆ ಎಚ್ಚರಿಕೆ ಇಲ್ಲದವನಿಗೆ ಹೆದರ್ತಾನೆ !'

ಬುದ್ಧಿಜೀವಿಗಳು ಮುಖದ ಬಗ್ಗೆ ಜಾಗ್ರತೆ ವಹಿಸ್ತಾರೆ. ಅವರು ಕ್ರಿಮಿನಲ್‌ಗಳಿಗಿಂತ ಕಡಿಮೆ ಸ್ತರದವರು ಎಂದು ಒಪ್ಕೋತಾರೆ. ಕ್ರಿಮಿನಲ್‌ಗಳು ಕೊನೇಪಕ್ಷ ಮನುಷ್ಯರು. ಆದ್ರೆ ಇವರೆಲ್ಲ ಮನುಷ್ಯರಾಗಿರೋ ಹಕ್ಕನ್ನೂ ಕಳಕೊಂಡಿದಾರಲ್ಲ?

ಮುಖ್ಯ ಕ್ಯಾಂಪಿಗೆ ಬಂದ ಮೇಲೆ ಏನಾಗುತ್ತೆ ಅನ್ನೋ ಕುತೂಹಲ ಎಲ್ಲರಿಗೂ ಬಂತು. ಅಲ್ಲಿ ಸಹಜವಾಗೇ ತಿನ್ನೋದಕ್ಕೆ ಒಳ್ಳೆ ಆಹಾರ ಸಿಗಬಹುದು. ಪ್ರತಿಯೊಬ್ಬರೂ ಬೆನ್ನ ಮೇಲೆ ತಮ್ಮ ತಮ್ಮ ಲಗೇಜನ್ನು ಹೊತ್ತುಕೊಂಡು ನಡೆದರು. ಹೆಚ್ಚು ಲಗೇಜು ಇದ್ದವರು ಅಂದ್ರೆ ಇನ್ನೂ ಅವರ ದೇಹ ಪೂರ್ತಿ ಶಿಥಿಲವಾಗಿಲ್ಲ ಅಂತ ಅರ್ಥ. ಸಾಮಾನ್ಯವಾಗಿ ಲಗೇಜು ಅಂದ್ರೆ ತಿಂದ ಮೇಲೆ ಉಳಿದದ್ದು. ದೇಹ ಚೆನ್ನಾಗಿದ್ದವರು ಇನ್ನೂ ಆಹಾರದ ವ್ಯಾಪಾರ ಶುರು ಮಾಡಿರಲ್ಲ.

ನನ್ನ ಹತ್ರ ಇನ್ನೂ ಒಂದು ಚರ್ಮದ ಸೂಟ್‌ಕೇಸ್ ಇತ್ತು. ನಾನು ನನ್ನ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಂಡೆ. ನನ್ನ ಮಟ್ಟಿಗೆ ಇವೆಲ್ಲ ಖಾದ್ಯವಸ್ತುಗಳು. ಅವಕ್ಕೆ ನನ್ನ ಜೀವಮಾನವನ್ನು ವಿಸ್ತರಿಸೋ ಶಕ್ತಿ ಇದೆ.

ಮುಖ್ಯ ಕ್ಯಾಂಪನ್ನು ಗುರುತಿಸೋದು ಅಂಥ ಕಷ್ಟವೇನಲ್ಲ. ಅಲ್ಲಿ ಮಣ್ಣಿನ ಕಟ್ಟಗಳು ಕಾಣ್ತಾ ಇವೆ ನೋಡಿ.



# 30 ಸೆಂಟಿಮೀಟರಿನಲ್ಲಿ ಸಿಹಿನಿದ್ದೆಯ ಸುಖ

## ಜುಲೈ 21

**ಬೀಟ್‌ರೂಟ್ ಕೆಲಸ. ಮಳೆ. ವೈಮಾನಿಕ ಕೀಟನಾಶಕ ಸಿಂಪಡನೆ ಬಗ್ಗೆ ಚಿಂತನೆ. ನನಗೆ ಶಿಕ್ಷೆ ನೀಡಲು ಇತರರ ಯೋಚನೆ. ಕ್ಷೌರ. ಕೀಟನಾಶಕ ಕವನ ರವಾನೆ.**

ಮುಖ್ಯ ಕ್ಯಾಂಪಿನಲ್ಲಿ ಭಾರೀ ಚಟುವಟಿಕೆ. ಯಾರಿಗೆ ಯಾವ ಬ್ಯಾರಕ್ ಎಂದು ಗುಂಪಿನ ನಾಯಕ ಅದಾಗಲೇ ತೀರ್ಮಾನಿಸಿದಾನೆ. ಸಾಮಾನ್ಯವಾಗಿ ತನಗೆ ಹತ್ತಿರ ಇರೋ ಖೈದಿಗಳಿಗೆ ಹತ್ತಿರದಲ್ಲೇ ವಸತಿ. 'ಮನೆಯಲ್ಲಿ ನಿನ್ನ ಹೆಂಗಸಿನ ಬಳಿ ಮಲಗು.ಪರ ಊರಿನಲ್ಲಿ ಗೋಡೆ ಪಕ್ಕ ಮಲಗು' ಎಂಬುದೇ ಇಲ್ಲಿನ ಜಾಣತನದ ಮಾತು. ಗೋಡೆ ಬದಿಯ ಬ್ಯಾರಕ್‌ಗಳು ಅತ್ಯುತ್ತಮ. ಜನಪ್ರಿಯರಲ್ಲದ ಖೈದಿಗಳಿಗೆ ಬಾಗಿಲು, ಕಿಟಕಿಯ ಬಳಿಯ ಬ್ಯಾರಕ್‌ಗಳೇ ಗತಿ.

ನನಗಂತೂ ಯಾವುದಾದ್ರೂ ಪರವಾ ಇಲ್ಲ. ನಾನು ಮೊದಲು ಈ ಕ್ಯಾಂಪಿಗೆ ಬಂದಾಗ ಪ್ರತಿ ಖೈದಿಗೆ ಮೂವತ್ತು ಸೆಂಟಿಮೀಟರುಗಳಷ್ಟು ಅಗಲದ ಜಾಗ ಸಿಕ್ಕಿತ್ತು. ಒಂದು ಮುಷ್ಟಿಗೆ ಹತ್ತು ಸೆ.ಮೀ.ನಂತೆ ಮೂರು ಮುಷ್ಟಿ ಆಳೆದ್ರಾಯ್ತು. ತಂಡನಾಯಕನಿಗೆ ದಿನವಿಡೀ ಮುಷ್ಟಿ ಅಳೆಯೋದೇ ಆಯ್ತು. ಮೂವತ್ತು ಸೆಂಟಿಮೀಟರ್‌ನಲ್ಲಿ ಬರೀ ನಿದ್ದೆಯಲ್ಲ, ಒಳ್ಳೇ ಸಿಹಿನಿದ್ದೆ ಮಾಡಬಹುದು. ಇರಲು ಜಾಗ ಬೇಕು ಎಂದು ಬ್ರಹ್ಮಾಂಡವನ್ನು ಶೋಧಿಸೋದು ಮನುಕುಲದ ಅತ್ಯಂತ ಐಶಾರಾಮೀ ನಿಲುವು.

1960ರ ಹೊತ್ತಿಗೆ ಈ ಮೀಸಲಾತಿ ಹೆಚ್ಚಿ ನಮಗೆ ಐವತ್ತು ಸೆಂ.ಮೀ. ಜಾಗ ಸಿಕ್ಕಿತು. ಆದರೆ ಅಷ್ಟುಹೊತ್ತಿಗೆ ನನ್ನನ್ನು ಶಿಕ್ಷಿಸಬೇಕೆಂದು ತಂಡನಾಯಕ ಹೆಹ್ ಚೆಂಗ್ ಸೇರಿದಂತೆ ಹಲವರು ಬಯಸಿದ್ದರು. ನಾನು ಮಾತ್ರ ಕವನಗಳನ್ನು ಬರೀತಾನೇ ಇದ್ದೆ ಬಿಡಿ.

ಒಂದಿನ ನಾನು ಬೀಟ್‌ರೂಟ್ ಗಿಡಗಳನ್ನು ತೆಳು ಮಾಡ್ತಾ ಇದ್ದೆ. ಅಂದ್ರೆ ಕಳೆ ಕೀಳೋದು. ದುರ್ಬಲ ಗಿಡಗಳನ್ನೂ ಕೀಳೋದು. ಇವೆಲ್ಲ ಗೊತ್ತಿರದಿದ್ದರೆ ಅವರು ಖೈದಿಗಳಾಗೋದಿರ್ಲಿ, ಮನುಷ್ಯರಾಗೋದಕ್ಕೂ ನಾಲಾಯಕ್. ನಾನು ಆ ಕೆಲಸ ಮಾಡ್ತಾ ಇದ್ದಾಗ ತಂಡನಾಯಕ ಬಂದು ಕೇಳಿದ:'ಓಹ್ ! ಇದ್ಯಾವ ಥರ ಕೆಲಸ?'

ನನಗೆ ಅರ್ಥ ಆಗ್ಲಿಲ್ಲ. ತಲೆ ಎತ್ತಿ ನೋಡಿದೆ. 'ದರಿದ್ರದವನೆ! ಷಡ್ಯಂತ್ರ ಮಾಡ್ತಿದೀಯ?'

ಅವನ ಮಾತುಗಳು ನನ್ನ ಮೂಳೆಗಳನ್ನೇ ಕೊರೆದುಬಿಟ್ಟವು. ಇಡೀ ದೇಹ ನಡುಗತೊಡಗಿತು. 'ನೋಡಿ! ಎಲ್ರೂ ಇಲ್ಲಿ ಬಂದು ಈ ಮನುಷ್ಯ ಬೀಟನ್ನು ತೆಳು ಮಾಡಿರೋದನ್ನು ನೋಡಿ!'

ಸರಿ, ಸಹಖೈದಿಗಳಿಗೆ ಸಮಯ ಕದೀಯೋದಕ್ಕೆ ಅವಕಾಶವಾಯ್ತು. 'ಹೌದಲ್ಲ, ಈತ ಒಳ್ಳೆ ಬೀಟ್‌ಗಳನ್ನೇ ಕಿತ್ತಿದಾನೆ!'

'ನಿಜಕ್ಕೂ ಇದು ಉದ್ದಿಶ್ಯಪೂರ್ವಕ ಷಡ್ಯಂತ್ರ'

'ಆತ ಬುದ್ಧಿಜೀವಿ, ದರಿದ್ರ ಮನುಷ್ಯ'

'ತಾನೇ ತಿನ್ನಬಹುದು ಅಂತ ಅದನ್ನು ಕಿತ್ತಿದಾನೆ.'

ಈಗ ನನಗೆ ಅರ್ಥವಾಯ್ತು. ನಂದೇ ತಪ್ಪು. ನಾವು ತೆಳು ಮಾಡುತ್ತ ಕಿತ್ತ ಗಿಡಗಳನ್ನು ಅಡುಗೆ ಮನೆಗೆ ಕಳಿಸ್ತಾರೆ ಅಂಥ ನಾನು ಕೇಳಿ ತಿಳಿದಿದ್ದೆ. ಹಾಗಾದರೆ ಒಳ್ಳೇ ಗಿಡಾನೇ ಕೀಳಬೇಕು ಅಂತ ಹೊರಟಿದ್ದೆ! ಅತ್ಯಂತ ರಸವತ್ತಾಗಿರೋ, ತಿನ್ನೋದಕ್ಕೆ ತುಂಬಾ ಚೆನ್ನಾಗಿರೋ ಬೀಟ್‌ರೂಟನ್ನು ಕೀಳಬೇಕು ಅಂದ್ಕೊಂಡಿದ್ದೆ.

'ಅದನ್ನೆಲ್ಲ ಕೊರಳಿಗೆ ನೇತು ಹಾಕ್ಕೋ!' ತಂಡನಾಯಕ ಕಿರುಚಿದ.

ಕಳೆ ಕೀಳೋದು ಅಂದ್ರೆ ಕೂತುಕೊಂಡು ಮಾಡೋ ಕೆಲಸ. ಸುಲಭ. ಇಂಥ ಸುಲಭದ ಕೆಲಸವೇ ಇಷ್ಟು ತೊಂದ್ರೆ ತರುತ್ತೆ ಅಂತ ನಾನು ಭಾವಿಸಿರ್ಲಿಲ್ಲ. ನಾನು ತೆವಳುತ್ತ ಹೋದೆ. ತಂಡನಾಯಕ ಎಲ್ಲ ಗಿಡಗಳನ್ನೂ ತನ್ನ ಹತ್ರ ಯಾವಾಗ್ಲೂ ಇಟ್ಕೊಂಡಿರ್ತಿದ್ದ ಹಗ್ಗದಲ್ಲಿ ಕಟ್ಟಿದ. ನನ್ನ ನಾಯಿ ಕುತ್ತಿಗೆಗೆ ಕಟ್ಟಿದ. 40–50 ಜಿನ್ ತೂಕದ ಬೀಟ್‌ಗಳನ್ನು ಹೊತ್ತಾಗ ನನ್ನ ಬೆನ್ನು ಬಾಗಿದ್ದು ನಿಜ. ಆದರೆ ನನಗೆ ಬೇಜಾರಾಗ್ಲಿಲ್ಲ. (ಕವನ ಬರೀತಿದ್ದೆ ತಾನೆ?)

ತಂಡನಾಯಕ ಉಳಿದ ಹಗ್ಗವನ್ನು ಬೀಸುತ್ತ 'ನಡಿ !ದರಿದ್ರದವನೆ, ನನ್ನ ಫಾಲೋ ಮಾಡು!'

ವಸ್ತುತಃ ಅವನ ಹಿಂದೆ ತೆವಳುತ್ತ ಹೋದೆ. ಆತ ನನ್ನನ್ನು ನಾಯಿ ಥರ ಇಡೀ ಗದ್ದೆಯಲ್ಲಿ ಸುತ್ತಿಸಿದ.

'ಆಹ್! ನೋಡಿ, ಎಲ್ರೂ ನೋಡಿ. ಈತ ಷಡ್ಯಂತ್ರ ಮಾಡ್ತಾ ಇದ್ದ ಗೊತ್ತು ತಾನೆ? ಕೆಟ್ಟ ಗಿಡಗಳನ್ನು ತೆಗೀಲಿಲ್ಲ. ತುಂಬಾ ಜಾಗರೂಕತೆಯಿಂದ ಒಳ್ಳೇದನ್ನೇ ಕಿತ್ತ! ನೀವೇನು ಹೇಳ್ತೀರಿ? ಈ ನಾಯಿ ಮೇಲೆ ಒಂದು ಸಂಘರ್ಷದ ಗೋಷ್ಠಿ ಯಾಕೆ ನಡೆಸಬಾರದು?'

ಗೊತ್ತಾಯ್ತಲ್ಲ, ಇಷ್ಟು ದಿನ ನಾನು ಹೇಳ್ತಿದ್ದ ಫೋಟೋಗ್ರಾಫ್ ಅಂದ್ರೆ ಏನು ಅಂತ... ಅದರಲ್ಲಿ ಒಂದು ಉದಾಹರಣೆ ಅಷ್ಟೆ.

ಅಲ್ಲಿ ನೂರು ಜನ ಖೈದಿಗಳಿದ್ದರು. ಎಲ್ಲರಿಗೂ ತಮಾಷೆಗೆ ಅವಕಾಶ ಆಯ್ತು. ಎಲ್ರೂ ನಗ್ತಾ ಇದ್ದದ್ದನ್ನು ನಾನು ಕೇಳಿದೆ. ಇನ್ನೆಂದೂ ಮುಗಿಯುವುದೇ ಇಲ್ಲವೇನೋ ಎಂಬಂತೆ ನನ್ನ ಕಣ್ಣಿನ ಆಚೀಚೆ ಬೀಟ್‌ರೂಟ್ ಗಿಡಗಳು ಹಾದುಹೋದವು. ನನ್ನ ಕಣ್ಣೀರು ಮತ್ತು ಮೂಗಿನಲ್ಲಿ ಸುರಿಯುತ್ತಿದ್ದ ಸಿಂಬಳ ಎರಡೂ ಒಟ್ಟಿಗೇ ನೆಲಕ್ಕೆ ಬೀಳುತ್ತಿದ್ದವು.

ಚೀನಾದಲ್ಲಿ ಸಾವಿರಾರು ವರ್ಷಗಳ ಒಂದು ಸಂಪ್ರದಾಯ ಇತ್ತು. ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ಕೊಂದುಬಿಡಬಹುದು, ಆದರೆ ಅವನಿಗೆ ಹಿಂಸೆ ನೀಡಬಾರದು. ಆದರೆ 1957ರಲ್ಲಿ ಈ ಸಂಪ್ರದಾಯ ನಿಂತಿತು. ವ್ಯಕ್ತಿಯನ್ನು ಹಂಗಿಸುವುದೇ ಅವನನ್ನು ತಿದ್ದುವ ಮಾರ್ಗವಾಯ್ತು. ಸಾವಿರಾರು ಸಂಘರ್ಷ ಗೋಷ್ಠಿಗಳಲ್ಲಿ ಬುದ್ಧಿಜೀವಿಗಳು ಬೇಕೆಂದೇ ತಮ್ಮನ್ನು ತಾವು ಟೀಕೆಗಳಿಗೆ ಒಡ್ಡಿಕೊಳ್ಳುತ್ತಿದ್ದರು. ಹಾಗಿದ್ದ ಮೇಲೆ ನಮ್ಮ ಪಾಡೇನು?

ಕೃಷಿಯ ಬಗ್ಗೆ ಒಂದಿನಿತೂ ತಿಳಿವಳಿಕೆ ಇರದ ವ್ಯಕ್ತಿಯನ್ನು ಹಂಗಿಸುವ ಬಗೆ ಇದು ಎಂದು ನಾನು ಅರ್ಥ ಮಾಡಿಕೊಂಡಿದ್ದೆ. ಇದಕ್ಕಿಂತ ಹೆಚ್ಚಿನ ತರ್ಕ ಮಾಡಲು ನನ್ನ ಮನಸ್ಸು ಜಡಗಟ್ಟಿಹೋಗಿತ್ತು. ಯಾವ ನಾಚಿಕೆಯೂ ಇಲ್ಲದೆ ನಾನು ನಾಯಿ ಥರ, ಅಥವಾ ಕತ್ತೆ ಥರ ನಾಯಕನ ಜೊತೆಗೆ ಗದ್ದೆ ಸುತ್ತಿದೆ.

ಅದಾದ ಮೇಲೆ ಸಹಖೈದಿಗಳು 'ಬೇಜಾರು ಮಾಡ್ಕೋಬೇಡ. ನಾಯಕನಿಗೆ ನಿನ್ನ ಬಗ್ಗೆ ಆಸಕ್ತಿ ಇರೋದಕ್ಕೇ ಹೀಗೆ ಮಾಡ್ದ' ಎಂದರು. ನಾನೂ ಮುಂದೆ ಬೇರೆಯವರಿಗೆ ಇಂಥ ಶಿಕ್ಷೆ ಸಿಕ್ಕಿದಾಗ ಇವೇ ಮಾತುಗಳನ್ನು ಹೇಳಲು ಕಲಿತೆ.

ಸದ್ಯ ನನ್ನ ಪಡಿತರ ರದ್ದಾಗಲಿಲ್ಲ. ಈ ಹಿಂದೆ ಸಾವಿರಾರು ಜನರ ಪಡಿತರ ಕಡಿತ ಆಗಿದ್ದನ್ನು ನಾನು ಕಂಡಿದ್ದೆ.

ಮಧ್ಯಾಹ್ನ ಹುಲ್ಲಿನ ಸಾರು ಹೊತ್ತ ಗಾಡಿ ಬಂತು. ಎಲ್ಲರೂ ಸಾಲುನಿಂತರು. ಕುಗ್ಗಿಹೋಗಿದ್ದ ನಾನೂ ಸಾಲು ಸೇರಿದೆ. ತಂಡನಾಯಕ ಮರದ ನೆರಳಿನಲ್ಲಿ ಕೂತು ಅನ್ನಕ್ಕೆ ತರಕಾರಿ ಬೆರೆಸುತ್ತಿದ್ದ. ಆತ ಎಲ್ಲ ಮರೆತಂತೆ ಕಾಣುತ್ತದೆ. ನನ್ನ ಪಾಲಿನ ಹುಲ್ಲಿನ ಸಾರು ದಕ್ಕಿದಾಗ ಮನಸ್ಸಿನಲ್ಲೇ ತಂಡನಾಯಕನಿಗೆ ಕೃತಜ್ಞತೆ ಸಲ್ಲಿಸಿದೆ.

ಅಕ್ಷರವನ್ನು ಹುಡುಕಿದಾಗಿನಿಂದ ಅದು ಮನುಕುಲಕ್ಕೆ ಕೊಟ್ಟ ತಲೆನೋವು ಅಷ್ಟಿಷ್ಟಲ್ಲ. 'ಬಾಯ್' ಬಗ್ಗೆ ನಡೆದದ್ದೂ ಇದೇ. ಸಾವಿರಾರು ಖೈದಿಗಳ ದಾಖಲೆಗಳನ್ನು ಸರಿಮಾಡಬೇಕಾಗಿತ್ತು. ಯಾರಾದರೂ ಹೀಗೆ ತಿದ್ದುಪಡಿ ಮಾಡಬಹುದು. ಒಟ್ಟಾರೆ ಅದು ಕಾಗದದ ಮೇಲೆ ಮೂಡಿದರಾಯ್ತು. ಯಾರೂ ಅಳಿಸಲಾಗದ ದಾಖಲೆಯಾಗಿಬಿಡುತ್ತೆ.

ಚೀನಾದಲ್ಲಿ ಒಂದು ಮಾತಿದೆ.'ಸಾರ್ವಜನಿಕ ಗೇಟನ್ನು ಮಾತು ದಾಟಿದ ಮೇಲೆ, ಒಂಬತ್ತು ಎತ್ತುಗಳಿಗೂ ಅದನ್ನು ಮತ್ತೆ ಮಣಿಸಕ್ಕಾಗಲ್ಲ.' ಚೀನಾದಲ್ಲಿ ಲಿಖಿತ ಪದಗಳಿಗೆ ಹೆಚ್ಚು ಬೆಲೆ, ಗೌರವ. ಯಾಕಂದ್ರೆ ಇಲ್ಲಿ ಅನಕ್ಷರಸ್ತರೇ ಹೆಚ್ಚು. ಹೀಗಾಗಿ ಚೀನೀ ಭಾಷೆಯೇ ಇಲ್ಲಿನ ಜನರನ್ನು ಮಟ್ಟ ಹಾಕಿಬಿಡುತ್ತೆ. ಪರಸ್ಪರ ದಾಖಲೆಗಳನ್ನು ಸರಿಪಡಿಸೋದ್ರಿಂದ ಪರಸ್ಪರ ವೈಷಮ್ಯ ಹೆಚ್ಚಿತು.

ಬಾಯ್ ಒಬ್ಬ ಸಣ್ಣ ಕಳ್ಳ. ಕ್ಯಾಂಪಿಗೆ ಬಂದಮೇಲೆ ಸಹಜವಾಗೇ ಕದಿಯೋದು ಹೆಚ್ಚಾಯ್ತು. ಅವನ ಕಳ್ಳತನದ ದಾಖಲೆಗಳನ್ನೇ ನಾನು ಸರಿಪಡಿಸಬೇಕಾಯ್ತು: ತರಕಾರಿಗಳ ಬೇರುಗಳು, ಕ್ಯಾರೆಟ್‌ಗಳು, ಬೇರೆ ಕುಟುಂಬದವರು ಕಳಿಸಿದ್ದ ಖಾದ್ಯಗಳು ಇತ್ಯಾದಿಗಳನ್ನು ಆತ ಕದ್ದಿದ್ದ. ಅಂದಮೇಲೆ ಅವನಿಗೆ ಶಿಕ್ಷೆ ಖಾಯಂ.

ನಾನು ಒಳ್ಳೆ ಬೀಟ್‌ನ್ನು ಕದ್ದಿದ್ದಕ್ಕೂ, ಆತ ಕದ್ದಿದ್ದಕ್ಕೂ ವ್ಯತ್ಯಾಸ ಇದೆ. ಆತ ಕ್ಯಾಂಪಿಗೆ

ಬಂದಮೇಲೆ ಕಳ್ಳತನ ಮಾಡಿದವ. ನನ್ನದು ಜನತೆ ಮತ್ತು ಶತ್ರುಗಳ ನಡುವಣ ವೈರುಧ್ಯದ ಉದಾಹರಣೆ. ಆದ್ದರಿಂದ ನಾನು ಶಿಕ್ಷೆಗೆ ಒಳಗಾಗೋದು ಸಹಜ.

ಕವಿಗಳಿಗೆ ಅವರದ್ದೇ ಆದ ದೌರ್ಬಲ್ಯ ಇರುತ್ತೆ ನಿಜ. ಆದ್ರೆ ಅವರೂ ಗಟ್ಟಿ ಜೀವಗಳೇ. ಕಷ್ಟ ಬಂದಾಗ ಅಸ್ತಿತ್ವಕ್ಕಾಗಿ ಆವರು ಹೋರಾಡ್ತಾರೆ. ಇನ್ನೇನು ಮಾಡಲಿಕ್ಕಾಗಲ್ಲ ಅಂದ್ರೂ ಕಾವ್ಯವನ್ನು ವಾಚಿಸುತ್ತ ಇರ್ತಾರೆ. ಹೀಗಾಗಿ ಶಿಕ್ಷೆಯ ಮಾತು ಬಂದಿದ್ದರೂ ನಾನು ಕಾವ್ಯರಚನೆಯಲ್ಲಿ ತೊಡಗಿದ್ದೆ.

ನನ್ನ ಕವನದ ಶೀರ್ಷಿಕೆ: ವೈಮಾನಿಕ ಕೀಟನಾಶಕ ಸಿಂಪಡಣೆ.

ನಿಜ, ಇದಕ್ಕೆ 'ಹೊಳೆಯುತ್ತಿರು ಕೆಂಪು ಕಿರಣವೆ' ಎನ್ನುವಾಗಿನ ಕಾವ್ಯಾತ್ಮಕತೆ ಇಲ್ಲ. ಆದ್ರೆ, ಗಯಟೆ ಹೇಳಿದಾನಲ್ಲ, ಕಾವ್ಯವಾಗಿ ಬರೆಯಲಾಗದ್ದು ಈ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ ಅಂತ. ವಿಮಾನ ಕಾವ್ಯಾತ್ಮಕವಾಗಿಲ್ವ? ಕೀಟನಾಶಕವನ್ನು ಸಾವಿರಾರು ಎಕರೆ ಹೊಲಕ್ಕೆ ಸಿಂಪಡಿಸೋವಾಗ ಹ್ಯಾಗೆ ಕಾಣುತ್ತೆ ಗೊತ್ತ? ಈ ಕವನ ಆಂಚೆಗೆ ಹೋಗಲ್ಲ ಅಂತ ನನಗೆ ಗೊತ್ತು. ಆದ್ರೆ ಸೆರೆಮನೆಯ ಅಧಿಕಾರಿಗಳು ನನ್ನನ್ನು ಪರಿಶೋಧನೆಗೆ ಗುರಿಪಡಿಸಿದಾಗ ನನ್ನ ರಾಜಕೀಯ ಪ್ರಾಮಾಣಿಕತೆ ಅವರಿಗೆ ಅರಿವಾಗಲಿ ಅನ್ನೋದು ನನ್ನ ನಿಜವಾದ ಉದ್ದೇಶ! ಹಾಗೇ ನನ್ನ ಸಾಹಿತ್ಯಿಕ ಗುಣಮಟ್ಟ.

ಆಮೇಲೆ ನಾನು ಮಾಡಿದ್ದು ವೀ ಮಿಂಗ್ ಶೂ ನನ್ನು ಟೀಕಿಸಿದ್ದು. ಪಕ್ಕಾ ಬುದ್ಧಿಜೀವಿಗಳು ಎಂದೆನಿಸಿಕೊಂಡವರು ಹೀಗೆ 'ಉಳಿದವರ ಬಗ್ಗೆ ರಹಸ್ಯ ಬಯಲು ಮಾಡಿದ್ದರ' ಬಗ್ಗೆ ಬರೆಯಲ್ಲ. ಆದರೆ ಗೋಡೆಗೆ ಒತ್ತಿಕೊಂಡಾಗ ಮಾಡೋದಾದ್ರೂ ಏನು?

ಇದೊಂಥರ ಸಿಫಿಲಿಸ್ ಥರ. ಸಿಫಿಲಿಸ್ ವ್ಯಾಪಕವಾದಾಗ ಅದು ಭಯಂಕರ ಕಾಯಿಲೆಯಾಗಿ ಉಳಿಯಲ್ಲ. ಅದು ಒಳ್ಳೆಯ ಬ್ಯಾಡ್ಜ್ ಅನ್ನೋ ಹೊಗಳಿಕೆಗೂ ಪಾತ್ರವಾಗುತ್ತೆ. ನೀವು ಸೂಳೆಮನೆಗೆ ಹೋಗಿದ್ದೀರಿ ಅನ್ನೋದನ್ನ ಅದು ಎಷ್ಟು ಚೆನ್ನಾಗಿ ತೋರಿಸಿಕೊಡುತ್ತೆ ಅಲ್ವ?

# ಜುಲೈ 21–29

## ಜುಲೈ 21ರಿಂದ 29ರವರೆಗೆ ಬರೀ ವರದಿಗಳ ಉಪನ್ಯಾಸ ಕೇಳಿದ ಬಗ್ಗೆ ಟಿಪ್ಪಣಿಗಳಿವೆ. ತಂಡನಾಯಕರು ವರದಿ ಕೊಡೋದಾದ್ರೂ ಏನಿದೆ ಹೇಳಿ? ಆದ್ರೂ ಇವೆಲ್ಲ ರಿಪೋರ್ಟ್ ಸಮಯ

'ಏಳಿ! ಎಲ್ರೂ ಮುಖ್ಯಾಧಿಕಾರಿ ರಿಪೋರ್ಟ್ ಕೇಳೋದಕ್ಕೆ ಹೊರಡಿ!'

'ಅರೆ ಎಕ್ಸ್ ವೈ ಝುಡ್!, ತಡ ಆಯ್ತು!'

ವರದಿ ಆಂದ್ರೆ ಮತ್ತೇನೂ ಅಲ್ಲ, ನಮ್ಮನ್ನು ಬಯ್ಯೋದು. ಈಗ ಅನ್ಸುತ್ತೆ, ಇವೆಲ್ಲ ಬುದ್ಧಿಜೀವಿಗಳ ಅತಿಯಾದ ಸೂಕ್ಷ್ಮತೆಯಿಂದಲೇ ಹುಟ್ಟಿದ್ದು ಅಂತ.

ನಡುಬೇಸಗೆ ಆಂದ್ರೆ ಸೊಳ್ಳೆಗಳು ಹೇರಳವಾಗಿರುತ್ತಿದ್ದ ಕಾಲ. ಸೂರ್ಯ ಮುಳುಗಿದ ಕೂಡಲೇ ಅವು ನಮ್ಮನ್ನು ಕಚ್ಚುತ್ತಿದ್ದ ಪರಿ ಗೊತ್ತ? ಆದ್ರೆ ವರದಿ ಕೇಳುವಾಗ ಯಾರೂ ಸೊಳ್ಳೆ ಓಡಿಸಲಿಕ್ಕೆ ಕೈ ಕಾಲು ಆಡಿಸೋ ಹಾಗಿಲ್ಲ. ನಾವು ಅಟೆನ್‌ಶನ್‌ನಲ್ಲೇ ನಿಲ್ಲಬೇಕು. ಖೈದಿಗಳಿಗೆ ಅವರದ್ದೇ ಉಪಾಯವೂ ಇರುತ್ತೆ ನೋಡಿ. ಎಲ್ರೂ ಚಿಂದಿಗಳಿಂದಲೇ ಒಂಥರ ಟೋಪಿ ತಯಾರಿಸಿದ್ವಿ. ಅದನ್ನೇ ನಾವು ತಲೆ ಮೇಲೆ ಇಟ್ಕೋತಿದ್ವಿ. ಅಮೆರಿಕಾದ ಕೆ ಕೆ ಕೆ ತಂಡದ ಹಾಗೆ ಕಾಣ್ತಾ ಇದ್ವಿ.

ನಾವು ಪುಟ್ಟ ಬಂಡವಾಳಶಾಹಿ ವ್ಯಕ್ತಿಗಳಾಗಿದ್ದೇವೆ ಎಂದು ತಂಡನಾಯಕ ಬೈಯ್ಯುತ್ತಿದ್ದ. 'ಎರಡು ಸೊಳ್ಳೆಗಳಿಗೇ ಹೀಗೆ ಮಾಡ್ತೀರ. ಇನ್ನು ಶತ್ರುಗಳು ದಾಳಿ ಮಾಡಿದ್ರೆ? ಅವರು ನಿಮಗೆ ಹಿಂಸೆ ಕೊಟ್ರೆ?' ಆತ ಹಾಗೆಂದ ಕೂಡಲೇ ನಮಗೆಲ್ಲ ಭೂಗತ ಕ್ರಾಂತಿಕಾರಿ ಕಾರ್ಯಕರ್ತರೇನೋ ಅನ್ನಿಸ್ತಿತ್ತು.

ಸುಸ್ತಾದವರ ಮುಂದೆ ಸೊಳ್ಳೆಗಳು ಹಾರಾಡುತ್ತಿದ್ದವು. ಅದಂತೂ ಕಡಿಮೆ ಪಡಿತರದ ಕಾಲ. ಖೈದಿಗಳು ಬಳಲಿ ಬಳಲಿ ಎಚ್ಚರ ತಪ್ಪಿ ಬೀಳ್ತಾ ಇದ್ರು. ಒಬ್ಬರಾದ ಮೇಲೆ ಒಬ್ಬರಂತೆ ಎಲ್ಲರೂ ಬಿದ್ದು ಕಣ ಈಗ ಬಿದ್ದವರ ರಾಶಿಯಿಂದ ತುಂಬಿರ್‍ತಿತ್ತು. ಅವರಲ್ಲಿ ನಟನೆ ಮಾಡುವವರೂ ಇದ್ದರು; ಹಾಗೆ ಮಾಡುವವರು ಕ್ರಿಮಿನಲ್ ಖೈದಿಗಳೇ ಹೆಚ್ಚು. ಬುದ್ಧಿಜೀವಿಗಳು ಎಚ್ಚರವಾಗಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ ಮೇಲೆಯೇ ಬೀಳ್ತಿದ್ದರು. ಆಮೇಲೆ ಸಾಯುವವರೆಗೂ ಇದೇ ಪ್ರಯತ್ನ ಮುಂದುವರೀತಿತ್ತು.

ವರದಿಗಳು ಇನ್ನೂ ಉದ್ದ ಇದ್ರೆ ಎಲ್ಲರಿಗೂ ನೆಲದ ಮೇಲೆ ಕೂತುಕೊಳ್ಳೋದಕ್ಕೆ ಅನುಮತಿ ಇರ್‍ತಿತ್ತು. ವರದಿ ನಿಲ್ಲುವ ಮಾತೇ ಇಲ್ಲ ಬಿಡಿ. ಅಕಸ್ಮಾತ್ ಕೂರಲಿಕ್ಕೆ ಆಗದಿದ್ದರೆ ಬಿದ್ದುಕೊಂಡೇ ವರದಿ ಕೇಳಲಿ ಎಂಬುದು ನಮ್ಮ ಮುದಿ ಮುಖ್ಯಾಧಿಕಾರಿಯ ಆದೇಶ.

## ಜುಲೈ 30– ಆಗಸ್ಟ್ 5

**ಹದಿನಾರನೇ ಫಾರ್ಮಿನಲ್ಲಿ ಹೆಂಪ್ ಕಡಿದೆ. ಒಂಥರ ಖಿನ್ನತೆ. ಬರೀ ವರದಿ ಕೇಳಿದ್ದೇ. ಸುಧಾರಣೆ ಬಗ್ಗೆ ಚರ್ಚೆ. ಆರು ಜಿಯಾವ್ರೋ ಬೆಲೆಯ ತಂಬಾಕು ಖರೀದಿಸಿದೆ. ಹಾಗೇ ಉಪ್ಪು. ಸೂ ಜಿಯೋಸು ಬಗ್ಗೆ ಪೋಸ್ಟರ್ ಬರೆದೆ.**

ಇದನ್ನೆಲ್ಲ ಓದಿದ ಮೇಲೆ ನಿಮಗೆ ಈ ಖೈದಿಗಳ ದಿನಚರಿ ವರ್ಣರಂಜಿತವಾಗಿತ್ತು ಅನ್ನಿಸಬಹುದು. ಕಠಿಣ ಶ್ರಮದ ಕೆಲಸ ಮಾಡೋದರ ಜೊತೆಗೆ ನಾವು ವರದಿಗಳನ್ನು ಕೇಳಬೇಕು, ಸಣ್ಣ ಗುಂಪುಸಭೆಗಳಲ್ಲಿ ಭಾಗವಹಿಸಬೇಕು, ಪ್ರಜಾತಾಂತ್ರಿಕ ನಿಗಾ ವಹಿಸಬೇಕು, ಪರಸ್ಪರರ ಅಪರಾಧಗಳನ್ನು ಬಯಲು ಮಾಡಬೇಕು. ತೀವ್ರವಾಗಿ ಮಾಹಿತಿ ನೀಡುತ್ತಿರಬೇಕು. ಒಂದು ದಿನ ಮನರಂಜನೆಯೂ ಇತ್ತು!

ಮಾಧ್ಯಮಿಕ ಶಾಲೆಯ ಶಿಕ್ಷಕನಾಗಿ ಖೈದಿಯಾಗಿದ್ದ ಒಬ್ಬನನ್ನು ನಾನು ಏಳು ವರ್ಷಗಳ ನಂತರ ಭೇಟಿ ಮಾಡಿದೆ. ನಾವು ಆ ಬೀದಿಯ ಕೊನೆಯ ಕ್ಯಾಂಟೀನಿನಲ್ಲಿ ಕುಳಿತು

ನಾವಿಬ್ಬರೂ ಅನುಭವಿಸಿದ ಅತ್ಯಂತ ಒಳ್ಳೆಯ ಸಾಮಾನ್ಯ ಅನುಭವದ ಬಗ್ಗೆ ಮಾತಾಡಿದೆವು.

'ನನ್ನನ್ನು ಉನ್ನತ ದರ್ಜೆಯ ಖೈದಿ ಅಂತ ಯಾಕೆ ಪರಿಗಣಿಸ್ತಿದ್ರು ಅಂತ ನಿನಗೆ ಗೊತ್ತ?' ಆತ ಕೇಳಿದ.

ಗೊತ್ತಿಲ್ಲ ಎಂದೆ. ಆತ ನನ್ನನ್ನು 1960ರ ಆ ಮನರಂಜನೆಯ ಸಂಜೆಗೆ ಒಯ್ದ.

ಸೆರೆಮನೆಯ ದೃಶ್ಯಗಳು, ಪರಿಸ್ಥಿತಿ ಹೇಗೆಯೇ ಇರಲಿ, ಅಲ್ಲಿ ನಾಟಕ, ಸಿನೆಮಾಗಳು ನಡೆದೇ ಇದ್ದವು. ಈ ಅನುಕಂಪದ ಬದಲಿಗೆ ಸುಮ್ಮನೆ ಮಲಗಲಿಕ್ಕೆ ಅವಕಾಶ ಸಿಕ್ಕಿದ್ರೆ ಸಾಕಿತ್ತು ಎಂದು ಖೈದಿಗಳು ಅಂದುಕೊಂಡಿದ್ದರೂ, ಅಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸೋದು ಕಡ್ಡಾಯವಾಗಿತ್ತು. ಇನ್ನೇನು ಸಾಯಬೇಕು ಅನ್ನೋ ಹಂತದವರೆಗೂ ಖೈದಿ ಈ ಕಣದಲ್ಲಿ ಮನರಂಜನೆಯನ್ನು ಆಸ್ವಾದಿಸಲೇಬೇಕಾಗಿತ್ತು. ಕೆಲವರು ಈ ಹೊತ್ತಿನಲ್ಲಿ ಆರಾಮಾಗಿ ಇರಬಹುದು ಎಂದುಕೊಂಡಿದ್ದರು. ಅದೇ ತಪ್ಪು. ಅಂಥವರಿಗೆ ಹೊಡೆತ ಕಾದಿದ್ದೇ. 'ಏನೋ ಅನುಕೂಲ ಮಾಡಿದ್ರೆ ಅದನ್ನು ಸ್ವೀಕರಿಸಲಿಕ್ಕೂ ಇವರಿಗೆ ಗೊತ್ತಿಲ್ಲ!' ಮುಖ್ಯಾಧಿಕಾರಿ ಕಿರುಚುತ್ತಿದ್ದ. 'ತಾಯಿಗ್ಗಂಡರು! ಅವರಿಗೋಸ್ಕರ ನೀವು ನಾಟಕ ಆಡಿಸ್ತೀರ. ಅವರು ಮಾತ್ರ ನೋಡಲ್ಲ! ನೀವು ನಾಟಕ ನೋಡ್ಲೇಬೇಕು.'

ಈ ನಾಟಕಗಳಲ್ಲಿ ಯಾವುದೇ ಸಾಮಾಜಿಕ ಮಹತ್ವವನ್ನು ಕಾಣೋದಕ್ಕಂತೂ ಆಗ್ತಿರಲಿಲ್ಲ. ಅಥವಾ ಈ ನಾಟಕಗಳು ನಿಮ್ಮ ಚಿಂತನಾ ಸುಧಾರಣೆಗೆ ಎಷ್ಟು ಪ್ರಯೋಜನ ಎಂದು ಹುಡುಕೋದಕ್ಕೆ ಸಾಧ್ಯವಾಗ್ತಿರಲಿಲ್ಲ. ಇದರಿಂದಾಗಿ ನಾಟಕ ನೋಡಿದ ಮೇಲೆ ಒಂಥರ ವಿಷಾದ ನಮ್ಮೆಲ್ಲರನ್ನೂ ಆವರಿಸ್ತಿತ್ತು.

ನಮಗಾಗಿ ನಾಟಕ ತೋರ್ಸೋದಕ್ಕೆ ಅಲ್ಲಿ ಯಾವ ನಾಟಕ ತಂಡವೂ ಬರ್ತಿರಲಿಲ್ಲ. ಇಲ್ಲಿರೋ ಖೈದಿಗಳೇ ಹಾಡು ಹೇಳುವವರು, ನಟನೆ ಮಾಡುವವರು, ನರ್ತಿಸುವವರು ಎಲ್ಲ. ಈ ಪ್ರದರ್ಶನಕ್ಕೆ ಎರಡು ಮೂರು ದಿನಗಳ ಮುಂಚಿನಿಂದ ಇವರಿಗೆಲ್ಲ ಕೆಲಸಕ್ಕೆ ವಿರಾಮ. ಸಾಮಾನ್ಯವಾಗಿ 'ಸಿರಿವಂತರ ವಿರುದ್ಧ ಬಡಮನುಷ್ಯನ ಆಕ್ರೋಶ', 'ರಕ್ತ ಮತ್ತು ಕಣ್ಣೀರು' ಇವೇ ನಾಟಕದ ವಿಷಯಗಳು. ಹಳೆ ಸಮಾಜದಲ್ಲಿದ್ದ ವರ್ಗಸಂಘರ್ಷವೇ ಇಲ್ಲಿನ ಮೂಲವಸ್ತು. ಅಕಸ್ಮಾತ್ ಹೊಸ ಪ್ರತಿಭೆ ಇರೋ ಖೈದಿ ಬಂದ್ರೆ ಮಾತ್ರ ನಮಗೆಲ್ಲ ಹೊಸ ದೃಶ್ಯ ಕಾಣುತ್ತೆ. ಅದಿಲ್ಲವಾದರೆ ಅವೇ ಯಾಂತ್ರಿಕ ಚಲನೆಗಳು. ಎಲ್ಲರೂ ಮಂತ್ರವಶರಾದಂತೆ ತಾಳಕ್ಕೆ ತಕ್ಕಂತೆ ಕಣ್ಣು ಮುಚ್ಚಿಕೊಂಡಾದ್ರೂ ನಟಿಸುತ್ತಾರೆ.

ಇಲ್ಲಿ ಚೆನ್ನಾಗಿ ನಟಿಸುವವರನ್ನು ಚೆನ್ನಾಗಿ ನೋಡಿಕೊಳ್ಳುವುದೂ ಇದೆ. ಇಷ್ಟಾಗಿಯೂ ಖಾಲಿ ಹೊಟ್ಟೆಯಲ್ಲಿ ನರ್ತಿಸೋದು ಅಂದ್ರೆ ಸಾಮಾನ್ಯವಲ್ಲ. ಪೀಕಿಂಗ್‌ನ ಖ್ಯಾತ ಒಪೆರಾ ನಟ ಮೀ ಲಾನ್‌ಫಾಂಗ್‌ಗೂ ಗುಣಮಟ್ಟ ಉಳಿಸಿಕೊಳ್ಳೋದು ಕಷ್ಟವಾಗಿತ್ತು ಬಿಡಿ. ಕಾರ್ಯಕ್ರಮ ಮುಗಿದ ಮೇಲೆ ಎಲ್ಲರೂ ಅವರವರ ಕಾರ್ಯತಂಡಕ್ಕೆ ಸೇರಿಕೊಳ್ಳುತ್ತಾರೆ.

1960ರ ಹೊತ್ತಿಗೆ ಎಲ್ಲ ಖೈದಿಗಳ ಗುಣಸ್ವಭಾವಗಳೂ ಗೊತ್ತಾದ ಮೇಲೆ ಅಲ್ಲಿ ಒಂದು ನಾಟಕ ತಂಡವೇ ರಚನೆಯಾಯ್ತು. ಅದಕ್ಕೆ ರಿಬಾರ್ನ್ ಥಿಯೇಟರ್ ಗ್ರೂಪ್ ಎಂದು ಹೆಸರಿಟ್ಟರು. ಆಗಸ್ಟ್ ಹೊತ್ತಿಗೆ ಅದು ಇನ್ನೂ ತಾತ್ಕಾಲಿಕ ತಂಡವಾಗಿತ್ತು. ಕಣದಲ್ಲೇ

ವೇದಿಕೆ ಸಿದ್ಧ. ಅದರ ಎರಡೂ ಬದಿಯಲ್ಲಿ ಕಣ್ಣು ಕುಕ್ಕುವ ಗ್ಯಾಸ್ ಲೈಟರ್‌ಗಳು. ಕಪ್ಪು ಉಡುಗೆ ತೊಟ್ಟ ಖೈದಿಗಳು ಕಾಗೆಗಳ ಥರ ಆ ಕಣದ ಬಯಲಿನಲ್ಲಿ ಚಳಿಯನ್ನು ಹೊದ್ದು ಕೂರುತ್ತಿದ್ದರು. ಎಂದಿನಂತೆ ಸಾಮಾನ್ಯವಾಗಿ ಸಾಮೂಹಿಕ ಕೆಮ್ಮಿನ ಕಾರ್ಯಕ್ರಮ. ಯಾವುದೇ ಕಾರ್ಯಕ್ರಮಕ್ಕೂ ಈ ಕೆಮ್ಮೇ ಮೊದಲ ಸೀನ್. ವೇದಿಕೆಯ ಹಿಂದೆ ಇರೋ ಒಂದು ಟೆಂಟ್‌ನಲ್ಲಿ ನಟರು ಸಿದ್ಧರಾಗುತ್ತಿದ್ದರು.

'ನೀನು ಪದಗಳನ್ನು ಬರೀತೀಯಂತೆ,' ತಂಡದ ನಾಯಕ ಹಠಾತ್ತಾಗಿ ಕರೆದ. ಸರಿ, ನಾನು ಬರೆಯಲು ಕುಳಿತೆ. ಅವು ಹಳೆಯ ನಾಟಕಗಳ ಪಠ್ಯಗಳು. 'ಆಹ್' ಪದಕ್ಕೂ ಅಲ್ಲಿ ಒಂದು ಪ್ರತ್ಯೇಕ ಸಾಲೇ ಇದೆ.

ಅಷ್ಟು ಹೊತ್ತಿಗೆ ಅಲ್ಲಿಗೆ ಒಬ್ಬ ಖೈದಿ ನಟಿ ಬಂದಳು.'ನೀನು ಎಷ್ಟು ಬರ್ದಿದೀಯ ಅಂತ ತಿಳ್ಕೊಂಡು ಬರಲಿಕ್ಕೆ ತಂಡದ ನಾಯಕ ತಿಳ್ಸಿದಾನೆ' ಆಕೆ ಹೇಳಿದಳು. ಎಲ್ಲಾ ಮುಗಿಸಿದೇನೆ ಎಂದೆ. 'ಹೌದಾ!' ಆಕೆ ಪುಟ ತಿರುಗಿಸಿದಳು. 'ನೀನು ಮಾಯಾವಿ! ಇವತ್ತು ನಾನು ನಿನ್ನ ಎಲ್ಲ ಹಳೆ ಸಾಲಾನ ತೀರಿಸ್ತೀನಿ!' ಆಕೆ ಅದನ್ನು ಓದುತ್ತಿದ್ದಂತೆ ನಾನು ಅವಳನ್ನೇ ಗುಟ್ಟಾಗಿ ಗಮನಿಸಿದೆ. ಆಕೆ ನಮ್ಮ ಥರ ಇಲ್ಲ! ಸಾಮಾನ್ಯವಾಗಿ ಬಟ್ಟೆಗಳ ವಿನ್ಯಾಸದಿಂದ ಮಾತ್ರ ಮಹಿಳಾ ಖೈದಿಗಳನ್ನು ಗುರುತಿಸಬಹುದು. ಆದರೆ ಇವಳ ಎದೆಯ ಮೇಲೆ ಎರಡು ಚಿಕ್ಕ ಮಾಂಸದ ಗುಡ್ಡೆಗಳಿವೆ! ನಿಜಕ್ಕೂ ಚೆನ್ನಾಗಿವೆ ಅನ್ನಿಸಿತು. ಅವಳ ಮುಖವೂ ಅಷ್ಟೇ ಜೀವಂತ. ಕಪ್ಪು ಕೂದಲು. ಬಹುಶಃ ಅವಳು ತನಗೆ ಬೇಕಾದ್ದಕ್ಕಿಂತ ಹೆಚ್ಚು ತಿಂತಾ ಇದಾಳ?

'ಚೆನ್ನಾಗಿ ಬರ್ದಿದೀಯ. ನಿನ್ನ ಹೆಸರು ........ ತಾನೆ?' ಅರೆ, ಇವಳು ನನ್ನ ಬಗ್ಗೆ ವರದಿ ಮಾಡ್ತಾಳಾ ಹ್ಯಾಗೆ? ಒಂದು ಅತ್ಯಂತ ತೀವ್ರವಾದ ಕೆಂಪು ಒಪೆರಾದಲ್ಲಿ ಒಂದು ದೃಶ್ಯವಿದೆ: ಅಣ್ಣ ಕೆಲಸಕ್ಕೆ ಹೋಗದೆ ಮಲಗಿದ್ದನ್ನು ನೋಡಿದ ತಂಗಿ ಅವನ ಬಗ್ಗೆ ಡಿವಿಜನ್ ಕಮ್ಯಾಂಡರ್‌ಗೆ ದೂರು ಕೊಡ್ತಾಳೆ. ತಂಗಿಯೇ ಹೀಗೆ ಮಾಡಬಹುದಾದ್ರೆ ಇವಳು ಯಾಕೆ ಈ ಅಪರಿಚಿತನ ಬಗ್ಗೆ ವರದಿ ಮಾಡಬಾರ್ದು ಹೇಳಿ?

ಹಠಾತ್ತಾಗಿ ಅವಳ ಕಣ್ಣುಗಳು ಮೃದುವಾದವು. ಅವಳು ತನ್ನ ಕೈಯನ್ನು ನನ್ನ ತೋಳಿನ ಮೇಲೆ ಇಟ್ಟಳು. ಮುಖವನ್ನು ನನ್ನ ಮುಖದ ಹತ್ತಿರ ತಂದಳು. ಆ ಒಂದು ಕ್ಷಣದಲ್ಲಿ ನನಗೆ ಕಂಡದ್ದು ಅವಳ ನಾಲಗೆ ಮಾತ್ರ. ಅವಳ ತುಟಿಗಳನ್ನು ಹಾದು ಬಂದ ಆ ನಾಲಗೆ ಪಿಂಕ್ ಬಣ್ಣದ್ದು ಎಂದಷ್ಟೇ ನನಗೆ ಗೊತ್ತಾಯ್ತು.

ನಾನು ಗರ ಬಡಿದು ಎದ್ದವನ ಹಾಗೆ ಅವಳ ಕೈಯನ್ನು ಸರಿಸಿ ಆ ಕೊಠಡಿಯಿಂದ ಹೊರಗೆ ಓಡಿದೆ.

ನಾನು ಬ್ಯಾರಕ್‌ಗೆ ಮರಳಿದಾಗಲೂ ಎದೆ ಡವಡವ ಎನ್ನುತ್ತಿದೆ. ಅವಳು ಯಾಕೆ ಆ ನಾಲಗೆಯನ್ನು ತೋರಿಸಿದಳು ಅಂತ ನನಗೆ ಇನ್ನೂ ಅರ್ಥವಾಗ್ತಿಲ್ಲ.

ನನ್ನ 23 ವರ್ಷಗಳ ಆ ಬದುಕಿನಲ್ಲಿ ನಾನು ಅನುಭವಿಸಿದ ಅತ್ಯಂತ ವಿಚಿತ್ರ ಸಂಗತಿ ಇದು ಎಂದು ನನಗೆ ಈಗಲೂ ಅನ್ನಿಸಿದೆ.

ವಾಪಸಾದ ಕೂಡಲೇ ನಾನು ಅಲ್ಲಿ ತಿನ್ನೋದಕ್ಕೆ ಏನಾದ್ರೂ ಸಿಗುತ್ತಾ ಅಂತ ಹುಡುಕಿದೆ.

ಸಂಜೆ ಕಾರ್ಯಕ್ರಮದಲ್ಲಿ ಅವಳು ಹಾಡುತ್ತಿದ್ದಳು. ಅವಳೇ ಆ ನಾಟಕದ ಮುಖ್ಯ ಪಾತ್ರಧಾರಿ ಇರಬೇಕು. ಭೂಮಾಲಿಕನ ಹಿಡಿತಕ್ಕೆ ಸಿಕ್ಕಿದ ಬಾಲೆಯ ಪಾತ್ರ. ಅವಳದು ಸಹಜ ನಟನೆ.

ಮರುದಿನ ವಿರಾಮದ ದಿನ. ನಾನು ಯೋಚಿಸ್ತಾ ಕುಳಿತೆ. ಅವಳಿಗೆ ಆಗ ಕೆಟ್ಟ ಉದ್ದೇಶ ಇರಲಿಲ್ಲ ಎನ್ನಿಸಿತು.

ನನಗೆ ಈಗ ಅವಳ ಕೈನ ಆ ಅಸಾಮಾನ್ಯ ಮೃದುತ್ವದ ಅನುಭವವಾಗುತ್ತಿದೆ. ಅಗ ನಾನು ಸಿಕ್ಕಿಬೀಳುವ ಸನ್ನಿವೇಶದಲ್ಲಿದ್ದೆ. ಈಗಿಲ್ಲ. ಈಗ ನಾನು ಆರಾಮಾಗಿ ಯೋಚಿಸಬಹುದು. ಮನಸ್ಸಿನಲ್ಲೇ ಆ ದೃಶ್ಯವನ್ನು ಕಲ್ಪಿಸಿಕೊಳ್ಳಬಹುದು. ಅರೆ, ಒಂದು ಒಳ್ಳೆ ಅವಕಾಶ ಕಳಕೊಂಡೆನಾ ಅಂತ ಬೇಸರವಾಯ್ತು.

ಅವಳು ಹಾಗೆ ಬಾಗಿಲು ತಳ್ಳಿ ರೂಮಿಗೆ ಬಂದಾಗ ಅಲ್ಲಿ ಒಂದು ಚೀಲ ಕಾಣಿಸಿತ್ತು. ಅದು ಕೀಟನಾಶಕವಂತೂ ಅಲ್ಲ. ಅದು ಅಕ್ಕಿಯೋ, ಗೋಧಿಯೋ ಅಥವಾ ಇನ್ನಾವುದೋ ಧಾನ್ಯವೋ ಆಗಿರದೆ ಇನ್ನೇನಾದೀತು? ನನ್ನಂಥ ಚಪ್ಪಟೆ ದೇಹದ ವ್ಯಕ್ತಿ, ಆಹಾರವಿರೋ ರೂಮಿನಲ್ಲಿರೋದು, ಜೊತೆಗೆ ಒಂದಷ್ಟು ಸ್ವಾತಂತ್ರ್ಯವೂ ಸಿಕ್ಕಿರೋದು.... ಅರೆರೆ! ನಾನು ಅವಕಾಶವನ್ನು ಕಳ್ಕೊಂಡಿದ್ದೆ.

ಇಡೀದಿನ ನಾನು ಖಿನ್ನನಾಗಿದ್ದೆ. ಖೈದಿಗಳು ಆಹಾರದ ವ್ಯಾಪಾರ ಮಾಡೋದನ್ನ, ಅವರ ಕುಟುಂಬಗಳು ಆಹಾರ ತರೋದನ್ನ ನೋಡುತ್ತ ಕುಳಿತೆ. ನಾನು ನಿನ್ನೆಯ ಅವಕಾಶವನ್ನು ಬಳಸಿಕೊಂಡಿದ್ರೆ ಅವಳ ಜೊತೆ ಕೂತು ಚೆನ್ನಾಗಿ ತಿನ್ನಬಹುದಿತ್ತು....

ನನ್ನನ್ನು ಪಾಲಿಸಿ ಪೋಷಿಸಿದ ಶೇಕ್ಸ್‌ಪಿಯರ್‌ಗಳು,ಟಾಲ್‌ಸ್ಟಾಯ್‌ಗಳು, ಲೀ ಬಾಯ್‌ಗಳು, ಡೂ ಫೂಗಳು, ಕಾವೋ ಶೂಜಿನ್‌ಗಳು ಯಾರೂ ಪ್ರೀತಿಯಲ್ಲಿ ನಾಲಗೆಯನ್ನು ಬಳಸೋದು ಹೇಗೆ ಎಂದು ತಿಳಿಸಿರಲಿಲ್ಲ. ನಾಟಕಗಳು, 1940ರ ದಶಕದ ಹಾಲಿವುಡ್ ಸಿನೆಮಾಗಳಲ್ಲೂ ನಾಲಗೆಯ ಆ್ಯಕ್ಷನ್‌ನ್ನು ನಾನು ನೋಡಿರಲಿಲ್ಲ. ಮುತ್ತು ಕೊಡೋದು ಅಂದ್ರೆ ಕೇವಲ ತುಟಿಗಳ ಕೆಲಸ. ಅದನ್ನು ಮಾತ್ರ ಬೇಕಾದಷ್ಟು ಸಲ ನೋಡಿದೇನೆ. ಅದೇ ನನ್ನ ಮನಸ್ಸಿನಲ್ಲಿ ಕೂತಿತ್ತು.

ವಾಸ್ತವವೇ ನನ್ನೆದುರು ನಿಂತಾಗ ನಾನು ಓಡಿಬಿಟ್ಟೆ.

ಎಷ್ಟೋ ವರ್ಷಗಳ ನಂತರ ಒಬ್ಬ ಮಹಿಳೆ ತುಂಬಾ ಅನುಭವಿಯಂತೆ ತನ್ನ ನಾಲಗೆಯನ್ನು ನನ್ನ ಬಾಯಿಯೊಳಗೆ ತೂರಿಸುತ್ತಿದ್ದಾಗ, ನಾನು ಉದ್ರೇಕಿತನಾಗಲಿಲ್ಲ. ಬದಲಿಗೆ ಆ ದಿನದ ಕ್ಷಣಗಳು ನೆನಪಾದವು. ಒಂದು ಕ್ಷಣದಲ್ಲಿ ನನಗೆ ಆ ನಟಿ ನಾಲಗೆಯಿಂದ ಏನು ಮಾಡಹೊರಟಿದ್ದಳು ಎಂಬ ಅರಿವಾಗಿ... ಸ್ತಬ್ಧನಾದೆ.

ಆ ಮಹಿಳೆ ನನ್ನ ಬದಿಯಲ್ಲೇ ಮಲಗಿದ್ದರೂ ನಾನು ಉದ್ರೇಕಿತನಾಗಲಿಲ್ಲ. ಅವಳ ಮೇಲಣ ನನ್ನ ಆಸಕ್ತಿ ಕಳೆದೇಹೋಗಿತ್ತು. ಆ ಮಹಿಳಾ ಖೈದಿ ನೆನಪಾಗುತ್ತ ನೆನಪಾಗುತ್ತ ನನ್ನ ಕಣ್ಣುಗಳು ಒದ್ದೆಯಾದವು.

ಎಷ್ಟೋ ಚೀನೀಯರು ಹಸಿವಿನಿಂದ ಸತ್ತಿರೋವಾಗ, ಹಲವರು ಸಾಯೋ ಹಂತದಲ್ಲಿದ್ದಾಗ, ಆ ಮೂಲೆಯಲ್ಲಿರೋ ಕೊಳಕು ರೂಮಿನಲ್ಲಿ ಆಕೆ ಅತ್ಯಂತ ಸುಂದರವಾದ, ತೀವ್ರ ಮಾನವೀಯತೆಯ ದೃಶ್ಯವೊಂದನ್ನು ಪ್ರಕಟಿಸಿದ್ದಳು. ಅವಳ ಆ ಪಿಂಕ್ ನಾಲಗೆ ನನಗೀಗ ಕೆಂಪು ಧ್ವಜವಾಗಿ ಕಾಣುತ್ತಿದೆ. ಕಮ್ಯುನಿಸ್ಟ್ ಸ್ವರ್ಗದ ಧ್ವಜವಲ್ಲ, ಈ ಭೂಮಿಯ ಮೇಲಣ ಸ್ವರ್ಗದ ಧ್ವಜ. ಅವಳು ಎಷ್ಟು ಧೈರ್ಯಸ್ಥೆಯಾಗಿದ್ದಳು, ಎಷ್ಟು ಮುಕ್ತಳಾಗಿದ್ದಳು, ಎಷ್ಟು ಅಲೌಕಿಕವಾಗಿ ಅಶ್ಲೀಲತೆಯ ಸೋಂಕೂ ಇಲ್ಲದಂತಿದ್ದಳು, ಹೇಗೆ ಸುಳ್ಳು– ಸೋಲು – ದುರಂತದ ಜಗತ್ತಿನ ಬಗ್ಗೆ ತಲೆ ಕೆಡಿಸಿಕೊಳ್ಳದೆ ಇದ್ದಳು....

ಅವಳ ಆ ಕ್ರಿಯೆ ನನಗೆ ಇನ್ನೊಂದು ಸಹಜ ಜಗತ್ತನ್ನೇ ತೋರಿಸಿತ್ತು.


ಅವಳ ಹೆಸರೂ ನನಗೆ ಗೊತ್ತಿಲ್ಲ. ಅವಳ ಮುಖವನ್ನೂ ನಾನು ಈಗ ಮರೆತಿದೇನೆ. ಆದರೆ ಕಾಲ ಕಳೆದಂತೆ ಅವಳ ದೇಹ, ಅವಳ ಮುಖ ಎಲ್ಲವೂ ನಿಚ್ಚಳವಾದಂತೆ ಅನ್ನಿಸ್ತಿದೆ. ಅವಳು ಹತ್ತಿರ ಬಂದು ಬೀರಿದ ಆ ಅಲೆಗಳು ನನಗೆ ನಿಜವಾದ 'ಸ್ತ್ರೀತ್ವ'ದ ಪರಿಚಯ ಮಾಡಿಕೊಟ್ಟಿವೆ. ಅಂದು ನಾನು ಅರಿಯದೇ ಹೋದ ಕ್ರಿಯೆಗಳು ಈಗ ಕ್ಲಾಸಿಕ್ ಎಷ್ಟು ನಯವಾಗಿ ಅಚ್ಚೊತ್ತಿವೆ.... ನಾನು ಒಬ್ಬನೇ ಇದ್ದಾಗ ಅವಳ ಹಾಡನ್ನೇ ನಾನು ಹಾಡುತ್ತೇನೆ. ಜನರಲ್ಲಿ ನಂಬಿಕೆ ಇಡಬೇಕು ಎಂದು ಅವಳು ನನಗೆ ಹೇಳಿಕೊಟ್ಟಿದಾಳೆ.

ಮುಂದೆ ನನ್ನನ್ನು ಟೀಕಿಸುವ ಗೋಷ್ಠಿಗಳು ನಡೆದಾಗ, ಹಾಗೆ ಟೀಕಿಸುವವರನ್ನು ನಾನು ದ್ವೇಷಿಸಲೇ ಇಲ್ಲ. ಅವರಲ್ಲೂ ಒಂದು ಸ್ವಂತಿಕೆ ಇದೆ ಎಂದು ನನಗನ್ನಿಸಿತು.

ಕ್ಯಾಂಪಿನ ಕೆಳಮಹಡಿಯ ಸೆಲ್ಲಾರ್‌ನ್ನು ಕಾಯಲಿಕ್ಕೆ ಹಚ್ಚಲಿ ಎಂದು ತಾನು ಆಶಿಸಿದ್ದನ್ನು ನನ್ನ ಶಾಲಾ ಶಿಕ್ಷಕ ಸಹಪಾಠಿ ಹೇಳುತ್ತಿದ್ದ. ಕೊನೆಗೂ ಆತನಿಗೆ ಆ ಕೆಲಸ ಬಿತ್ತು. ಬಹುಶಃ ಆತನ ಹಳೆಯ ದಿನಗಳು ಮರೆತುಹೋಗಿರಬೇಕು. ಆದರೆ ನನಗೆ ಮಾತ್ರ ಆ ಕೊಠಡಿಯಲ್ಲಿ ಆದ ಅನುಭವವೇ ಇನ್ನೂ ಮನಸ್ಸಿನಲ್ಲಿ ಗಟ್ಟಿಯಾಗಿ ಕೂತಿದೆ.

ನಾನು ಅದೃಷ್ಟವಂತ. ಆ ಘಟನೆ ಕೇವಲ ಎರಡೇ ಸೆಕೆಂಡುಗಳಲ್ಲಿ ನಡೆದುಹೋಗಿದ್ದರೂ ಅವೇ ಎರಡು ಸೆಕೆಂಡುಗಳು ನನ್ನ ಬದುಕನ್ನು ಪೂರ್ತಿಯಾಗಿ ಹಾರೈಸಿವೆ.

1960ರ ಆ ಬೇಸಗೆಯಲ್ಲಿ, ಹಸಿವಿನಿಂದ ಬಳಲ್ತಾ ಇದ್ರೂ ಒಬ್ಬ ಗಂಡಸು ಒಬ್ಬ ಹೆಂಗಸಿನ ಜೊತೆಗೆ ಹೇಗೆ ಇದ್ದಿರಬಹುದು? ಯೋಚಿಸಿ.



# ಬ್ಯಾಬಿಲೋನ್! ಬ್ಯಾಬಿಲೋನ್!

ನನ್ನ ಪಕ್ಕದಲ್ಲಿ ಒಬ್ಬ ಬಲಪಂಥೀಯ ಮಲಗಿದ್ದ. ಎತ್ತರದ ದೇಹ, ತೆಳುವಾಗಿದಾನೆ. ಅವನ ತುಟಿಗಳು ನನ್ನದಕ್ಕಿಂತ ದಪ್ಪ ಅನ್ನೋದು ಬಿಟ್ರೆ ಥೇಟ್ ನನ್ನ ಥರಾನೇ ಕಾಣ್ತಿದ್ದ. ಮಾತೇ ಕಡಿಮೆ. ಯಾರು ಬೈದರೂ ಬೇಜಾರು ಮಾಡ್ಕೊಳಲ್ಲ. ಕೆಲಸ ಮಾಡೋವಾಗ ಅವನ ಕಣ್ಣುಗಳಲ್ಲಿ ದೂರದ ಯಾವುದೋ ದೃಶ್ಯವನ್ನು ನೋಡುತ್ತಿರೋ ನೋಟ. ಮಣ್ಣಿನ ಮುದ್ದೆಗಳನ್ನು ಸಾಗಹಾಕಿದ ಮೇಲೆ ವಾಪಸು ಬರುವಾಗ ಬಂದ ದಾರಿಯನ್ನೇ ದಿಟ್ಟಿಸ್ತಿದ್ದ. ಕ್ಯಾಂಪಿನಲ್ಲಿ ಎಲ್ರೂ ಸೊಳ್ಳೆಗಳಿಂದ ತಪ್ಪಿಸಿಕೊಳ್ಳೋದಕ್ಕೆ ಮುಖಕ್ಕೇ ಒಂದು ಮುಖಗವಚ ಮಾಡ್ಕೋತಾರೆ. ಅವನ ಮುಖದ ಬಲೆಯೊಳಗೆ ನೋಡಿದ್ರೆ ಆತ ಕಣ್ಣು ಮುಚ್ಚಿಕೊಂಡಿರೋದನ್ನ ಗಮನಿಸಬಹುದಾಗಿತ್ತು.

ಆತ ಮೂರ್ಖ ಎಂದು ಎಲ್ರೂ ಕರೀತಿದ್ರು. ನನಗೋ, ಆತ ಇಡೀ ಜಗತ್ತಿನಿಂದ ತನ್ನನ್ನೇ ಬೇರ್ಪಡಿಸಿಕೊಂಡು ತನ್ನದೇ ಕನಸಿನ ಜಗತ್ತಿನಲ್ಲಿ ಬದುಕ್ತಿದಾನೆ ಅನ್ನಿಸಿತ್ತು. ನಾನೂ ಹಾಗೇ ಇರಬೇಕು ಅಂದ್ಕೊಳ್ತಿದ್ದೆ. ಆಗಲಿಲ್ಲ. ಆತ ಬೇರೆಯವರ ಜೊತೆ ಮಾತೂ ಆಡ್ತಿರಲಿಲ್ಲ. ನಾನೇ ಅವನ ಪಕ್ಕ ಮಲಗಿದ್ನಲ್ಲ, ನನ್ನ ಹತ್ರಾನೂ ಮಾತಾಡ್ತಿರಲಿಲ್ಲ. ಆತ ಮಗ್ಗಲು ಬದಲಿಸಿದಾಗ ಅವನಿಗೆ ನನ್ನನ್ನು ಒತ್ತಿಕೊಂಡಿದ್ದೇನೆ ಅನ್ನಿಸ್ತಿರಲಿಲ್ಲ. ಅಥವಾ ನಾನೇ ಅವನನ್ನು ಒತ್ತಿದ್ದರೂ ಗೊತ್ತಾಗ್ತಿರಲಿಲ್ಲ. 'ನಿನ್ನ ಕಾಲು ಸರಿಸ್ಕೋ' ಅಂತ ಆತ ಹೇಳಿದ್ದೇ ಇಲ್ಲ. ಹಲ್ಲಿನ ಸಾರನ್ನು ನಾವು ನಮ್ಮ ಈ ಮನೆಗೆ ತೆಗೆದುಕೊಂಡು ಬಂದು ಸುಮ್ಮನೆ

ಕುಳಿತು ಕುಡೀತಿದ್ದೆವು. ಆತ ಒಂದೊಂದೇ ಚಮಚೆ ಸಾರನ್ನು ನಿಧಾನವಾಗಿ ಹೀರ್ತಿದ್ದ. ನಾನು ಹಳೆ ದಿನಪತ್ರಿಕೆ ಹಿಡಿದು ಅದನ್ನೇ ಓದ್ತಾ 'ತಿನ್ನುವ' ಮಜಾ ಹೆಚ್ಚಿಸಿಕೊಳ್ಳಲಿಕ್ಕೆ ಯತ್ನಿಸಿದ್ದೆ.

ಇಷ್ಟಾಗಿಯೂ ಆತನೇ ತೀರಾ ನಿಧಾನ ! ನನಗಂತೂ ಅಸೂಯೆಯೇ ಆಗ್ತಿತ್ತು. ಹೀರೋ ಮೊದಲು ಆತ ಹುಲ್ಲಿನ ಸಾರಿದ್ದ ಚಮಚೆಯನ್ನೇ ಕೂಲಂಕಷವಾಗಿ ನೋಡ್ತಿದ್ದ. ಆಮೇಲೆ ಅದನ್ನು ಬಾಯಿಗೆ ಹಾಕ್ಕೋತಿದ್ದ. ಆಮೇಲೆ ಅದೇ ನೀರು ಸಾರನ್ನು ಆತ ತುಂಬ ಹೊತ್ತು ಜಗೀತಿದ್ದ ! ಅವನ ಬಾಯಿ ಆ ತೇವಾಂಶವನ್ನು ಇಡಿಯಾಗಿ ಹೀರಿದ ಮೇಲೆ ಅದು ಹೊಟ್ಟೆ ಸೇರ್ತಿತ್ತು.

ಅಕಸ್ಮಾತ್ ಘನ ಆಹಾರವೇನಾದ್ರೂ ಸಿಕ್ಕಿದ್ರೆ ಆತ ಅದನ್ನು ಚಮಚೆಯಿಂದ್ಲೇ ಚಿಕ್ಕ ಚಿಕ್ಕ ಚೂರು ಮಾಡ್ತಿದ್ದ. ಕಡಲೆಬೀಜದಷ್ಟು ಚಿಕ್ಕವು. ಪ್ರತಿಯೊಂದೂ ಮೂಳೆ ಥರ ಗಟ್ಟಿ. ಸಾರನ್ನು ಜಗಿಯೋದಕ್ಕೂ, ಮೂಳೆಯನ್ನು ಜಗಿಯೋದಕ್ಕೂ ವ್ಯತ್ಯಾಸ ಇದೆ ನೋಡಿ...

ಒಮ್ಮೆ ಮಾತ್ರ ಆತ ಹೇಳಿದ್ದು ನನಗೆ ತುಂಬ ನೆನಪಿದೆ: 'ನನಗೆ ನೀರು ನೀರಾಗಿರೋ... ವಸ್ತುಗಳು... ಇಷ್ಟ. ನನಗೆ... ಒಣ ಆಹಾರ ತಿನ್ನೋದಕ್ಕೆ... ಇಷ್ಟ ಇಲ್ಲ.'

ಓ ಮೈ ಗಾಡ್! ಅವನ ಹೊಟ್ಟೆ ಬೆನ್ನಹುರಿಗೆ ಅಂಟಿಕೊಂಡಿದೆ. ಆದ್ರೂ ಅವನಿಗೆ ನಿಜ ಆಹಾರಕ್ಕಿಂತ ಸಾರೇ ಇಷ್ಟ !

ಆತ ನಮ್ಮ ಥರ ಎಂದೂ ಹಸಿರನ್ನು ನುಂಗಲಿಲ್ಲ ಅಥವಾ ಆಹಾರದ ವ್ಯಾಪಾರ ಮಾಡಲಿಲ್ಲ. ಕೆಲಸವಿಲ್ಲದ ದಿನ ಖೈದಿಗಳು ವ್ಯಾಪಾರ ಮಾಡ್ತಾ ಓಡ್ತಾ ಇದ್ರೆ ಈತ ಅಲ್ಲಿ ಕಾಲನ್ನು ಚಾಚಿ ಕೂರುತ್ತಿದ್ದ. ಅವನ ಬಳಿ ವ್ಯಾಪಾರ ಮಾಡ್ಲಿಕ್ಕೆ ಒಂದು ಚರ್ಮದ ಚೀಲ ಇತ್ತು. ಆದರೆ ಅದನ್ನು ಆತ ತೆರೆದದ್ದನ್ನೇ ನಾನು ನೋಡಲಿಲ್ಲ. ಅಂದ್ರೆ ಆತ ತನ್ನ ಕಾಚಾವನ್ನೂ ಬದಲಿಸಿಲ್ಲ ಅಂದಾಯ್ತು. ಇಂಥ ಮೂರ್ಖನ ಹತ್ರ ಎಂದಾದ್ರೂ ತಂಡನಾಯಕ ಹೇಗೋದಂತೂ ಸಾಧ್ಯವೇ ಇರಲಿಲ್ಲ.

ಈಗ ಇಲ್ಲಿಗೆ ಬಂದಿದ್ದಾದರೂ ಹೇಗೆ? ಅವನ ಅಪರಾಧವಾದರೂ ಏನು? ಒಂದು ದಿನ ಚೆನ್ನಾಗಿ ಮಳೆ ಬರ್ತಿತ್ತು. ಎಲ್ರೂ ಯಾವುದೋ ನಕ್ಷತ್ರಪುಂಜದ ಸ್ಥಾನದ ಬಗ್ಗೆ ಮಾತಾಡ್ತಾ ಇದ್ರು. ಪರಾರಿಯಾಗೋದಾದ್ರೆ ಯಾವ ದಿಕ್ಕು ಹಿಡೀಬೇಕು ಅನ್ನೋದಕ್ಕೆ ಈ ಚರ್ಚೆ ನಡೆದಿತ್ತು. ಆಗ ಆತ ದಿಢೀರನೆ ಗೊಣಗ್ತಿದ್ದದ್ದು ನನಗೆ ಕೇಳಿಸ್ತು :

'ಬ್ಯಾಬಿಲೋನಿಯನ್ ಕಾಲದಲ್ಲಿ ಖಗೋಳ ಶಾಸ್ತ್ರ ತುಂಬಾ ಬೆಳೆದಿತ್ತು.'

ನಾನು ಅಚ್ಚರಿಯಿಂದ ತತ್ತರಿಸಿದೆ. ಆದ್ರೆ ಆತ ಮತ್ತೇನೂ ಹೇಳಲಿಲ್ಲ.

ಆವಾಗಿನಿಂದ ನನಗೆ ಅವನ ಮುಖದಲ್ಲಿ ಸಾವಿನ ಕವಚ ಕಾಣಿಸತೊಡಗಿತು. ಅವನ ಇಡೀ ದೇಹದಿಂದ ಒಂಥರ ವಾಸನೆ ಹರಡುತ್ತೆ. ಅವನ ಮುಖ ಕೆಂಪಿನ ಕಡುಛಾಯೆಯನ್ನು ಹೊಂದಿದೆ. ಕಸದ ತೊಟ್ಟಿಯ ಒಂದು ಕೊಳಕು ರಾಶಿಯ ಥರ ಕಾಣಿಸ್ತಿದೆ. ಈ ಹಿಂದೆ ನಾನು ಅದನ್ನು ಗಮನಿಸಿರ್ಲಿಲ್ಲ. ಅಲ್ಲಿ ಯಾರು ಶುಚಿಯಾಗಿದ್ದಾರೆ ಹೇಳಿ? ನಾನೇನು ಅವನಿಗಿಂತ ಚೊಕ್ಕಟವಾಗಿದ್ನಾ?

ಆತ ನನ್ನ ಪಕ್ಕ ಮಲಗ್ತಿದ್ದ ಅಂತ ಹೇಳಿದ್ನಲ್ಲ... ಅವನ ಅಪರಾಧಗಳ ಮುಂದೆ ನನ್ನವು ತೀರಾ ಕ್ಷುಲ್ಲಕವಾಗಿದ್ದವು. ಒಂಥರ ನನ್ನ ರಕ್ಷಾಕವಚದ ಥರ ಆತ ಇದ್ದ. ಟೀಕಾ ಗೋಷ್ಠಿಗಳಲ್ಲಿ ಅವನನ್ನು ಬೈಯ್ಯದವರೇ ಇಲ್ಲ. 'ಮಾತೇ ಆಡದೆ ಇದ್ದುಬಿಟ್ರೆ ಅವನ ಮೋಸ ಯಾರಿಗೂ ಗೊತ್ತಾಗಲ್ವ? ಇದು ವರ್ಗ ಸಂಘರ್ಷದ ಶತ್ರುಗಳ ಸೂತ್ರ ' ಎಂಬ ಟೀಕೆ ಇದ್ದೇ ಇರ್ತಿತ್ತು. ಆಮೇಲೆ ಅವನ ಪಕ್ಕದಲ್ಲಿ ಮಲಗಿಯೂ ಅವನ ಅಪರಾಧಗಳನ್ನು ಪಟ್ಟಿ ಮಾಡದ ನನ್ನ ಮೇಲೂ ಬೈಗುಳ.

ಅವನ ತಿನ್ನೋ ಶೈಲಿಯಂತೂ ನನಗೆ ಹುಚ್ಚೇ ಹಿಡಿಸಿತ್ತು. ಅವನ ಶಬ್ದರಹಿತ ಅಸ್ತಿತ್ವ ನನಗೆ ಅತ್ಯಂತ ಘೋರ ಸದ್ದು ಮಾಡುವ ರಾಕೆಟಿನ ಹಾಗೆ ಕಾಣುತ್ತಿತ್ತು. ನಾನೂ ನನ್ನನ್ನು ಚೆನ್ನಾಗಿ ತೋರಿಸ್ಕೋಳ್ಳೋದಕ್ಕೆ ಟೀಕೆ ಶುರು ಮಾಡ್ತಿದ್ದೆ : 'ಆತ ತಿನ್ನಬೇಕಾದ್ರೆ ತುಂಬ ನಿಧಾನ ಮಾಡ್ತಾನೆ. ಒಂದು ಊಟ ಮುಗಿಸೋದಕ್ಕೆ ಅರ್ಧ ದಿನ ಬೇಕು ಇವನಿಗೆ. ಇಲ್ಲಿ ಏನೋ ಸಮಸ್ಯೆ ಇದೆ ಅನ್ಸುತ್ತೆ.' ಆತ ನೀರಿನ ಆಹಾರವೇ ಇಷ್ಟ ಅಂತ ತೊದಲುತ್ತ ಹೇಳಿದ್ದನ್ನು ಮಾತ್ರ ನನ್ನೊಳಗೇ ಇಟ್ಟುಕೊಂಡಿದ್ದೆ.

'ಹಾಗಾದ್ರೆ ಆತ ತಿನ್ನಬೇಕಾದ್ರೆ ಏನು ಯೋಚಿಸ್ತಾನೆ?' ಬಹುಶಃ ನನಗೆ ತಿನ್ನೋದಕ್ಕೆ ಇಷ್ಟೇ ಕೊಟ್ರಾ ಅಂಥ ಪಕ್ಷವನ್ನು ಬೈತಿರಬಹುದು. ಅಥವಾ 'ನೀವು ಕೊಟ್ಟಿದ್ದನ್ನೇ ತುಂಬಾ ಇದೆ ಅನ್ನೋ ಥರ ನೋಡಿ ಅನ್ನೋ ಹಮ್ಮೂ ಇರಬಹುದು!'

'ಅಥವಾ ರುಚಿಯನ್ನು ಸ್ವಾದಿಸೋ ರೀತಿ ಇರಬಹುದು. ಬೂರ್ಜ್ವಾಗಳ ನೀತಿಯೇ ಇದು. ತಾನಿನ್ನೂ ಹೈಕ್ಲಾಸ್ ರೆಸ್ಟೋರೆಂಟಿನಲ್ಲಿ ತಿಂತಿದೀನಿ ಅಂತ ಭಾವಿಸ್ತಿರಬಹುದು. ಅವನನ್ನು ಸುಧಾರಿಸದೆ ಬೇರೆ ಯಾರನ್ನು ಸುಧಾರಿಸಬೇಕು ಹೇಳಿ?'

ನೀವು ನಂಬದಿರಬಹುದು. ಆದರೆ ಈಗಲೂ, ಆ ದಿನಗಳು ಕಳೆದ ಮೂವತ್ತು ವರ್ಷಗಳ ನಂತರವೂ ಹೀಗೆ ಈ ಬಗೆಯ 'ಆಳ ವಿಶ್ಲೇಷಣೆ' ನಡೆಸೋ ಜನರನ್ನು ನೀವು ಕಾಣಬಹುದು. ಸಾಮಾನ್ಯವಾಗಿ ಹಾಗೆ ಮಾಡೋವ್ರೆಲ್ಲ ವಿದ್ಯಾವಂತರೇ.

ಹಾಗಂತ ಅವನನ್ನು ಟೀಕಿಸೋರೆಲ್ಲ ಕೇವಲ ತಮ್ಮನ್ನು ತಾವು ರಕ್ಷಿಸಿಕೊಳ್ತಾ ಇದ್ರೇ ವಿನಾ ಅವನಿಗೆ ತೊಂದ್ರೆ ಕೊಡೋ ಉದ್ದೇಶ ಖಂಡಿತ ಇರಲಿಲ್ಲ. ಸಭೆ ಮುಗಿದ ಮೇಲೆ ಮಲಗೋದೇ ಕೆಲಸ. ಆತ ತನ್ನ ಜಿಡ್ಡು ಹಾಸಿಗೆಯನ್ನು ಹಾಸುತ್ತ ನನ್ನ ಕಡೆ ನೋಡಿ ಒಂದು ಕ್ಷೀಣ ನಗು ಬೀರಿದಂತೆ ಕಾಣಿಸಿತು. ಅಥವಾ ಆತ ಅಳ್ತಾ ಇದಾನಾ? ಏನೋ, ಆತನ ಬಾಯಿಯಿಂದ ಒಂದು ತುದಿ ಕಿಸಿದದ್ದು ಮಾತ್ರ ಕಾಣಿಸ್ತು.

ಮರುದಿನ ಸೋಮವಾರ. ನಾವು ಹಾಸಿಗೆಯಿಂದ ಹೊರಬಿದ್ದಾಗ ಬೆಳಕಿನ್ನೂ ಹರಿದಿರಲಿಲ್ಲ. ನಾವು ಸೀದಾ ಬೆಳಗಿನ ಆಹಾರಕ್ಕಾಗಿ ಸಾಲುಗಟ್ಟಿದೆವು. (1958ರಿಂದ 1976ರರವರೆಗೆ ನಾವೆಲ್ಲರೂ ಬೆಳಗ್ಗೆ ಎದ್ದ ಕೂಡಲೇ ಬಾಯಿ – ಮುಖ ತೊಳೆಯುವ ಬಂಡವಾಳಶಾಹಿ ಅಭ್ಯಾಸಗಳನ್ನು ಬಿಟ್ಟೇ ಬಿಟ್ಟಿದ್ದೆವು.) ಆದರೆ ವಿರೋಧದ ಸಂಕೇತ ಎಂಬಂತೆ ಆತ ಏಳಲೇ ಇಲ್ಲ. ಹಾಸಿಗೆಯ ಒಳಗೇ ಅವನ ಮುಖ ಹುದುಗಿಕೊಂಡಿತ್ತು.

ಆತ ಬರದೆ ನಮಗೆ ತಿನ್ನೋದಕ್ಕೆ ಏನೂ ಸಿಗಲ್ಲ. ಹದಿನೆಂಟು ಜನರ ನಮ್ಮ ತಂಡದ

ಎಲ್ಲರೂ ಇದ್ದರೇನೇ ಆಹಾರ ಸಿಗೋದು. ಬಾಣಸಿಗ ತಲೆ ಎಣಿಸ್ತಾನೆ. ಒಂದು ತಲೆ ಕಡಿಮೆ ಇದ್ರೂ ಆತ ಏನೂ ಕೊಡಲ್ಲ. ಅವನನ್ನು ಎಬ್ಬಿಸಿಕೊಂಡು ಬರೋದಕ್ಕೆ ತಂಡದ ನಾಯಕ ನನಗೆ ಸೂಚನೆ ನೀಡಿದ.

'ಸತ್ತ ನಾಯಿ ಥರ ನಟಿಸಬಹುದು ಅಂತ ಈತ ತಿಳ್ಕೊಂಡಿದಾನಾ? ಅವನನ್ನು ಹೊರಗೆ ಎಳಿ!'

ಅರ್ಧನಿದ್ರೆ, ಅರ್ಧ ಎಚ್ಚರದಲ್ಲಿದ್ದ ನಾನು ಅವನನ್ನು ಅಲುಗಾಡಿಸಿದೆ. ಅವನ ಶರೀರ ಅಲುಗಾಡಿತೇ ವಿನಾ ಆತ ಮಾತ್ರ ಸದ್ದು ಮಾಡಲಿಲ್ಲ. ಸರಿ, ಅವನ ಹೊದಿಕೆಯನ್ನೇ ಎಳೆದೆ. ಅವನ ದೇಹಕ್ಕೆ ನನ್ನ ಕೈ ತಗುಲಿದಾಗ ನನಗೆ ವಿಚಿತ್ರ ಸಂವೇದನೆಯಾಯ್ತು. ನಾನು ಕಿರುಚಿದೆ.

'ಸಾರ್, ಆತ ಗಟ್ಟಿಯಾಗಿದಾನೆ!'

ಮಹಾನ್ ಹರಿಕಾರ ಮಾವೋ ಝೆಡಾಂಗ್ ಹೇಳಿಲ್ವೆ, 'ಸಾಯೋದು ಸದಾ ಘಟಿಸೋ ಕ್ರಿಯೆ' ಅಂತ? ತಂಡನಾಯಕ ಗಡಬಡಿಸಲಿಲ್ಲ. 'ಹ್' ಎಂದು ಫ್ಲಾಶ್ ಲೈಟ್ ತಂದ. ಅವನ ದೇಹವನ್ನು ಮುಟ್ಟಿದ. 'ಓಕೆ. ನಾವು ಅವನನ್ನು ಮರೆಯೋಣ. ಹೋಗಿ ತಿಂಡಿ ತಿನ್ನೋಣ.' ತಂಡದ ಒಬ್ಬಾತ ಕಾಯಿಲೆಯಿಂದ ಮಲಗಿದಾನೆ ಎಂದು ಬಾಣಸಿಗನಿಗೆ ಹೇಳಿದ. ಆತನೂ ಅವನ ಮಾತು ಕೇಳಲೇಬೇಕು. ನಮ್ಮ ಮಲಗಿದ ಖೈದಿಯ ಪಾಲಿನ ಸಾರನ್ನು ತಂಡನಾಯಕ ಇಬ್ಬರು ನಂಬಿಕಸ್ತ ಖೈದಿಗಳಿಗೆ ಹಂಚಿದ.

ಅವರಿಬ್ಬರನ್ನು ಬಿಟ್ಟು ನಾವು ಮೌನವಾಗಿ ಸಾರು ಕುಡಿಯತೊಡಗಿದೆವು. ನನಗೆ ಮಾತ್ರ ಸಾರು ಗಂಟಲಲ್ಲಿ ಇಳಿಯಲೇ ಇಲ್ಲ. ಅದು ಅವನ ಕಟಬಾಯಿಯಲ್ಲಿ ಸದಾ ಕಾಣಿಸಿಕೊಳ್ಳುತ್ತಿದ್ದ ಬಿಳಿ ಜೊಲ್ಲಿನ ಹಾಗೆ ಕಾಣ್ತಾ ಇದೆ ...

ತಂಡನಾಯಕ ಅವನನ್ನು ಮುಟ್ಟೋವಾಗ ನಾನು ಫ್ಲಾಶ್‌ಲೈಟ್ ಹಿಡಿದು ಅವನ ಮುಖವನ್ನೇ ನೋಡಿದೆ. ಅವನ ಮುಖದಲ್ಲಿ ಈಗಾಗಲೇ ಕಂಡ ಸಾವಿನ ಕವಚ ಜೊತೆಗೇ ಇನ್ನೂ ಒಂದಂಶ ಕಾಣಿಸಿತು. ಅವನ ಕೂದಲುಗಳು ಒಂದೇ ರಾತ್ರಿಯಲ್ಲಿ ಉದ್ದುದ್ದ ಬೆಳೆದಿದ್ದವು. ತುಟಿಗಳು ಅಗಲ ತೆರೆದುಕೊಂಡಿದ್ದವು. ಹೊರಗಣ ದೃಶ್ಯಗಳನ್ನು ಸದಾ ನೋಡುವಂತೆ ಅವನ ಕಣ್ಣುಗಳು ತೆರೆದಿವೆ... ಟಾರ್ಚಿನ ಆ ಬೆಳಕಿನಲ್ಲಿ ಆತ ಎಲ್ಲ ದಿಕ್ಕುಗಳಲ್ಲೂ ಕಣ್ಣು ಹಾಯಿಸುತ್ತ ಕಿರುಚುತ್ತಿರಬಹುದು 'ಬ್ಯಾಬಿಲೋನ್! ಬ್ಯಾಬಿಲೋನ್!'

ಅದೇ ಕ್ಷಣ, ನನ್ನಲ್ಲಿ ಪರಾರಿಯಾಗೋ ಯೋಚನೆ ಹುಟ್ಟಿತು. ಆತ ಸಾಯೋ ಹಿಂದಿನ ರಾತ್ರಿ ನನಗೆ ನೀಡಿದ ಆ ನಗುವಿನಲ್ಲಿ ಏನಿತ್ತು? ಅಪಹಾಸ್ಯವೆ? ಧನ್ಯವಾದವೆ? ಆ ಪ್ರಶ್ನೆ ನನ್ನನ್ನು ಈಗಲೂ ಕಾಡುತ್ತಿದೆ. ನಾನೆಂದೂ ಮುಗ್ಧನಾಗಲು ಈ ಪ್ರಶ್ನೆ ಬಿಟ್ಟಿಲ್ಲ.

ಸಾವಿಗೆ ಈ ಕ್ಯಾಂಪು ಒಂದು ಸಾಮಾನ್ಯ ಸ್ಥಳವಾಗಿತ್ತು. ಕೊನೆಗೆ ನಾನು ವಾಂಪೋವಾ ಮಿಲಿಟರಿ ಅಕಾಡೆಮಿಯಿಂದ ತರಬೇತಾದ ಸೈನಿಕನ ಥರ ತಯಾರಾದೆ.

ಒಂದು ದಿನ ಚೆನ್ನಾಗಿ ಮಳೆ ಹೊಡೀತಿದೆ. ನಾನು ನನ್ನ ಸಾರನ್ನು ತಗೊಂಡು

ಹತ್ತಿರದಲ್ಲಿದ್ದ ಮಣ್ಣಿನ ಶೆಡ್‌ನೊಳಗೆ ಬಂದು ಕೂತೆ. ಸಾರು ಕುಡಿಯೋ ಹೊತ್ತಿಗೆ ಮಳೆ ನಿಲ್ಲಬಹುದು ಅಂದ್ಕೊಂಡೆ. ಆದರೆ ಆ ಕೋಣೆಯಲ್ಲಿ ಅದೇ ತಾನೇ ಖೈದಿಯೊಬ್ಬ ಸತ್ತಿದ್ದ. ಬಾಗಿಲಿಗೆ ಹಿಡಿಸೋದಿಲ್ಲ ಎಂಬಂತೆ ಕಾಲು ಕೈಗಳನ್ನು ಚಾಚಿಯೇ ಸತ್ತಿದ್ದಾನೆ. ನಾನು ಸೌಜನ್ಯಪೂರ್ವಕವಾಗಿ ಅವನ ಒಂದು ತೋಳನ್ನು ಸರಿಸಿ, ಸ್ವಲ್ಪ ಜಾಗ ಕೊಡ್ತೀಯ ಎಂದು ಕೇಳಿದೆ. ಆಮೇಲೆ ಅವನ ಪಕ್ಕದಲ್ಲಿ ಕೂತು ಬಿಸಿ ಬಿಸಿ ಸಾರನ್ನು ಚಪ್ಪರಿಸಿದೆ.

ಯಾವುದೇ ದೆವ್ವದ ಜೊತೆಗೂ ನಾನು ನನ್ನ ಕೋಣೆಯನ್ನು ಹಂಚಿಕೊಳ್ಳುವಷ್ಟು ನಾನು ಬೆಳೆದಿದ್ದೆ. ಅದರಲ್ಲೂ 60 ಸೆಂಟಿಮೀಟರ್‌ಗಳಷ್ಟು ಅಗಲದ ಬಂಕಿನಲ್ಲಿ... ರಾತ್ರೋರಾತ್ರಿ ಕೂದಲುಗಳು ಉದ್ದುದ್ದ ಬೆಳೆಯುವ ದೆವ್ವದ ಜೊತೆಗೆ...

ಓಹ್ ಬ್ಯಾಬಿಲೋನ್! ಬ್ಯಾಬಿಲೋನ್! ನನ್ನ ಪ್ರಿಯ ಬ್ಯಾಬಿಲೋನ್!

***

ನಾವು ಬರೀ ಹಸಿರು ಹುಲ್ಲನ್ನೇ ತಿಂತಾ ಇದ್ವಿ ಅಂತ ತಪ್ಪಾಗಿ ತಿಳ್ಕೋಬೇಡಿ. ಹಸಿರಾಗಿರೋ ಜೀವಿಗಳನ್ನೂ ತಿಂತಿದ್ವಿ. ಭೂಮಿಯ ಮೇಲೆ ಹರಿದಾಡೋ ಹಲವಾರು ಚಿಕ್ಕಪುಟ್ಟ ಪ್ರಾಣಿಗಳು ಇದ್ದವಲ್ಲ? ಕಷ್ಟ ಅಂದ್ರೆ ಅವುಗಳನ್ನು ಹಿಡಿಯೋದು. ಇಲಿಗಳಂತೂ ಮನುಷ್ಯರಿಗಿಂತ ತುಂಬಾ ವೇಗವಾಗಿ ಓಡಿಹೋಗುತ್ತವೆ. ಹಾಗೇ ಕಪ್ಪೆಗಳನ್ನು ಹಿಡಿಯೋದೂ ಕಷ್ಟಾನೇ. ಕಪ್ಪೆ ತೊಡೆ ಮಾಂಸ ಮಾತ್ರ ತುಂಬಾ ರುಚಿಕರ. ಹಾಗೆ ಕಪ್ಪೆಗಳು ಹಾರುತ್ತ ಹಾರುತ್ತ ತೊಡೆ ತೋರಿಸಿದಾಗ ನಮ್ಮ ಸಹಖೈದಿಗಳಿಗೆ ಬಾಯಲ್ಲಿ ಜೊಲ್ಲು ಸುರಿಸುವುದೊಂದೇ ಕೆಲಸ!

ಹಲ್ಲಿಗಳು ಪರವಾಗಿಲ್ಲ. ತುಂಬಾ ಬೇಗ ಹಾರಲ್ಲ. ಹಲ್ಲಿಗಳು ನಾಲಗೆ ಹೊರಗೆ ಚಾಚಿ ಹೆದರಿಸುತ್ತವೆ ನಿಜ. ಆದ್ರೆ ಅವಕ್ಕೆ ಹೋರಾಟ ಮಾಡೋ ಶಕ್ತಿ ಇಲ್ಲವೇ ಇಲ್ಲ. ಆಮೇಲೆ ಅಲ್ಲಿ ಕೊಳಗಳು ಬತ್ತಿಹೋದಾಗ ಕಾಣೋ ಸತ್ತ ಮೀನುಗಳೂ ನಮ್ಮ ಖಾದ್ಯವೇ.

ಸಾಹಿತ್ಯದಲ್ಲಿ ಚಿಪ್ಪನ್ನು ಒಡೆದು ತಿನ್ನೋ ಮಾನವನೇ ತುಂಬಾ ಧೈರ್ಯವಂತ ಅನ್ನೋ ಮಾತು ಹಲವು ಸಲ ಬರುತ್ತೆ. ಅಂಥ ಸಾಕಷ್ಟು ಧೈರ್ಯಸ್ಥರು ನಮ್ಮ ಕ್ಯಾಂಪಿನಲ್ಲಿದ್ದರು. ನೆಲಗಪ್ಪೆಗಳಿಗೆ ಚೀನೀ ಭಾಷೆಯಲ್ಲಿ ಚುಂಚು ಅಂತಾರೆ. ಈ ನೆಲಗಪ್ಪೆಗಳು ಹತ್ತು ಸೆಂಟಿಮೀಟರಿನಷ್ಟು ಉದ್ದ ಬೆಳೆಯುತ್ತವೆ. ಇವುಗಳು ವಿಷಯುಕ್ತ, ತಿನ್ನಬಾರದು ಎಂದು ಸಾಹಿತ್ಯ ಹೇಳುತ್ತೆ. ನೆಲಗಪ್ಪೆಗಳ ವಿಷದಿಂದ ತಯಾರಿಸಿದ ಔಷಧವನ್ನು ಕರುಳಿನ ಗಡ್ಡೆಗಳನ್ನು ತೆಗೆಯಲು ಬಳಸ್ತಾರೆ. ಈ ವೈಜ್ಞಾನಿಕ ನಂಬಿಕೆಗಳೆಲ್ಲ ಕಡಿಮೆ ಪಡಿತರದ ಅವಧಿಯಲ್ಲಿ ಚಿಂದಿಯಾದವು!

ನೆಲಗಪ್ಪೆಯನ್ನು ಎರಡು ಥರ ತಿನ್ನಬಹುದು: ಬೇಯಿಸಿ ಅಥವಾ ಹುರಿದು. ಇನ್ನೂ ಕೆಲವರು ಈ ಎರಡೂ ವಿಧಾನಗಳನ್ನು ಬಿಟ್ಟು ಸೀದಾ ನೆಲಗಪ್ಪೆಗಳ ಚರ್ಮ ಸುಲಿದು ಬಾಯಿಯಲ್ಲಿ ತಣ್ಣನೆಯ ಅಪೆಟೈಸರ್ ಥರ ಇಟ್ಕೋತಾರೆ. ಯಾರು ಅವು ವಿಷಯುಕ್ತ ಅಂದವರು? ಅವರೆಲ್ಲ ನರಕಕ್ಕೆ ಹೋಗ್ಲಿ. ಅವತ್ತು ಇಂಥ ನೂರಾರು ನೆಲಗಪ್ಪೆಗಳನ್ನು ಜಗಿದವರು ಈಗಲೂ ಆರೋಗ್ಯವಾಗಿದಾರೆ.

ಹಾಗೆ ತಿನ್ನಲು ಹೆದರಿದವರು ಮಾತ್ರ ಜೀವ ಬಿಟ್ಟು ಎಷ್ಟೋ ವರ್ಷಗಳಾದವು...

ಜುಲೈ 29ರಂದು ಝೌ ಮೊಲದ ಕಾಲೊಂದನ್ನು ಬೇಯಿಸಿ ತಿಂದ. ಅವನ ಅದೃಷ್ಟಕ್ಕೆ ನನ್ನ ಹೊಟ್ಟೆ ಉರಿಯಿತು. ಯಾವುದೋ ಗಿಡುಗ ಆ ಮೊಲದ ಕಾಲನ್ನು ನೆಲಕ್ಕೆ ಎಸೆದಿತ್ತು. ಅದಕ್ಕೆ ಇರುವೆಗಳು ಮುತ್ತಿದ್ದವು. ಝೌ ಸೀದಾ ಇರುವೆಗಳನ್ನು ಕೊಡವಿದ. ಗೆದ್ದಲುಗಳನ್ನು ಸರಿಸಿದ. ಆಹಾ ! ಇನ್ನೂ ಕೊಳೆತಿಲ್ಲ. ಹೇಳಿಕೇಳಿ ಝೌ ಒಬ್ಬ ಡಾಕ್ಟರ್. 'ಏನಾದ್ರಾಗ್ಲಿ, ಇವತ್ತು ಭೂರಿ ಭೋಜನ ! ಬೆಂಕಿಕಡ್ಡಿ ಯಾರ ಹತ್ರ ಇದೆ?' ಒಬ್ಬ ಖೈದಿ ಬೆಂಕಿಪೊಟ್ಟಣ ಕೊಟ್ಟ. ಅಂದರೆ ಅದರಲ್ಲಿ ಅವನಿಗೂ ಪಾಲು.

ಹೀಗೆ ನೆಲಗಪ್ಪೆ, ಇಲಿ, ಹಲ್ಲಿ, ಸತ್ತ ಮೀನು, ವಿಷಕಾರಿ ಅಣಬೆಗಳು – ಯಾವುದೇ ಇರಲಿ, ಅವನ್ನು ಮೊದಲು ತಿಂತಾ ಇದ್ದದ್ದು ಒಬ್ಬ ಬುದ್ಧಿಜೀವಿಯೇ. ಕಳ್ಳರಿಗೆ ಈ ಧೈರ್ಯ ಇರಲ್ಲ. ಅವರು ಸಿದ್ಧ ಆಹಾರವನ್ನಷ್ಟೇ ಕದೀತಾರೆ.

ಅವತ್ತು ನಾನು ಓಡಿ ಬಿದ್ದು ವಿಶ್ರಾಂತಿ ಪಡೆದಿದ್ದೆ. ಕಸ ಗುಡಿಸಿದೆ. ಮೊದಲೇ ಹೇಳಿದ್ದೆ ತಾನೆ, ಇಲ್ಲಿ ಕಸ ಅನ್ನೋದೇ ಇಲ್ಲ. ಒಂದು ಸಿಗರೇಟಿನ ಕೊರೆ, ಒಂದು ದಾರದ ಚೂರು, ಎಲ್ಲವೂ ತುಂಬಾ ಬೆಲೆಬಾಳುತ್ತವೆ. ನಿಮ್ಮ ತುಟಿ ಸೀಳಿ ಮೇಲೇಳುವ ಹಕ್ಕಳೆಯೂ ಆಹಾರವೇ.

ನಾನು ಕಸ ಗುಡಿಸ್ತಾ ಇದ್ದಂತೆ ಇತಿಹಾಸಕಾರನಾಗಿದ್ದ ಆ ಖೈದಿ ಬಿಸಿ ಬಿಸಿ ನೀರನ್ನು ಒಂದು ಡಬ್ಬದಲ್ಲಿ ತನ್ನ ಬ್ಯಾರಕ್‌ಗೆ ಒಯ್ಯುತ್ತಿದ್ದ. ನನ್ನನ್ನು ನೋಡಿ ಸನ್ನೆ ಮಾಡಿದ. ನಾನು ಅವನನ್ನೇ ಹಿಂಬಾಲಿಸಿದೆ.'ಇದರಲ್ಲಿ ಏನಿರಬಹುದು?'

'ಬಹುಶಃ ಒಂದು ಮೊಟ್ಟೆ. ನಿನಗೆ ಹೀಗೆ ಮೊಟ್ಟೆ ಸಿಗೋದಾದ್ರೂ ಹ್ಯಾಗೆ?' ನಾನು ಕೇಳದೆ.

'ಹ !ಹ ! ಮೊಟ್ಟೆ?' ಆತ ಆ ಚೂರನ್ನು ತಿರುಗಿಸಿದ. ಕಪ್ಪೆ !

'ಕಪ್ಪೆ ಹಿಡಿದುಕೊಡು ಹಾಗಾದ್ರೆ... ಇದು ನೆಲಗಪ್ಪೆ.ಗೊತ್ತಾಗ್ಲಿಲ್ವ?' ಆತ ವಿವರಿಸಿದ. 'ನೆಲಗಪ್ಪೆಯಲ್ಲಿ ವಿಷ ಇರೋದು ನಿಜ. ಆದ್ರೆ ಅದು ಇರೋದು ಅದರ ಚರ್ಮ ಮತ್ತು ಗ್ರಂಥಿಗಳಲ್ಲಿ. ಅವನ್ನು ತೆಗೆದುಹಾಕಿದ್ರೆ.. ಆಹಾ! ಅಚ್ಚುಕಟ್ಟಾದ ಆಹಾರ!'

'ಆಮೇಲೆ ಇದನ್ನು ಕುದಿಸಿದ್ರೆ ಸಾಕು, ಎಲ್ಲ ವಿಷವೂ ಮಾಯ. ಬಹುಶಃ ಇದರಲ್ಲಿ ಮಾನವನಿಗೆ ಲಾಭದಾಯಕವಾದ ಅಂಶವಿರಬೇಕು. ಹದಿನೈದನೇ ಶತಮಾನದಲ್ಲಿ ಇಥಿಯೋಪಿಯಾದ ಕುರುಬ ಕಾಫಿ ಕುದಿಸಿದ್ದು ಈಗ ಅದು ಜಗತ್ತಿನಲ್ಲಿ ಹಬ್ಬಿಲ್ವ?'

ಈ ಮನುಷ್ಯ ಇತಿಹಾಸದ ಪಾಠ ಮಾಡುವಾತ. ಇತಿಹಾಸವನ್ನು ಶಿಲಾಯುಗ, ಕಬ್ಬಿಣದ ಯುಗ ಅಂತ ಮಾತ್ರ ವರ್ಗೀಕರಿಸಬಾರದು. ಮನುಷ್ಯ ಹಿಂದೆ ಕೇವಲ ಮರವನ್ನೇ ಬಳಸ್ತಿದ್ದ. ಆದ್ರಿಂದ ಮರಯುಗವನ್ನೂ ಗುರುತಿಸಬೇಕು ಎಂದು ಈತ ಹೇಳ್ತಿದ್ದ. ಆದರೆ ದುರದೃಷ್ಟವಶಾತ್ ಅವನ ಮಾತುಗಳಿಗೂ ಚೀನಾದಲ್ಲಿ ಆಗ ಇದ್ದ ಸಾಮಾಜಿಕ ಅಭಿವೃದ್ಧಿ ಇತಿಹಾಸಕ್ಕೂ ಹೊಂದಿಕೆಯಾಗಿರಲಿಲ್ಲ. ಸರಿ, ಸೀದಾ ಕ್ಯಾಂಪಿಗೆ ಬಂದು ಬಿದ್ದಿದ್ದ !

ನೆಲಗಪ್ಪೆಯನ್ನು ತಿನ್ನಲು ಆತ ನನ್ನನ್ನು ಆಹ್ವಾನಿಸಿದರೂ ನಾನು ನಯವಾಗಿ ತಿರಸ್ಕರಿಸಿದೆ.

ಕೆಲವೇ ದಿನಗಳಲ್ಲಿ ನಾವು ಹೊಲದಲ್ಲಿ ಕೆಲಸ ಮಾಡ್ತಿದ್ದೆವು. ಅರೆ ! ಒಂದು ಡೈರಿ ಹಸು

! ನಮ್ಮನ್ನು ನೋಡಿ ನಿಂತಿತು. ನನಗೆ ಕಾಣಿಸಿದ್ದು ಅದರ ತುಂಬಿದ ಕೆಚ್ಚಲುಗಳು ಮಾತ್ರ. ಎಷ್ಟು ತುಂಬಿಕೊಂಡಿವೆ... ಹಸಿರಿನ ಆ ಹಿನ್ನೆಲೆಯಲ್ಲಿ ಬಿಳಿ ಕೆಚ್ಚಲು ಕಂಡು ನನ್ನ ಬಾಯಲ್ಲಿ ನೀರೂರಿತು.

'ಹೇ! ತಯಾರಾಗು. ಲೋಟ ತಗೋ' ನಾನು ಪಕ್ಕದಲ್ಲಿದ್ದ ತತ್ವಶಾಸ್ತ್ರದ ಅಧ್ಯಾಪಕನಿಗೆ ಹೇಳಿದೆ. ಇಬ್ಬರೂ ಸದ್ದಿಲ್ಲದೆ ಹಸುವಿನ ಒಂದೊಂದು ಬದಿಯಲ್ಲಿ ನಡೆದೆವು. ಒಂದು ತೊಟ್ಟು ಹಾಲು ಸಿಕ್ಕಿದ್ರೂ ಸಾಕು, ನಾನು ಆಜೀವಪರ್ಯಂತ ದೇವರಿಗೆ ಥ್ಯಾಂಕ್ಸ್ ಹೇಳ್ತೀನಿ ಅಂದ್ಕೊಂಡೆ.

ಆತನೋ ಶಾಂಘಾಯ್‌ನ ಸೇಂಟ್ ಜಾನ್ಸ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಶಿಕ್ಷಕನಾಗಿದ್ದವ. ಇದರಲ್ಲಿ ಅನುಭವ ಕಡಿಮೆ. 'ಇಂಗ್ಲೆಂಡನ್ನು ಹದಿನೈದು ವರ್ಷದಲ್ಲಿ ದಾಟಿ, ಅಮೆರಿಕದ ಹತ್ತಿರ ಬನ್ನಿ!' ಅನ್ನೋ ಕಮ್ಯುನಿಸ್ಟ್ ಘೋಷಣೆಯನ್ನು ಆತ 'ಹೀರೋಗಳನ್ನು ದಾಟಿ ಸುಂದರ ಯುವತಿಯರನ್ನು ಹಿಡೀರಿ, ಕಮ್ಯುನಿಸಮ್ ಬೇಗ ಬೆಳೆಯಲು ಸಹಕರಿಸಿ' ಎಂದು ಬದಲಿಸಿಬಿಟ್ಟಿದ್ದ !

ಅಂದಮೇಲೆ ಸಹಜವಾಗಿಯೇ ನಮ್ಮ ಕ್ಯಾಂಪಿಗೆ ಬಂದಿದ್ದ.

ಸ್ವಲ್ಪ ಹೊತ್ತಿನಲ್ಲೇ ನಾನು ಹಸುವಿನ ಹತ್ತಿರಕ್ಕೆ ಹೋದೆ. ಹಠಾತ್ತಾಗಿ ಅದು ನನ್ನ ಕಣ್ಣುಗಳನ್ನೇ ನೋಡಿಬಿಟ್ಟಿತು. ಅವುಗಳಲ್ಲಿ ಕಾಣ್ತಾ ಇದ್ದದ್ದು ಕೇವಲ ದುರಾಶೆ.

ಅದು ಸೀದಾ ಹಿಂದೆ ತಿರುಗಿ ಹುಲ್ಲುಬಯಲಿನಲ್ಲಿ ಓಡತೊಡಗಿತು. ನನ್ನ ಮೌನವೆಲ್ಲ ಮುರಿಯಿತು. ನಾನು ತತ್ವಶಾಸ್ತ್ರಜ್ಞ ಅದನ್ನು ಸುತ್ತುವರಿಯಲು ಪ್ರಯತ್ನಿಸಿದೆವು. ತೀರಾ ದೂರ ಓಡಿ ಮೇಲೆ ಅದು ವಿಶ್ರಾಂತಿಗೆ ನಿಂತು ನಮ್ಮನ್ನೇ ನೋಡಿತು. ಅದರ ಕಣ್ಣುಗಳಲ್ಲಿ ಪಂಥಾಹ್ವಾನ ಇದೆಯೋ ಎನ್ನಿಸಿತು.

ನಾವು ಓಡುವ ಶಕ್ತಿ ಕಳೆದುಕೊಂಡಿದ್ದೆವು. ಆ ಹಸುವಿನ ಕೆಚ್ಚಲನ್ನೇ ನೋಡುತ್ತ ನಿಂತೆವು. ನಮ್ಮ ಬೇಸರ ಕಳೆಯುತ್ತ ನಗು ಹುಟ್ಟಿಕೊಂಡಿತು. ಇಬ್ಬರೂ ಮನಸಾರೆ ನಕ್ಕೆವು. ನಗುತ್ತ ನಗುತ್ತ, ನೆಲಕ್ಕೆ ಬಿದ್ದು ಹೊರಳಾಡಿದೆವು. ನಗು ಕ್ರಮೇಣ ಅಳುವಿಗೆ ಬದಲಾಯ್ತು.

ನಮ್ಮ ದನಿ ನಿಂತಿತು. ನನ್ನ ಕೆನ್ನೆಯಲ್ಲಿ ಕಣ್ಣೀರು ಜಾರುತ್ತಿದೆ. ನಗುವಿನಂತೆ ಅಳುವನ್ನೂ ತಡೆಯಲಾಗಲ್ಲ. ನನ್ನ ಕಣ್ಣೀರನ್ನೂ ತಡೆಯುವುದು ಸಾಧ್ಯವೇ ಇರಲಿಲ್ಲ ಅವೆಲ್ಲ ಹಸಿರು ನೆಲಕ್ಕೆ ಬಿದ್ದು ಇಂಗಿದವು.

ಚೀನಾದ ನೆಲದಲ್ಲಿ ಬೇಕಾದಷ್ಟು ಇಂಥ ನೀರಿದೆ.

ಅವತ್ತಿನಿಂದ ನನಗೆ ಒಳ್ಳೆ ಸ್ತನಗಳಿರೋ ಮಹಿಳೆ ಕಂಡರೆ ಮೊದಲು ಲೈಂಗಿಕ ತೃಷೆ ಹುಟ್ಟಲ್ಲ. ಕಚ್ಚಿ ಹೀರಿ ಹಾಲು ಕುಡಿಯೋ ಹಸಿವು ಹುಟ್ಟುತ್ತೆ. ಇವತ್ತಿಗೂ ಹಾಗೇ.



# ಮೆಕ್ಕೆ ಜೋಳ ತಿಂದವನ ಕಥೆ

## ಆಗಸ್ಟ್ 30

**ಒಬ್ಬ ಖೈದಿ ಪರಾರಿಯಾಗಿದಾನೆ. 31ರಂದು ಅವನ ದೇಹವು ಮೆಕ್ಕೆಜೋಳದ ಹೊಲದಲ್ಲಿ ಕಂಡಿದೆ.**

ಆತ ಪರಾರಿಯಾಗಲಿಕ್ಕೆ ಯತ್ನಿಸಿದಂತೆ ಕಾಣಲಿಲ್ಲ. ಆತನ ದೇಹ ಒಡೆದುಹೋಗಿ ಸತ್ತಿದ್ದಾನೆ. ಸಾಮಾನ್ಯ ಮನುಷ್ಯರಿಗೆ ಆತ ಸತ್ತಿದ್ದು ಹೇಗೆ ಎಂದು ಅರ್ಥವಾಗಲ್ಲ. ಆಗಸ್ಟ್‌ನಲ್ಲಿ ಮೆಕ್ಕೆಜೋಳ ಬೆಳೆಯುತ್ತಿರುತ್ತೆ. ಕೆಲಸ ಮಾಡ್ತಾನೇ ಆತ ಒಂದು ಜೋಳದ ತೆನೆ ಕಿತ್ತು ತಿಂದ. ಆಮೇಲೆ ಮತ್ತೊಂದು ಬೆಳೆದ ತೆನೆ. ಆಮೇಲೆ ಇನ್ನೊಂದು. ಹೀಗೇ ಇಪ್ಪತ್ತು ತೆನೆಗಳನ್ನು ತಿಂದು ಮುಗಿಸಿದ.

ಆತನ ದೇಹ ಕ್ಯಾಂಪಿಗೆ ಬಂದಾಗ ಅವನ ಅಂಗಿ, ಪ್ಯಾಂಟುಗಳು ಚಿಂದಿಚಿಂದಿಯಾಗಿದ್ದವು. ಹೊಟ್ಟೆ ಬಿರಿದುಹೋಗಿರೋ ನೆಲಗಪ್ಪೆಯ ಹಾಗೆ ಕಾಣ್ತಿದ್ದ. ಹೊಟ್ಟೆ ಎಷ್ಟು ಬಿರಿದಿತ್ತು ಅಂದ್ರೆ ಅವನನ್ನು ಹೊತ್ತು ತಂದ ಗಾಡಿಯ ಹಿಂಭಾಗದಲ್ಲಿ ಅವನೊಬ್ಬನೇ ತುಂಬಿಹೋಗಿದ್ದ.

ತಂಡನಾಯಕ ಪ್ರಕಟಿಸಿದ :'ಅವನನ್ನು ಕಣದಲ್ಲಿ ಇಟ್ಟು ಪ್ರದರ್ಶನ ಮಾಡೋದ? ಖಂಡಿತ

ಇಲ್ಲ. ಇದೇ ಗಾಡೀಲಿ ಅವನನ್ನು ನಾಳೆ ಸೀದಾ ಸ್ಮಶಾನಕ್ಕೆ ತಗೊಂಡು ಹೋಗು.'

ಸಂಜೆ ನಾನು ಆ ಗಾಡಿ ಹೊಡೆದ ಖೈದಿಯನ್ನು ವಿಚಾರಿಸಿದೆ. 'ಎಷ್ಟು ಕೊಳೆತಿತ್ತು ದೇಹ ಅಂದ್ರೆ ನೆನೆಸಿಕೊಂಡ್ರೆ ವಾಂತಿ ಬರುತ್ತೆ. ಹಸಿ ಮೆಕ್ಕೆಜೋಳಾನ ನೀನು ಹಾಗೇ ತಿಂದ್ರೆ ಅದು ಒಳಗೇ ಹುಳಿಯುತ್ತೆ. ಅದು ಹಾಗೇ ಉಬ್ಬುತ್ತೆ. ಈ ಸರಳ ಸತ್ಯವೂ ಅವನಿಗೆ ಗೊತ್ತಿರಲಿಲ್ಲ. ಮತ್ತೆ ಈತ ಪುಸ್ತಕ ಓದಿದಾನಂತೆ... ಯಾರು ಹೇಳ್ತಾರೆ? ನಾನು ಅವನನ್ನು ಹುಡುಕಲು ಹೋದಾಗ ಇಪ್ಪತ್ತು ದಂಟುಗಳು ಸಿಕ್ಕಿದವು. ಮಹಾರಾಯ ಒಂದೂ ಕಾಳು ಬಿಡದೆ ತಿಂದಿದಾನೆ....'

'ಅವನಿಗೆ ಪರಾರಿ ಆಗಬೇಕು ಅಂತಿರ್ಲಿಲ್ಲ. ಆತ ಹಾಗೇ ತಿಂತಾ ತಿಂತಾ ಹೋದವ ವಾಪಸು ಬರಲಿಕ್ಕೆ ಹೊರಟಿದ್ದ. ಅಷ್ಟು ಹೊತ್ತಿಗೆ ಅವನ ಹೊಟ್ಟೆ ಉಬ್ಬಲಿಕ್ಕೆ ಶುರು ಆಗಿತ್ತು. ಬಹುಶಃ ಸಾಯೋವಾಗ ಅವನಿಗೆ ನರಕಯಾತನೆ ಆಗಿರ್ಬೇಕು. ಯಾಕೆ ಗೊತ್ತ? ಆತ ಅಲ್ಲಿ ಬಿದ್ದು ಹೊರಳಾಡಿದ ಹೊಡೆತಕ್ಕೆ ಜೋಳದ ಗಿಡಗಳೆಲ್ಲ ಹಾಳಾಗಿವೆ.'

ಆ ಕ್ಷುಲ್ಲಕ ರೈತನಿಗೆ ಮೆಕ್ಕೆಜೋಳವನ್ನು ಹಾಗೆ ಹಸೀ ಹಸೀ ತುಂಬಾ ತಿನ್ನಬಾರದು ಅನ್ನೋ ಸತ್ಯ ಗೊತ್ತಿದೆ. ಆದ್ರೆ ಪುಸ್ತಕ ಓದಿದ್ದ ಆ ಖೈದಿಗೆ ಇದು ಗೊತ್ತಿರ್ಲಿಲ್ಲ. ಅವನೂ ನನ್ನ ಥರ ಶಾಲಾ ಶಿಕ್ಷಕನಾಗಿದ್ದವ.

ಹಾಗಾದ್ರೆ ಆತ ಕ್ಯಾಂಪಿಗೆ ಬಂದಿದ್ದಾದರೂ ಯಾಕೆ? ಉಹು. ಆತ ಬಾಯಿ ಬಿಡ್ತಿರಲಿಲ್ಲ. 'ಹೇಳಲ್ಲ! ಹಾಗೆ ಹೇಳಿದ್ರೆ ನಾನು ಪ್ರತಿಕ್ರಾಂತಿಕಾರಿ ಹೇಳಿಕೆ ಕೊಟ್ಟಂತಾಗುತ್ತೆ' ಅಂತಿದ್ದ.

ಯಾವಾಗಲೂ ಆತ ಒಂದು ಹರಿದುಹೋಗಿದ್ದ ಡಿಕ್ಷನರಿ ಹಿಡಿದುಕೊಂಡು ಕೆಲಸಕ್ಕೆ ಬರ್ತಿದ್ದ. ನನಗೂ ಓದುವ ಚಟ ಇದ್ದದ್ದು ಗೊತ್ತಿದ್ರಿಂದ ಆತ ತನ್ನನ್ನು ಅನುಸರಿಸಲಿಕ್ಕೆ ಹೇಳ್ತಿದ್ದ. 'ಬೇರೆ ಏನೂ ಓದಬೇಡ ! ಓದಬಹುದಾದ್ದು ಕೇವಲ ಡಿಕ್ಷನರಿ. ಅದೇ ಅತ್ಯಂತ ಸುರಕ್ಷಿತ. ಇದರಲ್ಲಿ ಯಾವುದೇ ರಾಜಕೀಯ ಸಮಸ್ಯೆ ಇದೆ ಅಂತ ಯಾರೂ ದೂರಕ್ಕಾಗಲ್ಲ. ಇಷ್ಟಲ್ದೆ ನಿನಗೆ ಓದೋದಕ್ಕೆ ಸಿಗೋ ಸಮಯವೂ ಅಷ್ಟಕ್ಕಷ್ಟೆ. ಡಿಕ್ಷನರಿಯನ್ನು ನೀನು ಎಲ್ಲಿಂದ ಬೇಕಾದ್ರೂ ಓದಲಿಕ್ಕೆ ಶುರು ಮಾಡಿ ಎಲ್ಲಿಗೆ ಬೇಕಾದ್ರೂ ನಿಲ್ಲಿಸಬಹುದು!'

ಎಂಥ ಒಳ್ಳೆ ಪಾಠ! ಡಿಕ್ಷನರಿಯಲ್ಲಿ ಯಾವುದೇ ಕಥೆ ಇಲ್ಲ. ಓದುಗ ಎಲ್ಲೂ ಕಷ್ಟ ಪಡಬೇಕಿಲ್ಲ. ಓದದೇ ಕೆಳಗಿಡಕ್ಕಾಗಲ್ಲ ಅನ್ನೋ ವಾಂಛೆಯನ್ನೂ ಹುಟ್ಟಿಸಲ್ಲ. ಆತ ಯಾವಾಗ್ಲೂ ಅದನ್ನೇ ಮೌನವಾಗಿ ಓದ್ತಿದ್ದ.

ಆ ಡಿಕ್ಷನರಿಯಲ್ಲಿ ಮೆಕ್ಕೆಜೋಳವನ್ನು ಬೇಯಿಸದೆ ತುಂಬಾ ತಿನ್ನಕ್ಕಾಗಲ್ಲ ಅನ್ನೋ ವಿವರ ಮಾತ್ರ ಇರಲಿಲ್ಲ. ತಾನು ಹೇಗೆ ಸತ್ತೆ ಅಂತ ಅವನಿಗೆ ಬಹುಶಃ ಅಚ್ಚರಿಯಾಗಿರಬೇಕು.

ಆ ರಾತ್ರಿ ನನಗೆ ಕನಸು. ಅವನ ಕಣ್ಣುಗಳು ನನ್ನನ್ನು ಪ್ರಶ್ನಿಸುತ್ತಿವೆ. ಹಿನ್ನೆಲೆಯಲ್ಲಿ ಕಾಣ್ತಾ ಇರೋದು ಆ ಜೋಳದ ಹೊಲವೆ?

ಆದ್ರೆ ಸೂ ಜಿಯಾವೋಸೂಗೆ ಹಾಗೆ ಕದ್ದು ತಿನ್ನೋ ಅವಕಾಶ ಸಿಗಲಿಲ್ಲ. ಕೆಲಸ ಮಾಡೋವಾಗ ರಸ್ತೆಯಲ್ಲಿ ಸಿಕ್ಕಿದ ಜೋಳದ ದಂಟನ್ನೇ ತಿಂತಿದ್ದವ ತಂಡನಾಯಕನಿಗೆ

ಸಿಕ್ಕಿಬಿದ್ದ. ಆದ್ರೆ ತಿನ್ನೋದನ್ನು ನಿಲ್ಲಿಸಲಿಲ್ಲ. ಬೇಗ ಬೇಗ ಜಗಿದ. ಅವನ ಬಾಯಿಯ ಬದಿಗಳಲ್ಲಿ ಜೊಲ್ಲು ಸುರಿಯುತ್ತಿತ್ತು.

ತಂಡನಾಯಕ ತನ್ನ ಹಗ್ಗವನ್ನು ಬೀಸಿದ ಅವನಿಗೆ ಹೊಡೆದ. ಆದ್ರೂ ತಿನ್ನೋದನ್ನು ನಿಲ್ಲಿಸಲಿಲ್ಲ. ನಾಯಕ ಹೊಡೆಯುತ್ತಲೇ ಇದ್ದ. ಕೈಯಿಂದ ರಕ್ತ ಸುರೀತಿದೆ. ಸೂ ನಿಲ್ಲಿಸಲಿಲ್ಲ. ಜಗಿದೇ ಜಗಿದ. ಆತನಿಗೆ ನೋವೇ ಆದಂತಿಲ್ಲ. ಇಡೀ ತೆನೆ ತಿಂದಮೇಲೆ ದಂಟನ್ನು ಎಸೆದು ಬಾಯಿಯನ್ನು ನಾಲಿಗೆಯಿಂದಲೇ ಒರೆಸಿಕೊಂಡ. ಅವನ ಗಾಯಗಳಿಂದ ರಕ್ತ ಸುರೀತಲೇ ಇದೆ.

ಕೆಲಸ ಮುಗಿದ ಮೇಲೆ ಅವನನ್ನು ಫೋಟೋಗ್ರಾಫ್ ಮಾಡಲಾಯಿತು.

ಖೈದಿಯನ್ನು ತಲೆಕೆಳಗು ಮಾಡಿ ಕಂಬಕ್ಕೆ ಬಿಗಿಯಾಗಿ ಕಟ್ಟಿ 75 ಡಿಗ್ರಿ ಕೋನದಲ್ಲಿ ನಾಲೆಯ ಮೇಲೆ ನೇತುಹಾಕುವುದು – ಇದು ಫೋಟೋಗ್ರಾಫ್‌ಗೆ ಒಂದು ಚಿಕ್ಕ ಉದಾಹರಣೆ ಅಷ್ಟೆ. ಅಥವಾ ಮೇಲಂಗಿಯನ್ನು ಬಿಚ್ಚಿ ಮರಕ್ಕೆ ಕಟ್ಟಿಹಾಕಿ ಸೊಳ್ಳೆ ಕಡಿಯೋದಕ್ಕೆ ಬಿಡುವುದು. ಅರೆ ಇದೆಂಥ ಲಘುಶಿಕ್ಷೆ ಎಂದು ನೀವು ಮೂಗು ಮುರಿಯಬಹುದು. ಸೊಳ್ಳೆಗಳ ಗುಂಪು ಎಂದರೆ ಸರಿಯಲ್ಲ. ಸೊಳ್ಳೆಗಳ ಚೆಂಡುಗಳೇ ದೇಹದ ಮೇಲೆ ದಾಳಿ ಮಾಡ್ತಿದ್ದವು.

ಸೊಳ್ಳೆಗಳು ಕಚ್ಚೋಕೆ ಬಿಡೋದೇ ಸರಿಯಾದ ದಾರಿ. ಕೋಮಿಂಗ್‌ಟಾಂಗ್ ಖೈದಿಯೊಬ್ಬನನ್ನು ಹೀಗೇ ಬಿಟ್ಟಾಗ ಆತ ಸೊಳ್ಳೆಕಡಿತದಿಂದಲೇ ಸತ್ತ.

ಹಾಗೆ ಶಿಕ್ಷೆ ಅನುಭವಿಸೋವಾಗ ಅಲ್ಲಾಡಬಾರದು.ಇರೋ ಸೊಳ್ಳೆಗಳು ಹಾರಿ ಹೊಸ, ಹಸಿದ ಸೊಳ್ಳೆಗಳಿಗೆ ಜಾಗ ಮಾಡಿಕೊಟ್ಟ ಹಾಗಾಗುತ್ತೆ.

ಇದಕ್ಕೆ ಸ್ಟಿಲ್ ಫೋಟೋಗ್ರಫಿ ಅಂತ ಹೆಸರು. ಬೀಟ್‌ರೂಟ್ ಕಿತ್ತಿದ್ದಕ್ಕೆ ನನಗೆ ಅವತ್ತು ಕೊಟ್ಟ ಶಿಕ್ಷೆ ಆ್ಯಕ್ಷನ್ ಫೋಟೋಗ್ರಫಿ. ಇನ್ನೂ ಒಂದು ಆ್ಯಕ್ಷನ್ ಫೋಟೋಗ್ರಫಿ ಹೀಗೆ: ಖೈದಿಯನ್ನು ಕಟ್ಟಿ ಅವನನ್ನು ಎಲ್ಲಾ ಖೈದಿಗಳೂ ದರದರ ಎಳೆಯೋದು. 'ಸತ್ತ ನಾಯಿಯನ್ನು ಎಳೆಯೋದು' ಇದರ ಹೆಸರು.

ನನಗೆ ಮಾತ್ರ ಫೋಟೋಗ್ರಾಫ್ ಆದ ವ್ಯಕ್ತಿಯ ಬಗ್ಗೆ ತೀರಾ ಗೌರವ. ಅತನೇ ಉಳಿದೆಲ್ಲ ಜಗತ್ತಿನ ಫೋಟೋಗ್ರಾಫ್ ಮಾಡ್ತಿದಾನಾ ಅನ್ನೋ ಭಾವ ಮೂಡುತ್ತಿತ್ತು.



# ನಾನು ಪರಾರಿಯಾದ ಆ ದಿನ

## ಸೆಪ್ಟೆಂಬರ್ 1

**ಜೀವನವೆಂದರೇನೇ ಬಡತನ. ಇದರಿಂದ ಚಿಂತನಾದಾರಿದ್ರ್ಯದ ಕಾಯಿಲೆ ಹುಟ್ಟುತ್ತದೆ. ಅದೇ ಕಳಾಹೀನ ಕೆಲಸಗಳಿಂದ ಜನರ ಸ್ಫೂರ್ತಿ ಕುಗ್ಗುತ್ತಿದೆ.**

ನನ್ನ ಈ ದಿನಚರಿಯ ಟಿಪ್ಪಣಿಯ ಕೆಳಗೆ ಗೆರೆ ಹಾಕಿದಾತ ನಾನಲ್ಲ. 1970ರಲ್ಲಿ ಈ ದಿನಚರಿಯನ್ನು ಮುಟ್ಟುಗೋಲು ಹಾಕಿಕೊಂಡ ತನಿಖಾಧಿಕಾರಿ ಹಾಕಿದ್ದು. ಬಹುಶಃ ಇಲ್ಲಿನ ಜೀವನ ಖುಷಿಯಿಂದ ಕೂಡಿದೆ ಎಂದು ಆತ ಭಾವಿಸಿರಬೇಕು.

ಹಾಗೆಯೇ ಇದೇ ದಿನಚರಿಯಲ್ಲಿ ವರ್ಗಸಂಘರ್ಷವನ್ನು ಪ್ರತಿದಿನವೂ ಬಯಲಿಗೆಳೆಯಬೇಕು ಎಂದು ಬರೆದಿದ್ದೆ. ಹೀಗೆ ಬರೆದಿದ್ದಕ್ಕೆ ನನಗೆ ಈಗಲೂ ಭಯವಿದೆ.

ಮೊನ್ನೆ ಹೀಗಾಯ್ತು. ಬುದ್ಧಿಜೀವಿಯೊಬ್ಬ ಇಲಿಯನ್ನು ಬೇಯಿಸ್ತಾ ಇದ್ದಾಗ ಸಿಕ್ಕಿಬಿದ್ದ. ಅವನ ಆ ಮಸಿಹಿಡಿದ ಮಡಕೆಯನ್ನು ತಂಡನಾಯಕ ಕಸಿದುಕೊಂಡ. ಕೂಡಲೇ ಸಭೆಗೆ ಕರೆ. ಇಲಿ ಮಾಂಸವನ್ನು ತೋರಿಸುತ್ತ ಉಪನ್ಯಾಸ ಶುರು ಮಾಡಿದ.

‘ಬಹುಶಃ ನಿಮಗ್ಯಾರಿಗೂ ಇವೆಲ್ಲ ಅರ್ಥವಾಗಲ್ಲ. ಈ ಕ್ಷಣದಲ್ಲಿ ಅಧ್ಯಕ್ಷ ಮಾವೋ ಸಹ ಇಲಿಮಾಂಸ ತಿಂತಾ ಇಲ್ಲ. ನಮ್ಮ ಹಾಗೇ ಅವನೂ ಕಷ್ಟದ ದಿನಗಳನ್ನು ಅನುಭವಿಸ್ತಿದಾನೆ. ಆದರೆ ಈತನನ್ನು ನೋಡಿ ! ಎಲ್ರೂ ಇವನನ್ನು ಸರಿಯಾಗಿ ಟೀಕೆ ಮಾಡಿ !!’

ಇಲಿ ಮಾಂಸ ಹೊರಗೆ ಬಿತ್ತು. ಮಡಕೆ ಮುಟ್ಟುಗೋಲಾಯಿತು. ಎಲ್ಲರ ನಡುವೆ ಈ ಬುದ್ಧಿಜೀವಿ ಕುಳಿತಿದ್ದ. ತಲೆ ತಗ್ಗಿಸಿದ ದೇಹ. ಅವನ ಕಣ್ಣಿನಲ್ಲಿ ನೀರಹನಿಗಳು ಹೊಳೆಯುತ್ತಿದ್ದವು. ಅವನಿಗೆ ಇಲಿ ಮಾಂಸ ತಿನ್ನಕ್ಕಾಗಲಿಲ್ಲ ಎಂಬ ಬೇಸರವೋ, ಅಧ್ಯಕ್ಷ ಮಾವೋನನ್ನು ಅನುಸರಿಸಲಾಗದ ಬೇಸರವೋ ತಿಳಿಯಲಿಲ್ಲ.

31 ಆಗಸ್ಟ್. ಫಾಂಗ್ ಐಹುವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಎಂದು ಬರೆದಿದ್ದೇನೆ. ಆದರೆ ನಿಜವಾಗ್ಯೂ ಹಾಗೆ ಪರಾರಿಯಾಗೋದಕ್ಕೆ ಯತ್ನಿಸಿದವ ನಾನೇ! ಈ ಹಿಂದೆ ನಾನು ಒಮ್ಮೆ ಓಡಿಹೋಗಲು ಯತ್ನಿಸಿ ವಾಪಾಸಾಗಿದ್ದೆ. ಆದರೆ ನನ್ನ ಉದಾಹರಣೆಯನ್ನು ಅನುಸರಿಸಿ ಓಡಿದವರು ಸಾಮಾನ್ಯವಾಗಿ ವಾಪಸು ಬರುತ್ತಿದ್ದರು. ಸ್ವಯಂಟೀಕೆಯ ವಾಕ್ಯಗಳನ್ನು ಬರೆಯುತ್ತಿದ್ದರು. ಕೆಲವರಂತೂ ಮೊದಲೇ ಈ ವಾಕ್ಯಗಳನ್ನು ಬರೆದು ಪರಾರಿಯಾಗಿದ್ದೂ ಇದೆ.

ಇಲ್ಲಿ ನಮಗೆ ತಪ್ಪಿಸಿಕೊಳ್ಳುವುದು ಅಂಥಾ ಸುಲಭವೇನೂ ಅಲ್ಲ. ನಮ್ಮ ತಂಡಕ್ಕೆ ನಾಯಕನಂತೂ ಇರ್‍ತಾನೆ ಅಂತ ನಿಮಗೆ ಗೊತ್ತಲ್ಲ... ನಾವೆಲ್ಲರೂ ಪರಸ್ಪರ ಪತ್ತೇದಾರಿ ನಡೆಸುತ್ತಿದ್ದೆವು. ಹಾಗೆಯೇ ಎಲ್ಲರ ಚಿಂತನೆಗಳನ್ನೂ ಬಾಚುತ್ತಿದ್ದೆವು... ಕೂದಲಿನಲ್ಲಿ ಹೇನುಗಳನ್ನು ಬಾಚುವ ಹಾಗೆ ಅಂದ್ಕೊಳ್ಳಿ. ಕೆಟ್ಟ ಯೋಚನೆಗಳನ್ನು ಯಾವಾಗಲೂ ತೊಳೆದೇಬಿಡಬೇಕು ತಾನೆ?

ಸರಿಯಾಗಿ ಒಂದು ವರ್ಷದ ಕೆಳಗೆ ತುಂಬಾ ಜನ ಸಾಯ್ತಾ ಇದ್ದರು. ನಾನು ಸಾಯ್ತೇನೋ ಇಲ್ಲವೋ ಎಂಬ ಪ್ರಶ್ನೆಯೇ ನನಗೆ ಮುಖ್ಯವಾಗಿತ್ತು. ಒಂದು ದಿನ ಎಲ್ಲರೂ ಕೆಲಸಕ್ಕೆ ಹೋದಾಗ ನಾನು ನನ್ನ ಕಾಂಗ್‌ನಲ್ಲೇ ಕೂತಿದ್ದೆ. ಯಾರಿಗೂ ಇದು ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತು ನನಗೇ ಗಲಿಬಿಲಿ. ಇಲ್ಲೇ ಹೊರಳಾಡಬೇಕಾ ಅಥವಾ ಮುಖ್ಯತಂಡವನ್ನು ಅನುಸರಿಸಬೇಕಾ?

ಎದ್ದು ಸುತ್ತಲೂ ನೋಡಿದೆ. ಎಲ್ಲೆಲ್ಲೂ ಖೈದಿಗಳ ಚಿಂದಿ ಹಾಸಿಗೆಗಳು. ಆ ಪ್ರಖರ ಸೂರ್ಯನ ಬೆಳಕಲ್ಲಿ ಎಲ್ಲವೂ ತೀರಾ ಭೀಕರವಾಗಿ ಕಂಡವು. ಈ ಬ್ಯಾರಕ್‌ಗಳು ನರಕವಿದ್ದ ಹಾಗೆ ಅನ್ನಿಸಿತು. ನಾನು ನಿಧಾನವಾಗಿ ಎದ್ದೆ. ನನ್ನ ತಲೆದಿಂಬಾಗಿ ಬಳಸುತ್ತಿದ್ದ ಹೆಚ್ಚುವರಿ ಪ್ಯಾಂಟುಗಳನ್ನೂ ತೆಗೆದುಕೊಂಡೆ. ಬಾಗಿಲಿನಿಂದ ಹೊರನಡೆದೆ.

ಸೀದಾ ಮುಖ್ಯದ್ವಾರ ದಾಟಿದೆ. ಹಾಗೇ ಕಾರ್ಮಿಕ ಶಿಬಿರದ ಗಡಿಗಳನ್ನೂ ದಾಟಿದೆ. ಎದೆಗೆ ಪ್ಯಾಂಟುಗಳನ್ನು ಒತ್ತಿಕೊಂಡು ಸ್ಥಳೀಯ ಜನರ ಜೊತೆಗೆ ನಡೆಯಲಾರಂಭಿಸಿದೆ.

ಇದೇ ಸ್ವಾತಂತ್ರ್ಯ. ನಾನು ಮುಕ್ತ ! ಸ್ವತಂತ್ರ !!

ಯಾರೂ ನನ್ನನ್ನು ತಡೆಯಲಿಲ್ಲ. ಅಲ್ಲಿ ಒಬ್ಬ ಭದ್ರತಾ ಸಿಬ್ಬಂದಿ ಬಂದೂಕು ಹಿಡಿದು ನಿಂತಿದ್ದ ನಿಜ. ಆದರೆ ಹೀಗೆ ಸಾರ್ವಜನಿಕವಾಗಿ ಯಾರಾದ್ರೂ ಪರಾರಿಯಾಗ್ತಾರಾ?

ಒಂದು ಜೊತೆ ಪ್ಯಾಂಟುಗಳನ್ನು ಎದೆಗೆ ಅವುಚಿಕೊಂಡ ಈ ವ್ಯಕ್ತಿ ತಪ್ಪಿಸಿಕೊಳ್ಳಲಿಕ್ಕೆ ಖಂಡಿತ ಹುಚ್ಚನಾಗಿರಬೇಕು!

ನನ್ನ ಪರಾರಿ ಪೂರ್ವಯೋಜಿತವಾಗಿರಲಿಲ್ಲ. ಆದರೆ ನಾನು ಮಾತ್ರ ಮನಸ್ಸನ್ನು ಸ್ವಾತಂತ್ರ್ಯಕ್ಕೆ ತೂರಿಬಿಡಲು ನಿರ್ಧರಿಸಿದ್ದೆ. ಎಷ್ಟು ಸರಳ... ಯಾರಿಗೂ ಇಷ್ಟು ಸರಳವಾಗಿ ತಪ್ಪಿಸಿಕೊಳ್ಳಬಹುದು ಅಂತ ಗೊತ್ತಿರ್ಲಿಲ್ಲ.

ನಾನು ಮುಕ್ತ ಮನಸ್ಸಿನಿಂದ ಅಲ್ಲಿನ ಸ್ಥಳೀಕರ ಹೊಲಗಳಲ್ಲಿ ನಡೆದೆ. ನನ್ನ ಸ್ವತಂತ್ರ ಕಾಲುಗಳು ಸಹಜವಾಗೇ ಆಹಾರವನ್ನು ಅರಸತೊಡಗಿದವು. ಅಲ್ಲಿ ಕಲ್ಲಂಗಡಿ ಹಣ್ಣಿನ ಹೊಲವೊಂದು ಕಾಣುತ್ತಿದೆ. ಅದರ ಬದಿಯಲ್ಲಿ ಕಾವಲು ಕಾಯುತ್ತ ಅಜ್ಜಿಯೊಬ್ಬಳು ಚಿಕ್ಕ ಗುಡಿಸಲಿನ ಪಕ್ಕ ಕೂತಿದ್ದಾಳೆ. ಬೂಟುಗಳ ತಳವನ್ನು ಹೊಲೆಯುತ್ತಿದ್ದಾಳೆ. ನನ್ನನ್ನು ನೋಡಿ ಅವಳಿಗೆ ಅಚ್ಚರಿಯಾಗಲಿಲ್ಲ. ನಿಜ ಹೇಳಬೇಕಂದ್ರೆ ಅವಳು ನನ್ನ ಪ್ಯಾಂಟುಗಳನ್ನು ನೋಡಿ ನಕ್ಕುಬಿಟ್ಟಳು. ಅಲ್ಲಿನ ವಾಸಿಗಳಂತೂ ಈಗ ಖೈದಿಗಳನ್ನು ಸಹಜವಾಗಿ ನೋಡುವ ಸ್ಥಿತಿಗೆ ಬಂದುಬಿಟ್ಟಿದ್ದರು.

'ಮಗಾ, ಏನು ಮಾಡ್ತಿದೀಯ?' ನಾನು ಬಾಯಿ ತೆರೆಯುವ ಮುನ್ನವೇ ಅಜ್ಜಿ ಕೇಳಿದಳು. 'ನಿನ್ನ ಕೈಯಲ್ಲಿ ಏನಿದೆ ತೋರ್ಸು..'

ನಾನು ನನ್ನ ಹತ್ತಿ ಪ್ಯಾಂಟನ್ನು ತೋರಿಸಿದೆ. ಅವಳನ್ನು ನೋಡುತ್ತ ನಿಂತೆ. ಅವಳು ನಾವೆಲ್ಲ ಖೈದಿಗಳಿಗಿಂತ ತೀರಾ ಬಡವಳಂತೆ ಕಾಣಿಸಿದಳು. ಕೆಲವು ಕಾಯಿ ಕಲ್ಲಂಗಡಿಗಳನ್ನು ಬಿಟ್ಟರೆ ಅಲ್ಲಿ ತಿನ್ನುವಂಥ ಯಾವುದೇ ವಸ್ತುವೂ ಇರಲಿಲ್ಲ. ಅಜ್ಜಿ ನನ್ನ ಪ್ಯಾಂಟುಗಳನ್ನೇ ತಿರುಗಿಸಿ – ಮುರುಗಿಸಿ ನೋಡಿದಳು. ಕೊನೆಗೆ ಅವಳ ಪ್ರಶ್ನೆ ತೂರಿಬಂತು:'ಈ ಪ್ಯಾಂಟನ್ನು ನನಗೆ ಮಾರಾಟ ಮಾಡಬೇಕು ಅಂತಿದೀಯ?'

ಅವಳ ಹತ್ರ ಏನಿದೆ ಎಂದು ಕೇಳಿದೆ. ಅವಳ ತುಟಿಗಳು ಹೊಲವನ್ನೇ ತೋರಿಸಿದವು.

'ಕಲ್ಲಂಗಡಿ ಹಣ್ಣು.'

ಅವು ಇನ್ನೂ ಹಣ್ಣಾಗಿಲ್ಲ ಎಂದೆ.

'ಇಂಥ ದೊಡ್ಡ ಹೊಲದಲ್ಲಿ!?' ಆಕೆ ನಕ್ಕಳು. 'ಅವು ಹಣ್ಣಾಗಿಲ್ಲ ಅಂದ್ಕೊಂಡಿದೀಯ? ನಾನೇ ಆರಿಸಿಕೊಡ್ತೀನಿ. ನಿನ್ನ ಹೊಟ್ಟೆ ಬಿರಿದುಹೋಗೋವಷ್ಟು ಹಣ್ಣು ಆರಿಸ್ತೀನಿ.'

ಅವಳ ತಲೆಯಲ್ಲಿ ಬಿಡಿ ಬಿಡಿ ಬಿಳಿಗೂದಲುಗಳು ಹರಡಿವೆ. ಖಾಲಿ ಆಕಾಶದಲ್ಲಿ ಕಾಣೋ ಮೋಡಗಳ ಹಾಗೆ. ಅವಳ ನೀಲಿ ಅಂಗಿಯ ಮೇಲೆ ತೇಪೆಗಳು. ಆ ತೇಪೆಗಳ ಮೇಲೆ ಮತ್ತಷ್ಟು ತೇಪೆಗಳು. ಅವಳೇನಾದ್ರೂ ನನ್ನ ಬಿಳಿ ಪ್ಯಾಂಟನ್ನು ಹಾಕಿಕೊಂಡ್ರೆ ಅವಳ ಚಹರೆ ಇನ್ನಷ್ಟು ಸ್ಪಷ್ಟವಾಗುತ್ತೆ ಎನ್ನಿಸಿತು. ಆದ್ರೂ ಅವಳಲ್ಲಿ ಉತ್ಸಾಹ. 'ನಿನ್ನ ಹೊಟ್ಟೆ ಬಿರಿದುಹೋಗೋವಷ್ಟು ಹಣ್ಣು' ಅಂತಾಳೆ. ಅದು ಅಪ್ಪಟ ಪ್ರೀತಿಯ ದ್ಯೋತಕ. ಹಾಗಂದ್ರೆ ತುಂಬಾ ಚೆನ್ನಾಗಿರೋ ಹಣ್ಣನ್ನೇ ನನಗೆ ಆರಿಸಿಕೊಡ್ತೀನಿ ಅಂತ ಅರ್ಥ.

ಅವಳ ಮಾತಿನಿಂದ ನಾನು ಎಷ್ಟು ಭಾವುಕನಾದೆ ಅಂದ್ರೆ ನನ್ನ ಕಣ್ಣುಗಳು ತುಂಬಿದವು.

ಸರಿ, ಕಲ್ಲಂಗಡಿ ಹಣ್ಣಾದ್ರೆ, ಅದೇ ಇರಲಿ ಪರವಾಯಿಲ್ಲ. ಚಳಿಗಾಲದಲ್ಲಿ ಉಡೋ ವಸ್ತುವನ್ನ ಬೇಸಗೆಯ ವಸ್ತುವಿಗೆ ಬದಲಿಯಾಗಿ ವ್ಯಾಪಾರ ಮಾಡಿದ್ದು ಸರಿಯಾಗೇ ಇದೆ.

ನಾನೇನು, ಮುಂದಿನ ಚಳಿಗಾಲದಲ್ಲಿ ಜೀವಂತ ಇದ್ದೇ ಇರ್ತೀನಿ ಅನ್ನೋ ಖಾತ್ರಿಯಾದ್ರೂ ಇಲ್ಲ ಬಿಡಿ.

ನನಗೆ ಆರಿಸಲಿಕ್ಕೆ ಬರಲ್ಲ, ನಾನು ತಿನ್ನಬಹುದು ಅಷ್ಟೆ ಎಂದೆ.

ಆಕೆ ನನ್ನನ್ನು ನೋಡುತ್ತ ಮತ್ತೆ ನಕ್ಕಳು. 'ನೀನು ಯಾಕೆ ಕಾರ್ಮಿಕ ಕ್ಯಾಂಪಿನಲ್ಲಿದೀಯ?'

ಬಹುಶಃ ಕವನ ಬರೆಯೋದಕ್ಕೆ ಇರಬೇಕು ಎಂದು ನಾನು ಮನಸ್ಸಿನಲ್ಲೇ ಅಂದ್ಕೊಂಡೆ. ಹಾಗೆ ಬಾಯಿಬಿಟ್ಟು ಹೇಳಿದ್ರೆ ಅಜ್ಜಿಗೆ ನನ್ನ ಪ್ರಾಮಾಣಿಕತೆ ಬಗ್ಗೇ ಸಂಶಯ ಬರಬಹುದು ಅನ್ನಿಸಿ ಸುಮ್ಮನೆ ತಲೆ ಆಡಿಸಿದೆ. ಏನೋ ಸಮಸ್ಯೆ ಇತ್ತು ಎಂದೆ.

'ಮಗಾ, ನಿನ್ನ ತಲೆಯೇ ನಿನ್ನನ್ನು ಈ ಕ್ಯಾಂಪಿನ ಒಳಕ್ಕೆ ತಂದಿದ್ದು' ಎಂದಳು.

ಎಷ್ಟು ನಿಜ!

ಅಜ್ಜಿ ನನಗಾಗಿ ಎಷ್ಟೋ ಬಲಿತ ಹಣ್ಣುಗಳನ್ನು ಆರಿಸಿದಳು. ಹೊಲದಲ್ಲಿ ಹುದುಗಿದ ಅವಳು ಎದ್ದಾಗ ಮೈಯಲ್ಲೆಲ್ಲ ಬೆವರು ಹರಿಯುತ್ತಿತ್ತು. 'ಥತ್..' ಬೆವರೊರೆಸಿಕೊಳ್ಳಲು ಅಜ್ಜಿ ತನ್ನ ಅಂಗಿಯನ್ನೇ ಮೇಲೆತ್ತಿದಳು. ಅವಳ ಒಣಗಿದ ಸ್ತನಗಳು ಕಾಣಿಸಿದವು.

ನಾನು ಕಿರುಚಿದೆ 'ಸಾಕು! ತುಂಬಾ ತಿನ್ನಕ್ಕಾಗಲ್ಲ. ಬಾ. ವಿಶ್ರಾಂತಿ ತಗೋ.'

'ನಿಂಗೆ ತಿನ್ನೋದಕ್ಕೆ ಬೇರೇನೂ ಇಲ್ವಲ್ಲಾ ಅಂತ ನಾಚಿಕೆ ಆಗ್ತಿದೆ. ಬರೀ ಕಲ್ಲಂಗಡಿ. ಬಿಡು. ನಿನ್ನ ಹೊಟ್ಟೆಯನ್ನು ತೆರೆದು ಬೇಕಾದಷ್ಟು ತುಂಬಿಸ್ಕೋ.'

ಆಹಾ! ಎಷ್ಟು ಕಲ್ಲಂಗಡಿ ಹಣ್ಣುಗಳು... ಅವೆಲ್ಲವನ್ನೂ ಒಂದು ಗೋಣಿಚೀಲದಲ್ಲಿ ತುಂಬಿಸಿಕೊಂಡು ಒಂದು ಪೊದೆಯ ಹಿಂದೆ ಹೋದೆ. ಹಾಗೇ ಇನ್ನಷ್ಟು ಸಲ ಹೋಗಿಬಂದು ಎಲ್ಲ ಹಣ್ಣುಗಳನ್ನೂ ಪೇರಿಸಿದೆ. ಅಜ್ಜಿ ನನ್ನ ಅಂಗಿಯನ್ನು ಒಮ್ಮೆ ಎಳೆದು 'ತಿನ್ನು ಮಗಾ... ನೀನು ಇಲ್ಲೇ ತಿಂತಾ ಇರು. ಆರಾಮಾಗಿ ತಿನ್ನು. ನಾನು ಹೋಗ್ತೀನಿ' ಎಂದಳು.

ನಾನು ಮಜಾ ಅನುಭವಿಸ್ತಾ ಕೂತು ತಿನ್ನಲಿಕ್ಕೆ ಶುರು ಮಾಡಿದೆ.

ಸ್ವಲ್ಪ ತಿನ್ನೋದು, ಮತ್ತೆ ವಿರಾಮ. ಮತ್ತೆ ತಿನ್ನೋದು.ವಿರಾಮ. ಕೆಲವೊಮ್ಮೆ ಕೂತು. ಕೆಲವೊಮ್ಮೆ ಮಲಗಿ. ಅಥವಾ ಪಕ್ಕದಲ್ಲೇ ಉಚ್ಚೆ ಹೊಯ್ದು. ಮಧ್ಯಾಹ್ನದಿಂದ ಸಂಜೆವರೆಗೂ ನಾನು ಕಲ್ಲಂಗಡಿ ಹಣ್ಣನ್ನೇ ತಿಂತಾ ಇದ್ದೆ. ನನ್ನ ಹೊಟ್ಟೆ ಒಡೆದುಹೋದ್ರೂ ಪರವಾಗಿಲ್ಲ. ಒಂದೂ ಹಣ್ಣನ್ನು ತಿನ್ನದೆ ಬಿಡಬಾರದು ಅನ್ನಿಸಿತ್ತು.

ಅಜ್ಜಿ ಹೇಳಿದ್ದು ನಿಜ. ಈ ಕಲ್ಲಂಗಡಿ ಹಣ್ಣು ಯಾರಿಗೂ ನೋವು ತರಲ್ಲ. ನನ್ನ ಸುತ್ತ ಬಿದ್ದಿದ್ದು ಕಲ್ಲಂಗಡಿ ಹಣ್ಣಿನ ಎಸೆದ ಸಿಪ್ಪೆತುಂಡುಗಳು ಮತ್ತು ಉಚ್ಚೆ. ಎಲ್ಲೆಲ್ಲೂ ಹಸಿರು ತಲೆ ಇರುವೆಗಳು. ನಾನು ತುಂಬಿದ ಹೊಟ್ಟೆಯನ್ನು ಹಾಗೇ ಸವರಿಕೊಂಡೆ. ತಿನ್ನೋದಕ್ಕೆ



ಶುರು ಮಾಡಿದಾಗ ನನಗೆ ಕಲ್ಲಂಗಡಿ ಹಣ್ಣಿನ ರಸದ ರುಚಿಯೇ ಗೊತ್ತಾಗ್ಲಿಲ್ಲ. ಆಮೇಲೆ ಅವು ಸಿಹಿಯಾಗಿದ್ದವು ಎಂದು ಅನ್ನಿಸ್ತು. ತುಂಬಾ ತಿಂದಾದ ಮೇಲೆ ಮತ್ತೆ ರುಚಿ ಕಳೆದೇಹೋಯ್ತು!

ಈ ಜಗತ್ತಿನಲ್ಲಿ ಅತ್ಯಂತ ಸುಂದರವಾದ ಸಂಗತಿ ಎಂದ್ರೆ ಪುಸ್ತಕಗಳು ಹೇಳೋ ಹಾಗೆ ಸತ್ಯವನ್ನು ಹುಡುಕೋದಲ್ಲ, ಅಥವಾ ಕ್ರಿಮಿನಲ್ ಖೈದಿಗಳು ಹೇಳೋ ಹಾಗೆ ಹೆಂಗಸಿನ ಹತ್ರ ಮಲಗೋದೂ ಅಲ್ಲ.

ತುಂಬಿದ ಹೊಟ್ಟೆಯೇ ಅತ್ಯಂತ ಚೆಲುವಿನ ಸಂಗತಿ.

ಹೊಟ್ಟೆ ತುಂಬಿದ ಮೇಲೆ ಯೋಚನೆಗಳು ಆರಂಭವಾದವು. ಸೊಳ್ಳೆಗಳು ನನ್ನನ್ನು ಸುತ್ತಿವೆ. ಹಾಗೇ ಮಲಗಿದ್ರೆ ನಾನು ಫೋಟೋಗ್ರಾಫ್ ಆದವರ ಹಾಗೆ ಸತ್ತೇಹೋಗ್ತೇನೆ ಅನ್ನಿಸ್ತು. ನಿಧಾನವಾಗಿ ಎದ್ದೆ. ಮತ್ತೆ ಕಾರ್ಮಿಕ ಶಿಬಿರಕ್ಕೆ ವಾಪಸಾಗೋ ಹಾದಿ ಹಿಡಿದೆ. ದಾರಿಯುದ್ದಕ್ಕೂ ಕಂಡ ಕಂಡ ಮರದ ಬದಿಗೆ ಹೋಗಿ ಉಚ್ಚೆ ಹೊಯ್ದೆ. ಥೇಟ್ ನಾಯಿ ಥರ!

ನಾನು ಬಂದಾಗ ಇನ್ನೂ ಕೆಲಸಕ್ಕೆ ಹೋಗಿರೋರು ಮರಳಿರಲಿಲ್ಲ. ಹಾಗೇ ಮಲಗಿದೆ. ಈಗ ಇಡೀ ಬ್ಯಾರಕ್ ಒಂದು ಸ್ವರ್ಗದ ಹಾಗೆ ಕಾಣಿಸ್ತಿದೆ. ಸರಿ, ಪೆನ್ನು ಹಿಡಿದು ಸ್ವಯಂ ಟೀಕೆ ಬರೆಯಲಿಕ್ಕೆ ಶುರು ಮಾಡ್ದೆ. ಪ್ರತೀ ವಾಕ್ಯವೂ ಎಷ್ಟು ಸುಂದರವಾಗಿ ಮೂಡಿಬಂತು ಅಂದ್ರೆ.... ಸೀದಾ ಅದನ್ನು ಆಗ ಬಂದ ತಂಡನಾಯಕನಿಗೆ ಒಪ್ಪಿಸಿದೆ. ಆತ ಅದನ್ನು ನಿಧಾನವಾಗಿ ಓದಿದ. 'ದರಿದ್ರ ನನ್'ಮಗನೆ, ಬೊಗಳೆ ಬಿಡ್ತೀಯ? ಅಷ್ಟು ಹಣ್ಣು ತಿಂದಿದ್ದು ನಿಜವಾ?' ಕೇಳಿದ.

ಸರಿ, ತಂಡನಾಯಕನನ್ನು ಕರೆದುಕೊಂಡು ಹತ್ತಿರದಲ್ಲೇ ಇದ್ದ ಆ ಕಲ್ಲಂಗಡಿ ಹೊಲಕ್ಕೆ ಕರೆದುಕೊಂಡುಹೋದೆ. ಬ್ಯಾಟರಿ ಬೆಳಕು ಬಿಟ್ಟ ಆತ ನಿಜದ ದರ್ಶನ ಪಡೆದ. 'ದರಿದ್ರದವನೆ! ನಿಜವಾಗ್ಲೂ ತಿಂದಿದೀಯಲ್ಲ ಮಾರಾಯ!' ಅವನ ಮುಖದಲ್ಲಿ ಎಂಥದೋ ಗೌರವದ ಕಳೆ.

ನನಗೆ ಶಿಕ್ಷೆ ಆಗದೇ ಇರೋದನ್ನು ನೋಡಿ ಉಳಿದ ಖೈದಿಗಳೂ ದಿನಾಲೂ ಪರಾರಿಯಾಗಿ ಸಂಜೆ ವಾಪಸು ಬರೋದಕ್ಕೆ ಆರಂಭಿಸಿದರು!

ಹಳ್ಳಿಯವರಿಗೂ ಈ ಖೈದಿಗಳು ಅಂದ್ರೆ ಖುಷೀನೇ. ಅವರ ಕಥೆ ಕೇಳೋದು ಅಂದ್ರ ಸಂತೋಷದ ಸಂಗತಿ. ಆಗ ಚೀನಾದಲ್ಲಿ ಗಂಭೀರ ಸಂಪಾದಕೀಯಗಳೇ ಮನರಂಜನೆಯ ವಸ್ತುಗಳು. ಸ್ವಲ್ಪ ತರಕಾರಿ ಬಾಯಿಗೆ ಬಿದ್ರೆ ಸಾಕು, ಈ ಖೈದಿಗಳು ಸ್ವರ್ಗದಿಂದ ಹೂವಿನ ಮಳೆ ಬಿತ್ತೇನೋ ಅನ್ನೋ ಹಾಗೆ ತಮ್ಮ ಅಪರಾಧದ ಕಥೆಗಳನ್ನು ಬಿಚ್ತಾರೆ. ಅವರ ಉತ್ಪ್ರೇಕ್ಷೆಗಳೂ ತಮಾಷೆಯಾಗಿಯೂ, ಕ್ರೂರವಾಗಿಯೂ ಕಾಣುತ್ತವೆ. ಸ್ಥಳೀಯರು ಯಾಕೆ ಹೀಗೆ ಖುಷಿಯಾಗಿರಬಾರ್ದು ಹೇಳಿ?

ಅವತ್ತಿನ ನಂತರ ನಾನು ಕಲ್ಲಂಗಡಿ ಹಣ್ಣನ್ನೇ ಮುಟ್ಟಲಿಲ್ಲ. ಹಾಗೆ ತಿನ್ನೋದಕ್ಕೆ ಶುರು ಮಾಡಿದ ಕೂಡಲೇ ಹೊಟ್ಟೆ ನೋವು ಶುರು.



# ರಕ್ತದ ಬಣ್ಣ ಗೊತ್ತೆ ಹುಡುಗಿ?

ತ್ರಿರಾ ವಿಚಿತ್ರವಾದ ನಡತೆ ತೋರುವ ವ್ಯಕ್ತಿಗೆ ಸರಿಯಾಗಿ ಯೋಚಿಸುವ ಶಕ್ತಿಯೇ ಇರಲ್ಲ ಎನ್ನಬಹುದು. ಹಾಗಂತ ಕಾರ್ಮಿಕ ಸುಧಾರಣೆಯು ಎಲ್ಲಾ ಮಾನವಸಹಜ ಭಾವಗಳನ್ನು ನಾಶ ಮಾಡಲ್ಲ. ಕ್ಯಾಂಪಿನಲ್ಲಿರೋ ಖೈದಿಗಳ ಬಗ್ಗೆ ಕುಟುಂಬದವರಿಗೆ ಪ್ರೀತಿ ಇದ್ದೇ ಇರುತ್ತೆ.

ಹಾಗೆ ಭಾವನೆಗಳನ್ನು ನಾಶ ಮಾಡೋದು ಹಸಿವು.

ನನ್ನ ಕ್ಯಾಂಪಿನಲ್ಲಿ ಇದ್ದ ಯಾವುದೇ ಖೈದಿಯು ತನ್ನ ಕುಟುಂಬದ ಬಗ್ಗೆ ಮಾತಾಡಿದ್ದನ್ನು ನಾನು ಕೇಳೇ ಇಲ್ಲ. ಮೆಕ್ಕೆಜೋಳದ ದಂಟು ತಿಂದು ಸತ್ತವನು ತನ್ನ ತಂದೆ ಬಗ್ಗೆ ಮಾತಾಡಿದ್ದನ್ನು ಯಾರೂ ಲಕ್ಷ್ಯ ಕೊಟ್ಟು ಕೇಳಿರಲಿಲ್ಲ.

ವಿಶ್ರಾಂತಿಯ ಹೊತ್ತಿನಲ್ಲಿ ನಾವು ಅಕಸ್ಮಾತ್ ತಲೆತಗ್ಗಿಸಿ ನಿದ್ದೆ ಮಾಡಲು ಯತ್ನಿಸ್ತಾ ಇರಲಿಲ್ಲ ಅಂದ್ರೆ ಖಾಲಿನೋಟದಿಂದ ಛಾವಣಿಯನ್ನೇ ನೋಡ್ತಾ ಇದ್ವಿ. ಯಾರೂ ಮನೆಯವರ ಚಿತ್ರ ಇಟ್ಕೊಂಡಿರಲಿಲ್ಲ. ಮನೆ, ಕುಟುಂಬ ಅಂದ್ರೆ ಊಟ ತರುವ ಘಟಕ ಅಷ್ಟೆ. ಸರಬರಾಜಿನ ಮೂಲ. ಅದು ಬಿಟ್ಟರೆ ಮನೆ ಬಗ್ಗೆ ಯಾರಲ್ಲೂ ಭಾವವೇ ಇಲ್ಲ.

ನಾನೂ ಹಾಗೇ ಇದ್ದೆ. ನಾನು ಅಮ್ಮನಿಗೆ ಬರೆದ ಕಾಗದ ನೋಡಿದೀರ? ಅದು ದಿನಸಿ

ಅಂಗಡಿಗೆ ಕೊಡೋ ವಸ್ತುಗಳ ಪಟ್ಟಿ ಥರ ಬಿಡಿಬಿಡಿ ಪದಗಳಿಂದ ತುಂಬಿರ್ತಿತ್ತು. ಹೆಚ್ಚು ಬರೆಯೋದಕ್ಕೆ ಹೋದರೆ ನನಗೆ ಬೇಕಾದ ಆಹಾರವೇ ನೆನಪಾಗ್ತಿತ್ತು. ಕಣ್ಣೀರಂತೂ ಪೂರಾ ಇಂಗಿಹೋಗಿತ್ತು. ನಾನು ಬರೆದದ್ದೆಲ್ಲ ಅಂಥ ಬೇಡಿಕೆಯ ಪಟ್ಟಿಗಳನ್ನು ಮಾತ್ರ.

ಸೆಪ್ಟೆಂಬರ್ 4ರ ಆ ದಿನ ನನಗೆ ದುಃಸ್ವಪ್ನ. ಅರೆ, ಅಮ್ಮನಿಗೆ ನಾನೆಷ್ಟು ಕಷ್ಟ ಕೊಡ್ತಿದೀನಿ... ನಾನೇನು ತಿನ್ನೋ ಯಂತ್ರವೆ? ನಾನು ಆ ಹೆಣ್ಣಿಗೆ ಹುಟ್ಟಿದ ಜೀವ ಅಲ್ವೆ?

ನನ್ನ ದಿನಚರಿಯಲ್ಲಿ ಈ ಮಾತುಗಳನ್ನು ಬರೆದಿಲ್ಲ. ಪರಾರಿ, ಹಸಿರು ತಿನ್ನೋದು, ಪ್ರತಿಕ್ರಾಂತಿ ಹೇಳಿಕೆ ನೀಡೋದು, ಕಳ್ಳತನ, ಕೆಲಸದಲ್ಲಿ ಸೋಮಾರಿತನ, ಸತ್ತ ನಾಯಿ ಥರ ಮಲಗೋದು... ಇವೆಲ್ಲ ವ್ಯವಸ್ಥೆಯ ವಿರುದ್ಧದ ನಡತೆಗಳು.

ಹಾ, ಸೆಪ್ಟೆಂಬರ್ 4ರಂದು ನಡೆದ ಘಟನೆಯನ್ನು ನಾನು ನಿಮಗೆ ಹೇಳ್ಲೇಬೇಕು.

ನಾವು 9ನೇ ಕ್ರಮಸಂಖ್ಯೆಯ ನಾಲೆಯ ಪೂರ್ವಬದಿಯಲ್ಲಿ ಹಸಿರುಗೊಬ್ಬರವನ್ನು ಕತ್ತರಿಸ್ತಿದ್ವಿ. ಹಸಿರುಗೊಬ್ಬರ ಅಂದ್ರೆ ಹಸಿರು ಹುಲ್ಲು. ಅದನ್ನು ರಾಸುಗಳಿಗೆ ಕೊಟ್ಟರೆ ಅದೇ ಆಹಾರ. ಅದನ್ನು ಕೊಳೆಯಲು ಬಿಟ್ಟರೆ ಗೊಬ್ಬರ. ಸೆಪ್ಟೆಂಬರ್ ಹೊತ್ತಿಗೆ ಈ ಹಸಿರುಹುಲ್ಲು ಆಳೆತ್ತರ ಬೆಳೆದಿರುತ್ತೆ.

ನೂರಕ್ಕೂ ಹೆಚ್ಚು ಖೈದಿಗಳು ನಾಲೆಯ ಗುಂಟ ಕುಡುಗೋಲು ಹಿಡಿದು ನಡೆಯುತ್ತಿದ್ದಾರೆ. ಎಲ್ಲರಿಗೂ ಈ ಕೆಲಸ ಇಷ್ಟ. ತಂಡನಾಯಕನ ಕಣ್ಣಿನಿಂದ ತಪ್ಪಿಸಿಕೊಂಡಿರಬಹುದು! ನೆಲಗಪ್ಪೆ ಬೇಕಾದವರು ಅದನ್ನೇ ಹಿಡಿದು ತಿನ್ನಬಹುದು, ಮೀನು ಬೇಕಾದವರು ಅದಕ್ಕೂ ಗಾಳ ಹಾಕಬಹುದು. ಸೂರ್ಯಕಾಂತಿ ಬೀಜ ಕದಿಯುವವರೂ ಪುಷ್ಕಳವಾಗಿ ಅದನ್ನು ತಿನ್ನಬಹುದು. ಹುಲ್ಲಿನ ಮರೆಯಲ್ಲಿಯೇ ಆಚೆ ಹೋಗಿ ಗೆಣಸಿನ ಹೊಲಕ್ಕೆ ನುಗ್ಗಿ ಗೆಣಸು ಕದಿಯೋರೂ ಇದ್ದಾರೆ ಅನ್ನಿ!

ನೂರು ಕಾರ್ಮಿಕರು ಇದ್ದುದರಿಂದ ಅವರೇ ಸ್ವಯಂ ಪ್ರಜ್ಞೆಯಿಂದ ತಮ್ಮನ್ನು ತಾವೇ ಕಾಯ್ದುಕೊಳ್ಳಬೇಕಿತ್ತು. ಆದರೆ ಅಷ್ಟು ಪ್ರಜ್ಞೆ ಇದ್ದರೆ ತಾನೆ! ಕೆಲವೇ ಗೆಣಸಿನ ಗಡ್ಡೆ ಇದ್ದವರು ಶಿಬಿರದಲ್ಲಿ ಯಶಸ್ಸು ಸಾಧಿಸಬಹುದು. ಮಾವೋ ಹೇಳಿಲ್ಲವೆ, ಒಂದು ಮುಷ್ಟಿ ಧಾನ್ಯ ಇದ್ರೆ ಸಾಕು, ಉಳಿದದ್ದೆಲ್ಲ ಸಿಗುತ್ತೆ ಅಂತ?

ಮಧ್ಯಾಹ್ನ ಮೂರೋ ನಾಲ್ಕೋ ಗಂಟೆಯಾಗಿದೆ. ನಾಲೆಯ ಮೇಲೆ ಮೂರು ಜನ ನಡೆದುಕೊಂಡು ಬರ್ತಿದಾರೆ. ಒಬ್ಬ ಅಂಚೆಯವ. ಜೊತೆಗೆ ಒಬ್ಬ ಹೆಂಗಸು, ಐದು ವರ್ಷದ ಹೆಣ್ಣು ಮಗು; ನಾವು ಹುಲ್ಲು ಕತ್ತರಿಸ್ತಿದ್ದಲ್ಲೇ ಮೇಲೆ ಬಂದು ನಿಂತರು. ಆ ಯುವತಿ ತನ್ನ ಕಪ್ಪು ಚೀಲದಿಂದ ಬಾಚಣಿಗೆ ತೆಗೆದದ್ದು ಕಂಡಿತು. ಹಾಗೇ ಅವಳು ಮಗುವಿನ ಉಡುಗೆಯನ್ನು ಕೊಡವಿ ಕೂದಲು ಬಾಚಿದಳು. ಅವಳ ಶೂಗಳನ್ನು ಒರೆಸಿದಳು. ಸೂರ್ಯನ ಪ್ರಖರ ಬೆಳಕಿನಲ್ಲಿ ಅವಳ ಮೈಯಿಂದ ಎದ್ದ ಧೂಳು ಸ್ಪಷ್ಟವಾಗಿ ಕಂಡಿತು. ಮಗಳನ್ನು ಸರಿಮಾಡಿದ ಮೇಲೆ ಯುವತಿ ಎದ್ದುನಿಂತಳು. ತನ್ನ ತಲೆಗೂದಲನ್ನು ಸರಿಮಾಡಿಕೊಳ್ಳುತ್ತ ಅವಳು ಎರಡೂ ಕೈಗಳನ್ನು ಎತ್ತಿದ್ದನ್ನು ನಾನು ಜೀವನದಲ್ಲೇ ಮರೆಯಲಾರೆ. ಎಂಥ ಅಪ್ಪಟ ಹೆಣ್ತನ ಅನ್ನಿಸಿತು. ಹಾಗೆಯೇ ತಲೆ ಬಾಚಿಕೊಳ್ಳುತ್ತ

ಅಂಚೆಯವನತ್ತ ತಿರುಗಿದಳು. ಅವಳು ಪಿಯಾನೋ ಬಾರಿಸೋ ಹಾಗೆ ತಲೆಗೂದಲನ್ನು ಬಾಚಣಿಗೆಯಿಂದ ಸವರ್ತಿದಾಳೆ. ಹುಲ್ಲಿನ ನಡುವಿನಿಂದ ನೋಡಿದರೆ ಅವಳ ಸೊಂಟ ಗಾಳಿಗೆ ಮೆಲ್ಲಗೆ ತೊನೆಯುತ್ತಿದೆ ಅನ್ನಿಸುತ್ತಿದೆ.

ಬಹುಶಃ ನನ್ನ ಹತ್ರ ತುಂಬಾ ಗೆಣಸು ಇದ್ದಿದ್ದಕ್ಕೇ ಈ ದೃಶ್ಯ ನನಗೆ ಖುಷಿ ಕೊಟ್ಟಿರಬೇಕು ಅನ್ಸುತ್ತೆ.

ಆದರೆ ಆ ಕ್ಷಣದಲ್ಲಿ ಅವಳ ಆ ತಲೆಬಾಚುವ ದೃಶ್ಯವನ್ನೇ ನೋಡುತ್ತಿದ್ದ ನನಗೆ ಈಗ ಏನೋ ಭೀಕರ ಘಟನೆ ನಡೆಯುತ್ತೆ ಅನ್ನಿಸಿಬಿಟ್ಟಿತು.

ಪ್ರತೀ ಸೌಂದರ್ಯದ ಹಿಂದೆಯೂ ಯಾವುದೋ ದೆವ್ವ ಅಡಗಿರುತ್ತೆ ಅಂತಾರಲ್ವ....

ಆಕೆ ಸಾವಿರ ಲೀಗಳನ್ನು ಕ್ರಮಿಸಿ (ಒಂದು ಲೀ ಅಂದ್ರೆ ಅರ್ಧ ಕಿ.ಮೀ. ಸಾವಿರ ಲೀ ಅಂದ್ರೆ ತುಂಬಾ ದೂರದಿಂದ ಅಂದ್ಕೊಳ್ಳಿ) ಅಲ್ಲಿಗೆ ಬಂದವಳು. ಗಾನ್‌ಸು ಪ್ರಾಂತದಿಂದ ಬಂದಿದಾಳೆ. ರೈಲು, ಬಸ್ಸು, ಕಾಲುದಾರಿಗಳನ್ನು ಕ್ರಮಿಸಿದಾಳೆ. ಅಸಂಖ್ಯ ಗುಡ್ಡಬೆಟ್ಟಗಳನ್ನು ಹತ್ತಿ ಇಳಿದವಳು. ಗುಂಡಿ, ಗುದುಕಲುಗಳನ್ನು ಹಾರಿದವಳು. ಮಗಳನ್ನು ಎಷ್ಟೋ ಸಲ ಹೊತ್ತುಕೊಂಡೇ ನಡೆದವಳು. ಈಗ ಈ ಕಾರ್ಮಿಕ ಶಿಬಿರದಲ್ಲಿ ಖೈದಿಯಾಗಿರೋ ತನ್ನ ಗಂಡನನ್ನು ನೋಡಲು ಸೇರಿದ್ದಾಳೆ.

ಈಗ ಎಲ್ಲರಿಗೂ ಆಕೆ ಕಂಡಿದ್ದಾಳೆ. ಅವಳಿಗಿಂತ ಅವಳ ಬ್ಯಾಗೇ ಹೆಚ್ಚು ಆಕರ್ಷಣೆ ಹುಟ್ಟಿಸಿದೆ. ಅದರಲ್ಲಿ ಖಂಡಿತ ತಿನ್ನೋದಕ್ಕೆ ಏನೋ ಇದೆ. ಜೊಲ್ಲು ಸುರಿಸುತ್ತ ಕೆಲವರು ಮಾತಾಡಿಕೊಂಡರು: 'ಯಾರ ಕುಟುಂಬ ಇದು? ಇವತ್ತು ಯಾರು ಅಷ್ಟು ಅದೃಷ್ಟವಂತರು?'

ಅಂಥ ದೊಡ್ಡ ಚೀಲವಲ್ಲ. ಹೆಚ್ಚೆಂದರೆ ಒಬ್ಬರಿಗೆ ಬೇಕಾದಷ್ಟು ಆಹಾರ ಇರಬಹುದು. ಅವಳು ಮತ್ತು ಅವಳ ಮಗಳು ಒಂದು ವರ್ಷದಿಂದ ಉಳಿಸಿಕೊಂಡು ಬಂದ ಪಡಿತರದ ಪ್ರಮಾಣ ಅಷ್ಟೇ ಅಗಬಹುದು.

ಎಲ್ಲರೂ ನೋಡ್ತಿದಾರೆ ಎಂದು ಗೊತ್ತಾದ ಕೂಡಲೇ ಅವಳು ಮುಖ ಮುಚ್ಚಿಕೊಂಡು ಮಗಳ ಕೈ ಹಿಡಿದಳು. ಮಗಳು ಮಾತ್ರ ನಮ್ಮತ್ತ ಕುತೂಹಲದಿಂದ ನೋಡ್ತಿದಾಳೆ. ಅವಳು ಖಂಡಿತ ಕೃಷಿಕಳಲ್ಲ. ಎಲ್ಲೋ ಶಿಕ್ಷಕಿಯಾಗಿರಬೇಕು, ಅಥವಾ ಲೆಕ್ಕಿಗಳಾಗಿರಬೇಕು. ಅವಳ ಮುಖ ಮಾತ್ರ ಪೂರಾ ಕಾಣಲೇ ಇಲ್ಲ.

ಅಂಚೆಯವನು ಅವಳ ಹತ್ರ ಮಾತಾಡಿದವನು 'ಎಲ್ಲಿ ನಿಮ್ಮ ತಂಡನಾಯಕ?' ಎಂದು ನಮ್ಮತ್ತ ಕಿರುಚಿದ. 'ಅಲ್ಲಿ, ಅಲ್ಲಿ!' ಎಲ್ಲರೂ ತೋರಿಸಿದ್ದೇ. ತಂಡನಾಯಕ ಎಲ್ಲಿರ್ತಾನೆ ಅಂತ ಎಲ್ಲರಿಗೂ ಗೊತ್ತಿದ್ದೇ ಇರುತ್ತೆ.

ಇಲಿಗೆ ಬೆಕ್ಕು ಎಲ್ಲಿದೆ ಆಂತ ಗೊತ್ತಿರಲ್ವೆ?

ಸರಿ, ನಾವು ಬೆರಳು ತೋರಿಸಿದತ್ತ ಅಂಚೆಯವ ನಡೆದ. ಕೆಲಸ ನಡೆಯೋ ಹೊಲಕ್ಕೆ ಭೇಟಿ ಮಾಡಲು ಯಾರನ್ನೂ ಬಿಡಲ್ಲ. ಅದು ಕಾರ್ಮಿಕ ಸುಧಾರಣಾ ವ್ಯವಸ್ಥೆಗೆ

ವಿರುದ್ಧ. ಅಂಚೆಯವನ ಮಾತು ಕೇಳಿದ್ದೇ ತಂಡನಾಯಕ ಆ ಕಾರ್ಮಿಕನ ಹೆಸರನ್ನು ಕೂಗಿದ. ಕೊನೆಗೂ ಆ ಹೆಸರಿನ ಖೈದಿ ನಮ್ಮ ಗುಂಪಿನಿಂದ ಹೊರಬಂದು ನಾಲೆಯನ್ನು ಹತ್ತತೊಡಗಿದ. ಯಾರೋ ದಾರ ಕಟ್ಟಿ ಆಡಿಸ್ತಾ ಇರೋ ಸೂತ್ರದ ಗೊಂಬೆ ಥರ ಆ ತೆಳುದೇಹ ನಾಲೆಯನ್ನು ಹತ್ತಿದ್ದನ್ನು ನಾನು ಮರೆಯಕ್ಕಾಗುತ್ತ ಹೇಳಿ? ಗೊಂಬೆ ಥರ ಪದೇ ಪದೇ ತಲೆಯನ್ನು ತಿರುಗಿಸಿ ನಮ್ಮತ್ತ ನೋಡ್ತಿದ್ದ ಮಹಾರಾಯ. ಅವನ ನಿಲುವು, ಚಹರೆ, ಎಲ್ಲದರಿಂದ ಆತ ಆ ಯುವತಿಗೆ ಹೇಳಿ ಮಾಡಿಸಿದ ಜೋಡಿಯಲ್ಲ ಅನ್ನಿಸ್ತಿತ್ತು.

ಅವಳು ಅಲ್ಲಿ ಚೀಲವನ್ನು ಬಿಸಿಲಿಗೆ ಅಡ್ಡ ಹಿಡಿದು ಅವನು ಬರೋದನ್ನೇ ಕಾಯ್ತಿದಾಳೆ. ಆ ಚೀಲ ಅದುರೋದೇ ಅವಳ ಕಾತರಕ್ಕೆ ನಿದರ್ಶನವಾಗಿ ಕಾಣ್ತಾ ಇದೆ. ಕೊನೆಗೂ ಆತ ಅಲ್ಲಿಗೆ ಹೋದಾಗ ಆತ ಹೆಂಡತಿಯನ್ನು ಪ್ರೀತಿಯಿಂದ ನೋಡಲಿಲ್ಲ, ಅಥವಾ ಮಗಳನ್ನು ಅಪ್ಪಿಕೊಳ್ಳಲೂ ಇಲ್ಲ. ನಾನು ಉಳಿದೆಲ್ಲರಿಗಿಂತ ಅವರಿಗೆ ಹತ್ತಿರದಲ್ಲಿ ಇದ್ದವ. ಅವಳು ಅವನ ಹತ್ರ ನಡುಗುವ ದನಿಯಿಂದ ಮಾತಾಡ್ತಿದಾಳೆ. ಅವಳಿಗೆ ಮಾತಾಡೋದಕ್ಕೆ ಬಿಡದೆ ಆತ ಅವಳ ಚೀಲವನ್ನು ಕಿತ್ಕೊಂಡಿದಾನೆ. ದರೋಡೆ ಮಾಡೋ ಥರ. ಮತ್ತೆ ನಾಲೆಯನ್ನು ಪೂರಾ ಹತ್ತಿದಾನೆ.

ಮೇಲೆ ಇರೋ ಒಂದು ಚಿಕ್ಕ ಮರ ನೆರಳು ಕೊಡುತ್ತೆ. ಆತ ನೆರಳನ್ನು ಹುಡುಕಲೂ ಆಗದವನಂತೆ ಅಲ್ಲಿಗೆ ಹೋಗಿ ಬಿಸಿಲಿನಲ್ಲೇ ಕುಕ್ಕರಿಸಿದ. ಚೀಲವನ್ನು ಬಾಣ ಬಿಡೋ ಹಾಗೆ ಆಚೀಚೆ ಎಳೆದು ಹರಿದ. ಒಳಗೆ ಇದ್ದ ಆಹಾರಾನ ಬಕಬಕ ತಿನ್ನೋದಕ್ಕೆ ಶುರು ಮಾಡಿದ. ಎಲ್ಲವನ್ನೂ ಸೀದಾ ಬಾಯಿಗೆ ತುರುಕ್ತಿದಾನೆ.

ನನ್ನ ಮಾನವತೆಯನ್ನು ಉದ್ದೀಪಿಸಬಹುದು ಅಂತ ತಿಳ್ಕೊಂಡಿದ್ದ ಈ ತಿನ್ನುವ ಕ್ರಿಯೆ ಕೇವಲ ಹತ್ತು ಸೆಕೆಂಡಿನಲ್ಲಿ ಮುಗಿದುಹೋಯ್ತು. ನಿರಾಶೆಯಿಂದ ನಾನು ಹುಲ್ಲಿನತ್ತ ತಿರುಗಿದೆ. ಯಾರೋ ತಿನ್ನೋದನ್ನು ನೀವು ನೋಡೋದು ಅಂದ್ರೆ ಸರೀನಾ? ನಿಮ್ಮ ಹೆಂಡತಿಯನ್ನು ಒಂದು ಗೂಳಿ ಹೆದರಿಸೋವಾಗ ನಿಮ್ಮಲ್ಲಿ ಧೈರ್ಯವೇ ಇಲ್ಲದಿರೋ ಕ್ಷಣಕ್ಕಿಂತ ಇದು ಕೆಟ್ಟದೇನಲ್ಲ. ಝೂ ಝುನ್‌ಬಾಂಗ್ ಕೂಡಾ ನನ್ನ ಹತ್ತಿರವೇ ಕೆಲಸ ಮಾಡ್ತಿದ್ದವನು. 'ಹಾಳಾಗ್ಲಿ! ಈ ಮನುಷ್ಯ ಬ್ರೆಡ್ ತಿಂತಿದಾನೆ!.'

ಒಂದಷ್ಟು ಹೊತ್ತಿನ ನಂತರ ಮತ್ತೆ ಹೇಳಿದ:'ಅಹ್, ತಾಯಿಗ್ಗಂಡ ನನ್ಮಗ ! ಅವಳು ಅವನಿಗೆ ಮೊಟ್ಟೆ ತರ್ತಿದಾಳೆ !' ಅವನ ನನ್ನ ಬಾಯಲ್ಲಿ ಜೊಲ್ಲು ಹರಿಯುತ್ತಿದೆ.

ಆ ಯುವತಿ ನನಗೆ ಆದರ್ಶ ಹೆಣ್ಣಿನ ಹಾಗೆ ಕಾಣ್ತಿದಾಳೆ. ಗಂಡನ ಬಗ್ಗೆ ಎಷ್ಟು ಕಾಳಜಿ. ಆಕೆ ಕೆಳಗೇ ಮಗಳನ್ನು ತೊಡೆ ಮೇಲೆ ಮಲಗಿಸಿಕೊಂಡು ಮುಖ ತಿರುಗಿಸಿದಾಳೆ. ಬಹುಶಃ ಅಳ್ತಾ ಇದಾಳೆ. ಬಹುಶಃ ಮಗಳಿಗೆ ಇಡೀ ದಿನ ತಿನ್ನೋದಕ್ಕೆ ಸಿಕ್ಕಿಲ್ಲ. ಅವಳು ಅಪ್ಪನನ್ನೇ ನೋಡ್ತಿದಾಳೆ. ಅರೆ, ಮಗಳನ್ನು ತಾಯಿ ಬಲವಂತವಾಗಿ ಹಿಡಿದಿಟ್ಟಿರೋ ಹಾಗೆ ಕಾಣ್ತಿದೆ...

ನಾನು ಕಲ್ಲಂಗಡಿ ಹಣ್ಣು ಮೆದ್ದ ಥರಾನೇ ಆತ ತಿಂತಾ ಇದಾನೆ. ಮುಖದಲ್ಲಿ ಬೆವರು ಇಳೀತಿದೆ. ಗಂಟಲಿನಲ್ಲಿ ಆಹಾರ ಸಿಕ್ಕಿಕೊಂಡಾಗ ಕೆಮ್ಮಿದಾನೆ.

ಕೆಳಗೆ ಅವಳು ಸದ್ದಿಲ್ಲದೆ ಅಳ್ತಾ ಇದಾಳೆ.

ಮೇಲೆ ಆತ ಸದ್ದಿಲ್ಲದೆ ತಿಂತಾ ಇದಾನೆ.

ಝೂ ಕೂಡಾ ಬೇಜಾರಿನಿಂದ ಮತ್ತೆ ಹುಲ್ಲು ಕತ್ತರಿಸ್ತಿದಾನೆ.

ಸುಮಾರು ನಲ್ವತ್ತು ನಿಮಿಷ ಆಗಿರಬೇಕು. ಯಾರಿಗೂ ಸಿಕ್ಕಿಕೊಳ್ಳದೆ ಈ ಗೆಣಸನ್ನು ಬ್ಯಾರಕಿಗೆ ಸಾಗಿಸೋ ಬಗೆಯನ್ನೇ ನಾನು ಯೋಚಿಸ್ತಿದ್ದೆ.

ಅಷ್ಟು ಹೊತ್ತಿಗೆ ಮೇಲಿನಿಂದ ಎದೆ ನಡುಗೋ ಹಾಗೆ ಚೀರಾಟ.

ಕಾರ್ಮಿಕ ಶಿಬಿರದಲ್ಲಿ ಏನೇನೋ ಕೆಟ್ಟ ಘಟನೆಗಳು ನಡೆದಿವೆ. ಆದ್ರೆ ನನಗೆ ಈ ಕೂಗು ಮಾತ್ರ ಇಡೀ ದೇಹಾನೇ ನಡುಗಿಸ್ತು. ತಲೆ ಎತ್ತಿ ನೋಡಿದೆವು.

ಮಗಳು ಅಲ್ಲಿ ನಿಂತು ಬಿಕ್ಕಳಿಸ್ತಿದಾಳೆ.

ಯುವತಿ ಕಾಣಿಸ್ತಿಲ್ಲ.

ಆ ಖೈದೀನೂ ಕಾಣಿಸ್ತಿಲ್ಲ.

ಹಾಗೆ ನಾವು ಓಡಿಹೋಗಿ ಏನಾಯ್ತು ಅಂತ ನೋಡಕ್ಕೂ ಆಗಲ್ಲ. ಸರಿ ತಂಡನಾಯಕ ಇದ್ದ ಕಡೆಗೆ ನೋಡಿದೆವು. ಅವನೂ ಹಾರುತ್ತ ಕಿರುಚಾಟದ ಸ್ಥಳಕ್ಕೆ ಬಂದ. ಹರಿಯುತ್ತಿರೋ ನೀರಿನತ್ತ ನೋಡ್ತ ಆತ ಬಿಗುವಿನಿಂದ ನಿಂತಿದ್ದು ಕಾಣಿಸ್ತು.

ಆತ ಕೂಡಲೇ ಇನ್ನೊಬ್ಬ ತಂಡನಾಯಕನನ್ನು ಕರೆದ. ಅವನೂ ಹಾರಿಬಿದ್ದು ಬಂದ. ಇಬ್ಬರೂ ಏನೋ ಮಾತಾಡಿಕೊಂಡು ಕೆಳಗಿದ್ದ ಖೈದಿಗಳಲ್ಲಿ ಇನ್ನೂ ಮೂಳೆ ಮುರಿಯದ ನಾಲ್ವರನ್ನು ಹೆಸರು ಹಿಡಿದು ಕರೆದು. ಹಾಗೇ ನಾಲ್ವರು ಮಹಿಳಾ ಖೈದಿಗಳನ್ನೂ ಕರೆದರು.

ನನಗೆ ಉಸಿರಾಡೋದಕ್ಕೇ ಮರೆತುಹೋದ ಹಾಗಾಯ್ತು. ಕೆಮ್ಮಲೂ ಇಲ್ಲ. ನಾನು ಆ ಹೆಸರುಗಳನ್ನು ಕಿರುಚಿದೆ. ಅವರೆಲ್ಲ ಖೈದಿಗಳ ಗುಂಪಿನಿಂದ ಹೊರಬಂದರು. ಇನ್ನೊಂದು ಬದಿಯಲ್ಲಿ ನಾಲೆಯಲ್ಲಿ ಹರೀತಿರೋ ನೀರನ್ನು ನೋಡಿದ ಅವರೆಲ್ಲರೂ ಅಚ್ಚರಿಯಿಂದ 'ಓಹ್!' ಎನ್ನುತ್ತಿದ್ದರು.

'ಏನು ನೋಡ್ತಿದೀರ? ನಡೀರಿ!' ಒಬ್ಬ ತಂಡನಾಯಕ ಆದೇಶ ನೀಡಿದ.

ಎಲ್ಲರೂ ಕೆಳಗೆ ಇಳಿದು ಯುವತಿಯ ಕಾಲು ಕೈ ಹಿಡಿದರು. ಖೈದಿಯ ಕಾಲು ಕೈ ಹಿಡಿದರು. ಮೇಲೆತ್ತಿದರು.

'ನಮಗೆ ಇನ್ನೂ ಒಂದು ಹೆಚ್ಚುವರಿ ಕೆಲಸ ಮಾಡುವ ಶಿಕ್ಷೆ' ಎಂದು ದಿನಚರಿಯಲ್ಲಿ ಬರೆದಿದ್ದೇನೆ. ಆದರೆ ನಡೆದ ಉಳಿದ ಘಟನೆಗಳನ್ನು ದಾಖಲಿಸಿಲ್ಲ.

ಈಗ ಓದಿ:

ಊಟ ಮುಗಿಸಿದ ಮರುಕ್ಷಣವೇ ಆ ಖೈದಿ ತನ್ನ ಕುಡುಗೋಲಿನಿಂದ ಮಣಿಕಟ್ಟುಗಳನ್ನು ಕೊಯ್ದುಕೊಂಡಿದ್ದ. ಸೀದಾ ನಾಲೆಯ ಬದುವಿಗೆ ಬಿದ್ದ. ಅರೆಕ್ಷಣದಲ್ಲಿ ಈ ಘಟನೆ ನಡೆದಿತ್ತು. ಬರೀ ಚೀಲವೊಂದನ್ನೇ ನೋಡಿದ ಯುವತಿ ಬಹುಶಃ ಗಂಡ ಶೌಚಕ್ಕೆ

ಹೋಗಿರಬಹುದು ಅಂದ್ಕೊಂಡಿದ್ದಳು. ಅಷ್ಟು ತಿಂದಮೇಲೆ ಶೌಚಕ್ಕೆ ಹೋಗಲೇಬೇಕು ಬಿಡಿ.

ಸ್ವಲ್ಪ ಹೊತ್ತಿನ ಮೇಲೆ ಆಕೆ ಮಗಳನ್ನು ಕರೆದುಕೊಂಡು ನಾಲೆಯನ್ನು ಹತ್ತಿದಳು. ಈಗ ಗಂಡ ಹೊಟ್ಟೆ ತುಂಬಾ ತಿಂದು ಆರಾಮಾಗಿದಾನೆ, ನಾಲ್ಕು ಮಾತಾಡಬಹುದು ಎಂದುಕೊಂಡಿರಬಹುದು.

ನಾಲೆಯ ಆ ಬದಿಯಲ್ಲಿ ಆಕೆ ನೋಡಿದ್ದು: ಗಂಡ ನಾಲೆಯ ಬದುವಿನಲ್ಲಿ ತಲೆಕೆಳಗಾಗಿ ಬಿದ್ದಿದಾನೆ. ಹಸಿರಕ್ತ ಅವನ ದೇಹದಿಂದ ನಾಲೆಯಲ್ಲಿ ಹರಿದು ನೀರಿಗೆ ಸೇರ್ತಾ ಇದೆ. ನೀರು ಕಡುಗೆಂಪು ಬಣ್ಣಕ್ಕೆ ತಿರುಗಿದೆ. ಆ ನದಿಯ ಮೂಲವೇ ಕೆಂಪುಬಣ್ಣದ್ದು ಅನ್ನೋ ಹಾಗೆ ಕೆಂಪಾಗಿದೆ.

ಅವನನ್ನು ನೋಡಿ ಕಿರುಚಿದ ಆ ಯುವತಿ ಹಾಗೇ ಅವನ ಪಕ್ಕದಲ್ಲಿ ಕುಸಿದಿದಾಳೆ. ಕೊನೆ ಉಸಿರೆಳೆದಿದಾಳೆ.

ಯಾಕೆ ಆತ ಆತ್ಮಹತ್ಯೆ ಮಾಡಿಕೊಂಡ? ಕಾರ್ಮಿಕ ಶಿಬಿರದ ಬಗ್ಗೆ ಗೊತ್ತಿಲ್ಲದವರು ಆತ ಹಸಿವಿನಿಂದ ಸತ್ತ ಎನ್ನಬಹುದು. ಹೊಟ್ಟೆ ತುಂಬಿದ ಮೇಲೆ ಆತನಿಗೆ ಹೆಂಡತಿ, ಮಗಳಿಗೆ ಕೊಡಲೇ ಇಲ್ಲವಲ್ಲ ಅಂತನ್ನಿಸಿ ಸತ್ತ ಎನ್ನಬಹುದು. ಈ ವಾದಕ್ಕೆ ತಳ ಬುಡ ಇಲ್ಲ. ಕಾರ್ಮಿಕ ಶಿಬಿರಗಳಲ್ಲಿ ಅತಿಥಿಗಳಿಗೂ ಆಹಾರ ಸಿಗುತ್ತೆ.

ಆದ್ರೆ ಯುವತಿ, ಮಗಳು ಕೂಡಾ ಹಸಿದಿದ್ದರು ಅನ್ನೋದೇನೂ ಸುಳ್ಳಲ್ಲ. ಆತ ಹೆಂಡತಿಗೆ ಶಿಕ್ಷೆ ನೀಡೋ ಥರ ಆತ್ಮಹತ್ಯೆ ಮಾಡಿಕೊಂಡ ಅಂತಾರೆ. ಇದೂ ಸರಿಯಲ್ಲ. ಸಾವಿರ ಲೀಗಳನ್ನು ದಾಟಿಬಂದ ಅಂಥ ಹೆಂಡತಿಯನ್ನು ಆತ ಶಿಕ್ಷಿಸೋದಕ್ಕೆ ಕಾರಣವೇ ಇಲ್ಲ.

ತಾನು ಸತ್ತುಹೋದ್ರೆ ಅವಳು ಬೇರೆಯವನನ್ನು ಮದುವೆಯಾಗಿ ಸುಖವಾಗಿರಬಹುದು ಎಂದು ಆತ ಯೋಚಿಸಿರಬಹುದೆ? ಈತ ಒಮ್ಮೆ ತನ್ನ ಸಹಖೈದಿ ಹತ್ರ 'ನಾನು ಹಸಿವಿನಿಂದ ಸಾಯೋ ದೆವ್ವವಾಗೋ ಬದಲು ಹೊಟ್ಟೆ ಬಿರಿದು ಸತ್ತ ದೆವ್ವವಾಗ್ತೇನೆ. ಬೌದ್ಧ ಧರ್ಮದಲ್ಲಿ ಪುನರ್ಜನ್ಮ ಪಡೆಯಲಿಕ್ಕೆ ಆರು ಬಗೆಗಳಿವೆ: ನರಕ, ಹಸಿವಿನ ದೆವ್ವ, ಪ್ರಾಣಿಗಳು, ಅಸುರತ್ವ, ಮನುಷ್ಯರು ಮತ್ತು ಸ್ವರ್ಗ. ಇದರಲ್ಲಿ ಹಸಿವಿನ ದೆವ್ವವಾಗೋದು ತೀರಾ ಕನಿಷ್ಠ' ಅಂದಿದ್ನಂತೆ.

ಬಹುಶಃ ಅವನಿಗೆ ಯೋಚನೆ ಮಾಡೋ ಶಕ್ತಿ ಇತ್ತು. ಆದರೆ ಭಾವನೆಗಳನ್ನು ನಿಯಂತ್ರಿಸಲಾಗಲಿಲ್ಲ. ಅವನಿಗೆ ಈ ಮನುಕುಲದ ಬಗ್ಗೆ, ಇಡೀ ಜಗತ್ತಿನ ಬಗ್ಗೆ ಅಥವಾ ತಾನು ಪ್ರತಿಪಾದಿಸ್ತಿದ್ದ ವಿಷಯಗಳ ಬಗ್ಗೆ ಲಕ್ಷ್ಯ ಇರಲಿಲ್ಲ. ತಿನ್ನೋದಕ್ಕೂ ಅವನಲ್ಲಿ ಆಸಕ್ತಿ ಇರಲಿಲ್ಲ. ಇದ್ದಿದ್ದರೆ ಆತ ತಿಂದು ಸಾಯ್ತಾ ಇರಲಿಲ್ಲ.

ನಮ್ಮ ಹದಿನೆಂಟು ಜನರ ತಂಡಕ್ಕೆ ಅವತ್ತು ಇಡೀ ರಾತ್ರಿ ಹುಲ್ಲು ಕತ್ತರಿಸೋ ಶಿಕ್ಷೆ. ನನಗೆ ಗೆಣಸನ್ನು ರಾತ್ರಿ ಯಾರಿಗೂ ಕಾಣದ ಹಾಗೆ ಒಯ್ಯಬಹುದಲ್ಲ ಎಂಬ ಸಡಗರ.

ನಾನು ಆ ಸಂಜೆ ನಿಧಾನವಾಗಿ ನಾಲೆಯ ಮೇಲಕ್ಕೆ ತೆವಳಿಕೊಂಡೇ ಹೋದೆ. ನನ್ನನ್ನು ಆವರಿಸಿದ್ದು ಕಚ್ಚಾ ರಕ್ತದ ವಾಸನೆ. ನೀರು ಇನ್ನೂ ಜುಳುಜುಳು ಹರಿಯುತ್ತಿದೆ. ಅದರ

ದನಿಯಲ್ಲಿ ಪ್ರತಿಕ್ರಾಂತಿ ಮಾತುಗಳೇನೂ ಕೇಳಿಸಲಿಲ್ಲ.

ಆ ಸಣ್ಣ ಕಪ್ಪು – ಬಿಳಿ ಚೀಲ ಕಾಣುತ್ತಿಲ್ಲ. ನಾವೆಲ್ಲರೂ ಹುಡುಕಿದೆವು. ಸಿಗಲಿಲ್ಲ. ಬಹುಶಃ ಯಾರೋ ಖೈದಿ ಅದನ್ನು ಎತ್ತಿದಾನೆ.


ಯಾವುದಾದರೂ ಚಿಕ್ಕ ಘಟನೆ ಒಂದು ಮಗುವಿನ ಜೀವನದ ಮೇಲೆ ಪ್ರಭಾವ ಬೀರಬಹುದು ಅಂತ ಮನಶ್ಶಾಸ್ತ್ರಜ್ಞರು ಹೇಳ್ತಾರೆ. ಜಾಣ ಕಣ್ಣುಗಳ ಆ ಪುಟ್ಟ ಮಗಳಿಗೆ ಹೇಗಾಗಿರಬಹುದು? ಹೆಬ್ಬೆರಳು ಚೀಪುತ್ತ ನಿಂತಿದ್ದ ಆ ಹುಡುಗಿ ಬಹುಶಃ ಅಪ್ಪ ತನಗೆ ತಿನ್ನಲಿಕ್ಕೆ ಏನಾದ್ರೂ ಚೂರುಪಾರು ಕೊಡಬಹುದು ಅಂತಲೋ... ಪ್ರೀತಿಯ ಮಾತುಗಳಿಂದ ರಮಿಸ್ತಾನೆ ಆಂತಲೋ ಯೋಚಿಸ್ತಿದ್ದಿರಬಹುದು.

ಆದರೆ ಕೊನೆಗೆ ಅವಳು ಕಂಡದ್ದು ಮಾತ್ರ ನದಿಯಾಗಿ ಹರಿಯುತ್ತಿದ್ದ ಅಪ್ಪನ ರಕ್ತ.

ಅವಳು ಈಗ ಎಲ್ಲಿರಬಹುದು ? ಅವಳು ಈ ಕಾಲವನ್ನು ಹೇಗೆ ಕಳೆದಿರಬಹುದು? ಅವಳು ಈ ದಿನಗಳಲ್ಲಿ ಹೇಗೆ ಉಳಿದುಕೊಂಡು ಬಂದಿರಬಹುದು?

**ರಕ್ತದ ಬಣ್ಣ ನಿನ್ನ ಮನಸ್ಸಿನಿಂದ ದೂರವಾಗಿದೆಯೆ?**<br>
**ನೀನು ಜೀವಂತವಾಗಿ ಇದ್ದರೆ ಬಹುಶಃ ನಿನಗೆ ಮೂವತ್ತು ವರ್ಷ ವಯಸ್ಸು.**<br>
**ಅಕಸ್ಮಾತ್ ನೀನೇನಾದ್ರೂ ಈ ಪುಸ್ತಕ ಓದಿದರೆ...**<br>
**ನಾನು ನಿನಗೆ ಇಷ್ಟು ಮಾತನ್ನು ಮಾತ್ರ ಹೇಳೋದಕ್ಕೆ ಬಯಸ್ತೇನೆ...**<br>
**ನೀನು ಯಾವಾಗ್ಲೂ ಖುಷಿಯಾಗಿರೋ ಹಾಗೆ**<br>
**ನಿನಗಾಗಿ ಏನೆಲ್ಲವನ್ನೂ ಮಾಡಲು ನಾನು ಇಷ್ಟಪಡ್ತೇನೆ.**





# ಹುಲ್ಲಿನ ಸಾರು



ಶಾಂಗ್ ಶಾನ್‌ಲಿಯಾಂಗ್!
ಸೆರೆಮನೆ ಸೇರಿದ್ದು
21ರ ಹರೆಯದಲ್ಲಿ.
ಅಪರಾಧ? ಕವನ ಬರೆದದ್ದು.
1936ರಲ್ಲಿ ಹುಟ್ಟಿ ಹರೆಯದಲ್ಲೇ
ತನ್ನ ದೇಶದ್ದೇ ಕಾರ್ಮಿಕ ಶಿಬಿರ
ಸೇರಿ 23 ವರ್ಷಗಳನ್ನು ಕಳೆದ
ಶಾಂಗ್ ಗೀಚುತ್ತಿದ್ದ ದಿನಚರಿ
ಟಿಪ್ಪಣಿ ಆಧಾರಿತ ಪುಸ್ತಕವೇ
'ಗ್ರಾಸ್ ಸೂಪ್'. ಹುಲ್ಲಿನ ಸಾರು.
ಅದೇ ಅವರ ಮತ್ತು ಸಹಖೈದಿಗಳ
ದಿನದ ಆಹಾರ!
ಇಂಥ ಒಟ್ಟು ಏಳು ಮಹಾನ್
ಕೃತಿಗಳನ್ನು ಬರೆದ ಶಾಂಗ್
2014ರಲ್ಲಿ ತೀರಿಕೊಂಡರು.

FREE BOOK CULTURE

ಮಿತ್ರಮಾಧ್ಯಮ

ಮೂಲ ಚೀನೀಯಿಂದ ಇಂಗ್ಲಿಶಿಗೆ
**ಮಾರ್ಥಾ ಅವೇರಿ**

ಕನ್ನಡಕ್ಕೆ
**ಬೇಳೂರು ಸುದರ್ಶನ**